
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

30 ಸೆಪ್ಟೆಂಬರ್ 2015 ಪುಟ 20 ರೂ. 15/-




ಪೂರ್ವ ಭಾಷಿಗೆ ಶರಣು





ಮುರಿದ ಮನೆ ಹರಿದ ಮನ

ನಿವಾಸ್‌ಗೆ ೈಗಳ ಪ್ರಸಾದ!



ರಾಘು ಬೆನ್ನಿಗೆ ನಿಂತರೆ ಕಾಗೋಡು?






ನೇಣಾಗಲಿದೆ ನೇತ್ರಾವತಿ ತಿರುವು ಯೋಜನೆ

ಬರ, ಪರಿಹಾರ ಮತ್ತು ಸರ್ಕಾರಗಳ ನಾಟಕಗ

ಅಂಚಿನಿಂದ...



ಡಾ.ವಾಸು ಎಚ್.ವಿ.

ಈ ವರ್ಷದ ಬರ ಸಾಮಾನ್ಯವಾದ ಬರವಲ್ಲ. ವರದಿಗಳ ಪ್ರಕಾರ, ಕಳೆದ ನೂರು ವರ್ಷಗಳಲ್ಲಿ ಸತತ ಎರಡು ವರ್ಷಗಳ ಬರ ಇದು ಕೇವಲ ನಾಲ್ಕನೇ ಸಾರಿ ಮತ್ತು ಕಳೆದ 10 ವರ್ಷಗಳಲ್ಲಿ ಈ ವರ್ಷವೇ ಜಲಾಶಯಗಳಲ್ಲಿ ಅತ್ಯಂತ ಕಡಿಮೆ ನೀರು ಶೇಖರಣೆ ಆಗಿರುವುದು. ಇದು ಕೇವಲ ಒಂದು ರಾಜ್ಯವನ್ನಷ್ಟೇ ವ್ಯಾಪಿಸಿರುವ ಬರವೂ ಅಲ್ಲ. ಹೀಗಾಗಿ, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಎಷ್ಟರಮಟ್ಟಿಗೆ ಕ್ರಿಯಾಶೀಲವಾಗಿದೆ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ಈ ಲೇಖನವನ್ನು ಬರೆಯುತ್ತಿರುವ ಸಂದರ್ಭದಲ್ಲೇ ಕರ್ನಾಟಕಕ್ಕೆ ಕೇಂದ್ರ ಸರ್ಕಾರದ ತಂಡಗಳು ವಿವಿಧ ಜಿಲ್ಲೆಗಳಿಗೆ ಭೇಟಿ ಕೊಟ್ಟಿವೆ. ಕೇಂದ್ರ ಕೃಷಿ ಖಾತೆ ಜಂಟಿ ಕಾರ್ಯದರ್ಶಿ ಆರ್.ಬಿ.ಸಿನ್ಹಾ ನೇತೃತ್ವದಲ್ಲಿ ಬಂದಿರುವ ಈ ತಂಡಗಳು ಬರಪೀಡಿತವಾಗಿರುವ 18 ಜಿಲ್ಲೆಗಳಲ್ಲಿ ಪ್ರವಾಸ ನಡೆಸಲಿವೆ.


ಈ ಭೇಟಿಗೆ ಎರಡು ದಿನಗಳ ಮುನ್ನ ದೇಶದ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಭಾರೀ ದೊಡ್ಡ ಬಂಡವಾಳಿಗರ ಸಭೆಯನ್ನು ಕರೆದಿದ್ದರು. ಮೋದಿ ಗೆದ್ದರೆ ದೇಶ ಸ್ವರ್ಗವಾಗಿಬಿಡುತ್ತದೆ ಎಂಬ ಭ್ರಮೆ ಕಳಚಿದ್ದು ಮಾತ್ರವಲ್ಲ, ಬಂಡವಾಳಶಾಹಿಗಳ ಅಭಿವೃದ್ಧಿಯ ಮಾನದಂಡದ ಪ್ರಕಾರವೂ (ಡಾಲರ್ ಎದುರು ರೂ.ನ ಬೆಲೆ, ಸೆನ್ಸೆಕ್ಸ್‌ನ ಸೂಚ್ಯಂಕ) ದೇಶ ಹಿಂದಕ್ಕೆ ಸರಿಯುತ್ತಿದೆ ಎಂಬ ವಾಸ್ತವವು ಈ ಸಭೆಯನ್ನು ಅನಿವಾರ್ಯವಾಗಿಸಿತ್ತು. ಆದರೆ, ಕಳೆದ ಜೂನ್‌ನಿಂದ ಇಲ್ಲಿಯವರೆಗೆ ಬರ ಪರಿಸ್ಥಿತಿಯ ಕುರಿತು ನರೇಂದ್ರ ಮೋದಿಯವರು ಒಂದೇ ಒಂದು ಉನ್ನತ ಮಟ್ಟದ ಸಭೆಯನ್ನೂ ನಡೆಸಿಲ್ಲ. ಜೂನ್‌ನಲ್ಲಾಗಲೇ ಹವಾಮಾನ ಇಲಾಖೆಯು ಬರಪರಿಸ್ಥಿತಿಯು ಬರಬಹುದೆಂಬ ಸ್ಪಷ್ಟ ಮುನ್ಸೂಚನೆ ನೀಡಿತ್ತು! ಅದೀಗ ನಿಜವೂ ಆಗಿದೆ.

ಕರ್ನಾಟಕದ್ದೇ ಉದಾಹರಣೆ ನೋಡುವುದಾದರೆ, ರೈತರ ಆತ್ಮಹತ್ಯೆಗಳು ಈ ವರ್ಷ ಹಿಂದಿನ ಮೂರು ವರ್ಷಗಳಿಗಿಂತಲೂ ಹೆಚ್ಚಾಗಿದೆ. ಈ ಬರವು ಅದನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಹೀಗಾಗಿ ರಾಜ್ಯ ಸರ್ಕಾರವು 11,500 ಕೋಟಿ ರೂ. ಬೆಳೆ ನಷ್ಟ ಉಂಟಾಗಿದ್ದು, ತಕ್ಷಣ 3,000 ಕೋಟಿ ರೂ. ನೆರವು ನೀಡಬೇಕೆಂದು ಕೇಳಿತ್ತು. ಸಿದ್ದರಾಮಯ್ಯನವರ ನೇತೃತ್ವದ ಸರ್ವಪಕ್ಷ ನಿಯೋಗವೇ ಈ ಬೇಡಿಕೆ ಸಲ್ಲಿಸಿತ್ತು.

ಕೇಂದ್ರ ಕೃಷಿ ಸಚಿವ ರಾಧಾ ಮೋಹನ್ ಸಿಂಗ್ ತನ್ನ ತವರು ರಾಜ್ಯವಾದ ಬಿಹಾರದ ಚುನಾವಣೆಗಳಲ್ಲಿ ವ್ಯಸ್ತರಾಗಿದ್ದಾರೆ. ಈ ಹಿನ್ನೆಲೆಯಲ್ಲೂ ಯಾವುದೇ ಸಮಗ್ರ ಪರಿಹಾರದ ಕುರಿತ ಸಭೆಗಳು ನಡೆದಿಲ್ಲ. ಇನ್ನು ರಾಜ್ಯ ಸರ್ಕಾರದ ಧುರೀಣರು ಬಿಬಿಎಂಪಿ ಮೇಯರ್ ಚುನಾವಣೆಯ ತಯಾರಿಯಲ್ಲಿ ವ್ಯಸ್ತರು. ಈ ಮಧ್ಯೆ ನಡೆದ 30 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಭೆಯಲ್ಲಿ 'ಬರ ಪರಿಹಾರದ ಕೆಲಸಗಳ ವಿಚಾರದಲ್ಲಿ ಏನಾದರೂ ಸಮಸ್ಯೆಯಾದರೆ, ಜಿಲ್ಲಾಧಿಕಾರಿಗಳೇ ಹೊಣೆ' ಎಂಬ 'ಕಟ್ಟುನಿಟ್ಟ'ನ ಸೂಚನೆಯನ್ನು ಮುಖ್ಯಮಂತ್ರಿ ಹೇಳಿದ್ದಾರೆ. ಒಂದು ಹೆಕ್ಟೇರ್ (ಎರಡೂವರೆ ಎಕರೆ) ಜಮೀನಿನಲ್ಲಿ ಬೆಳೆದ ಬೆಳೆ ನಷ್ಟಕ್ಕೆ 13,500 ರೂ. ಪರಿಹಾರವನ್ನು ದಯಪಾಲಿಸಿರುವ ಮುಖ್ಯಮಂತ್ರಿಗಳಿಗೆ ಕೃಷಿಗೆ ತಗಲುವ ಉತ್ಪಾದನಾ ವೆಚ್ಚದ ಕುರಿತು ಕನಿಷ್ಠ ಅರಿವೂ ಇಲ್ಲವೋ ಅಥವಾ ಅವರು ತಮಾಷೆ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಕನಿಷ್ಠ ಬಿತ್ತನೆಯ ಖರ್ಚೂ ಇದರಿಂದ ಹುಟ್ಟುವುದಿಲ್ಲ ಎಂಬ ಅರಿವು ಅವರಿಗೆ ಇರಬೇಕಿತ್ತು.

ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರವೇ ಇದೆ. ಅಲ್ಲಿನ ಮರಾಠಾವಾಡದಲ್ಲಿ ಈ ವರ್ಷವೊಂದರಲ್ಲೇ 600ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಾಡಿಕೆಗಿಂತ ಶೇ.40ರಷ್ಟು ಮಳೆಯಷ್ಟೇ ಬಿದ್ದಿದೆ. ಇದೇ ವರ್ಷದ ಆರಂಭದಲ್ಲಿ ಅಕಾಲಿಕ ಮಳೆಯಿಂದಾಗಿಯೂ ಅವರು ನಷ್ಟ ಅನುಭವಿಸಿದ್ದರು. ಈಗ ಕಳೆದ ಒಂದು ವಾರದಿಂದ ಬೀಳುತ್ತಿರುವ ಮಳೆಯಿಂದಲೂ ಹೆಚ್ಚಿನ ಭಾಗದ ಬೆಳೆಗಳಿಗೆ ಅಂತಹ ಅನುಕೂಲವೇನೂ ಆಗಿಲ್ಲ. 2014ರಲ್ಲೂ ಒಟ್ಟು ಶೇ.12ರಷ್ಟು ಮಳೆ ಕಡಿಮೆಯಾಗಿತ್ತು. ಹಾಗಿದ್ದರೂ -ಸರ್ಕಾರದ ಪ್ರಕಾರ- ಶೇ.2ರಷ್ಟು ಮಾತ್ರ ಉತ್ಪಾದನೆ ಕಡಿಮೆಯಾಗಿತ್ತು. ಆದರೆ, ಇನ್ನೂ ಕೆಲವು ವರದಿಗಳ ಪ್ರಕಾರ ಅದು ಶೇ.4.5ರಷ್ಟು ಕಡಿಮೆಯಾಗಿತ್ತು. ಉತ್ಪಾದನೆಯಲ್ಲಿ ಅಂತಹ ದೊಡ್ಡ ಏರುಪೇರು ಇಲ್ಲದಿದ್ದರೂ, ರೈತರಿಗೆ ಅತ್ಯುತ್ತಮ ಬೆಲೆಯೂ ಈ ವರ್ಷ ಸಿಕ್ಕಿಲ್ಲ.







ಬರೆಯ ಮೇಲೆ ಮತ್ತೆ ಮತ್ತೆ ಬರೆ ಎಳೆದಂತೆ ಬಂದಿರುವ ಈ ಬರದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ತೋರುತ್ತಿರುವ ನಿರ್ಲಕ್ಷ್ಯವು ಜನರನ್ನು ಹಳ್ಳಿಗಳಿಂದ ಭಾರೀ ಪ್ರಮಾಣದಲ್ಲಿ ಗುಳೆ ಏಳಿಸುವಂತೆ ಕಾಣುತ್ತಿದೆ. ಏಕೆಂದರೆ, ಬರ ಪರಿಹಾರದ ಬಗ್ಗೆ ಬಂದಿರುವ ಹೊಸ ಸುತ್ತೋಲೆಗಳು ಬರಕ್ಕಿಂತ ಭೀಕರವಾಗಿವೆ. ಸ್ವತಃ ಮೋದಿಯೇ ಹೇಳಿದ್ದು (ಮುದ್ರಾ ಬ್ಯಾಂಕ್‌ನ ಉದ್ಘಾಟನೆಯ ಸಂದರ್ಭದಲ್ಲಿ) ಬೆಳೆ ನಷ್ಟ ಪರಿಹಾರವನ್ನು ಶೇ.50ರಷ್ಟು ಹೆಚ್ಚಿಸಲಾಗಿದೆ ಎಂದು. ಅದರ ಅರ್ಥ, ಒಂದು ಎಕರೆ ಒಣ ಪ್ರದೇಶಕ್ಕೆ ರೂ.2,750 ಮತ್ತು ನೀರಾವರಿ ಪ್ರದೇಶಕ್ಕೆ ರೂ.5,465ಗಳು ಮಾತ್ರ. ಈ ಹಣವನ್ನು ರಾಜ್ಯ ಸರ್ಕಾರಗಳ ಸುಪರ್ದಿನಲ್ಲಿರುವ ರಾಜ್ಯ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಿಂದ ನೀಡಿ, ನಂತರ ಅದನ್ನು ರಾಷ್ಟ್ರೀಯ ನಿಧಿಯಿಂದ ಪಡೆದುಕೊಳ್ಳಿ ಎಂದು ಕೇಂದ್ರ ಸರ್ಕಾರವು ಏಪ್ರಿಲ್ 8ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ ಹೇಳಿತ್ತು. ಆದರೆ, ಅದಕ್ಕಿರುವ ಷರತ್ತೇನೆಂದರೆ, ಅದು ಈ ಆರ್ಥಿಕ ವರ್ಷದ ಮೊದಲ ವಿಕೋಪಕ್ಕೆ ಮಾತ್ರ. ಒಂದು ವೇಳೆ, ಇದಾದನಂತರ ಏನಾದರೂ ಮತ್ತೊಂದು ವಿಕೋಪ ಬಂದರೆ, (2009ರಲ್ಲಿ ಆದ ರೀತಿಯ ಪ್ರವಾಹ ಬಂದು ಬಿಡಬಹುದೇ ಎಂಬ ಆತಂಕವನ್ನೂ ಕೆಲವರು ಈಗಾಗಲೇ ವ್ಯಕ್ತಪಡಿಸುತ್ತಿದ್ದಾರೆ.) ರಾಷ್ಟ್ರೀಯ ಪ್ರಾಕೃತಿಕ ವಿಕೋಪ ನಿಧಿಯಿಂದ ಅಂತಹ 'ಅಡ್ಜಸ್ಟ್‌ಮೆಂಟ್' ಸಾಧ್ಯವಿಲ್ಲ ಎಂಬ ಷರತ್ತನ್ನು ಅದರಲ್ಲಿ ಸೇರಿಸಲಾಗಿದೆ. ಜೊತೆಗೆ ಅತ್ಯಂತ ಹೆಚ್ಚೆಂದರೆ 4.9 ಎಕರೆಗಿಂತ ಕಡಿಮೆ ಭೂಮಿ ಇರುವವರಿಗೆ ಮಾತ್ರ ಈ ಪರಿಹಾರ ದೊರೆಯುತ್ತದೆ. ಏಕೆಂದರೆ, ಯಾವುದೇ ರೈತರಿಗೆ ನೀಡಬಹುದಾದ ಗರಿಷ್ಠ ಪರಿಹಾರವೆಂದರೆ ರೂ. 13,475 (ಒಣ ಪ್ರದೇಶದವರಿಗೆ) ಮತ್ತು ರೂ [illegible] (ನೀರಾವರಿಯವರಿಗೆ) ಮಾತ್ರ.

ಈ ವರ್ಷದ ಮುಂಗಾರಿನ ಆರಂಭದ [illegible] ಇಂತಹ ಹಲವು ಕ್ರೂರ ತಮಾಷೆಗಳು ನಡೆದ[illegible] ವಿಕೋಪದಿಂದ ಹಾನಿಗೊಳಗಾದ [illegible] ಪ್ರಮಾಣವನ್ನು ತಿರುಚಿ ಕಡಿಮೆ ಮಾಡಲಾ[illegible] ಕೇಂದ್ರ ಸರ್ಕಾರವೇ 181 ಲಕ್ಷ ಹೆಕ್ಟೇರ್ [illegible] ಎಕರೆ)ಗಳಷ್ಟು ಹಾನಿಯಾಗಿದೆ ಎಂದು ಮೊದ[illegible] ನಂತರ ಅದನ್ನು 80 ಲಕ್ಷ ಹೆಕ್ಟೇರ್‌ಗಳಿ[illegible] ಅದೂ ಯಾವಾಗ? ಪರಿಹಾರದ ಮೊತ್ತವನ್ನು [illegible] ಪಟ್ಟು ಹೆಚ್ಚಿಸಿದ್ದೇವೆ ಎಂದು ಪ್ರಧಾನ ಮ[illegible] ನಂತರ! ಅಂದರೆ, ಕೇಂದ್ರ ಸರ್ಕಾರ ನೀಡಬೇಕ[illegible] ಪರಿಹಾರದ ಒಟ್ಟು ಮೊತ್ತವೂ ಕಡಿಮೆಯಾಗು[illegible] ನಷ್ಟದ ಅಂದಾಜನ್ನೇ ತಗ್ಗಿಸಲಾಯಿತು [illegible] ಹೆಕ್ಟೇರ್‌ಗಳಿಗಿಂತ ಕಡಿಮೆ ಜಮೀನಿರುವ[illegible] ಈ ಪರಿಹಾರ ಸಿಗುತ್ತದಾದ್ದರಿಂದ, ಮೇಲಿನ [illegible] ಇನ್ನೂ ಕೆಳಕ್ಕೆ ಇಳಿಯಿತು.

ಇಷ್ಟೆಲ್ಲಾ ಕ್ರೂರ ನಾಟಕಗಳನ್ನಾಡಿದ [illegible] ಸರ್ಕಾರವು ಇನ್ನೂ ದೊಡ್ಡ ನಾಟಕವನ್ನು [illegible] ಅದೇನೆಂದರೆ, ವಿಕೋಪದಿಂದ ನಷ್ಟ[illegible] ರಾಜ್ಯಗಳಿಗೂ, ಪ್ರತೀ ರಾಜ್ಯಕ್ಕೆ ತಲಾ [illegible] ಸಚಿವರನ್ನು ಕಳಿಸಿತು. ಪರಿಹಾರ [illegible] ತಲುಪುತ್ತಿದೆಯೋ, ಇಲ್ಲವೋ ಎಂಬುದ[illegible] ನಡೆಸಲು!!

ಬರವನ್ನು ಮಾತ್ರವಲ್ಲ, ಇವನ್ನೆಲ್ಲಾ ಎ[illegible] ದೇಶದ ಜನತೆ ಸೂಕ್ತ ತಯಾರಿ ಮಾಡಿಕೊಳ[illegible]

ದೇವರ ಹಂಗೇಕೆ?

ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರುಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ.

– ಲದ್ದೆಯ ಸೋಮಣ್ಣ

ಬಸವಣ್ಣನವರ ಸಮಕಾಲೀನ ಶರಣ ಸೋಮಣ್ಣ ಈಗಿನ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಲದ್ದೆ (ಲಾಧಾ) ಗ್ರಾಮದವನು. ಲದ್ದೆ ಎಂದರೆ ಹೊರೆ ಎಂಬ ಅರ್ಥವೂ ಇದೆ. ಲದ್ದೆ ಗ್ರಾಮದಿಂದ ಹುಲ್ಲಿನ ಹೊರೆಯನ್ನು ಹೊತ್ತು, ಸಮೀಪದ ಬಸವಕಲ್ಯಾಣ ತಾಲೂಕಿನ ಹುಲಸೂರಿನಲ್ಲಿ ಮಾರುವ ಕಾಯಕವನ್ನು ಕೈಕೊಂಡಿದ್ದ ಶರಣ ಲದ್ದೆಯ ಸೋಮಣ್ಣನ ವ್ಯಕ್ತಿತ್ವ ಅನುಕರಣೀಯವಾಗಿದೆ. ಸೋಮಣ್ಣನ ಒಂದೇ ಒಂದು ವಚನ ಸಿಕ್ಕಿದೆ. ಇದು ಆತನ ಉತ್ಸಾಹದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ಯಾವುದೇ ಕಾಯಕವಾದರೂ ತಲ್ಲೀನವಾಗಿ ಮಾಡು. ಕಾಯಕದಿಂದ ಬಂದದ್ದನ್ನು ದಾಸೋಹ ಭಾವದಿಂದ ಗುರು, ಲಿಂಗ ಮತ್ತು ಜಂಗಮ (ಶರಣಸಂಕುಲ)ಕ್ಕೆ ಅರ್ಪಿಸು. ಅರ್ಪಿಸಿದ ನಂತರ ಉಳಿದದ್ದನ್ನು ಪ್ರಸಾದವಾಗಿ ಸ್ವೀಕರಿಸು. ರೋಗ ಬಂದರೆ ನರಳು, ನೋವಾದರೆ ಅರಚು, ಸಾವು ಬಂದರೆ ಸಾಯಿ. ಇದಕ್ಕೆ ಆ ದೇವರ ಹಂಗೇಕೆ? ಎಂದು ಲದ್ದೆಯ ಸೋಮಣ್ಣ ಪ್ರಶ್ನಿಸುತ್ತಾನೆ.

ಆತ್ಮಗೌರವ, ಕಾಯಕನಿಷ್ಠೆ, ಶರಣಸಂಕುಲಕ್ಕೆ ನಿಷ್ಠೆ, ದೇವರ ಹಂಗಿನಲ್ಲಿ ಕೂಡ ಇರಬಾರದೆಂಬ ಛಲ ಮತ್ತು ಜನನದಂತೆ ಮರಣ ಕೂಡ ಜೈವಿಕ ಪ್ರಕ್ರಿಯೆಯಾಗಿರುವುದರಿಂದ ಆ ಬಗ್ಗೆ ತಲೆಕೆಡಿಸಿಕೊಳ್ಳಬಾರದು ಎಂಬ ಮಹತ್ವದ ನಿಲುವುಗಳನ್ನು ಲದ್ದೆಯ ಸೋಮಣ್ಣ ಈ ವಚನದಲ್ಲಿ ತಾಳಿದ್ದಾನೆ.

ಜನ ಮನಸ್ಸಿಲ್ಲದ ಮನಸ್ಸಿನಿಂದ ಕೆಲಸ ಮಾಡಿದರೆ ಕಾಯಕದ ಆನಂದವನ್ನು ಪಡೆಯಲಾರರು. ಮಾನವರ ದೊಡ್ಡ ದುರಂತವೆಂದರೆ ತಮ್ಮ ಕಾಯಕವನ್ನು ತಾವು ಆನಂದಿಸದೆ ಇರುವುದು. ನಮ್ಮ ಕಾಯಕವನ್ನು ನಾವು ಸ್ವ



ಕಾಯಕ ಮಾಡಿಕೊಂಡು, ಏಕಾಗ್ರತೆಯಿಂದ ಕ್ರಿಯಾಶೀಲರಾಗದಿದ್ದರೆ ಸಮಾಜ ಅವನತಿಯತ್ತ ಸಾಗುವುದು. ಜನಜೀವನ ದುಸ್ತರವಾಗುವುದು. ಕಾಯಕದಲ್ಲಿ ಮೇಲುಕೀಳು ಎಂಬುದಿಲ್ಲ. ಈ ಸತ್ಯವನ್ನು ಅರಿತವರು ಜೀವನೋತ್ಸಾಹದಿಂದ ಕಾಯಕದಲ್ಲಿ ನಿರತರಾಗುವರು.

ಕಾಯಕದಲ್ಲಿ ಮೇಲುಕೀಳು ಎಂದು ಭೇದ[illegible] ತಮ್ಮ ಕಾಯಕ ಕೀಳೆಂದು ಭಾವಿಸುವರು. [illegible] ಅವರು ಅನಾಥಪ್ರಜ್ಞೆಯಿಂದ ಬಳಲುತ್ತಾ[illegible]


ಇಂಥ ಅನಾಥಪ್ರಜ್ಞಾಪೀಡಿತರು ಎಲ[illegible] ಇದ್ದಾರೆ. ಇಂಥವರು ತಮ್ಮ ಕೆಲಸಕಾರ್ಯ[illegible] ಕಳೆದುಕೊಳ್ಳುವುದರಿಂದ ದೇ[illegible] ಕುಂಠಿತಗೊಳ್ಳುವುದು. ಕಸಗುಡಿಸುವವ[illegible] ಕಸಗುಡಿಸದಿದ್ದರೆ ರೋಗರುಜಿನಗಳು ಹರಡ[illegible] ಚಾಲಕ ಏಕಾಗ್ರತೆ ವಹಿಸದಿದ್ದರೆ ಅಪಘಾತ [illegible] ಹೆದ್ದಾರಿ ನಿರ್ಮಾಣದಲ್ಲಿ ಉದಾಸೀನ [illegible] ಅಪಘಾತಗಳು ಸಂಭವಿಸುವವು. ಕಟ್ಟಡ [illegible] ಕಾಳಜಿ ವಹಿಸದಿದ್ದರೆ ಅನಾಹುತಗಳು [illegible] ಅಧಿಕಾರಿಗಳು ತಮ್ಮ ಸ್ಥಾನಮಾನದ ಬ[illegible] ಕೊಂಡರೆ ಅವರ ಹುದ್ದೆಗೆ ಸಂಬಂಧಿಸಿದ [illegible] ನೆನೆಗುದಿಗೆ ಬೀಳುವವು. ಮಂತ್ರಿಗಳು [illegible] ಸಂಬಂಧಿಸಿದ ಜವಾಬ್ದಾರಿಯನ್ನು ನಿಭಾ[illegible] ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವ[illegible]

ಅನೇಕ ಮಂತ್ರಿಗಳು ತಮಗೆ [illegible] ಸರಿಯಾದ ಖಾತೆ ಸಿಕ್ಕಿಲ್ಲ ಎಂದು

ಮೋದಿಗೆ, ಔರಂಗಜೇಬನಿಂದ

ಇತ್ತೀಚೆಗೆ ದೆಹಲಿಯಲ್ಲಿದ್ದ ಔರಂಗಜೇಬ್ ರಸ್ತೆಯ ...ನ್ನು ಬದಲಾಯಿಸಿ ಅದಕ್ಕೆ ಅಬ್ದುಲ್ ಕಲಾಂ ಹೆಸರನ್ನು ...ದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ...ಘೋಷಣೆಯನ್ನು ಎಲ್ಲರೂ ಸ್ವಾಗತಿಸಿದರು. ಯಾಕೆಂದರೆ ... ಶಾಲಾಪಠ್ಯಗಳಿಂದ ಹಿಡಿದು- ಸಿನಿಮಾ ಮತ್ತು ...ತ್ಯದಲ್ಲೂ ಔರಂಗಜೇಬನನ್ನು ಒಬ್ಬ ಕ್ರೂರಿ, ...ಸ್ಥಾನಗಳ ನಾಶಕ, ಹಿಂದೂಗಳನ್ನು ದಮನ ಮಾಡಿದವನು ...ಂ ಚಿತ್ರಣವೇ ಪ್ರಾಮುಖ್ಯತೆ ಪಡೆದು, ಆತ ...ವಾಗಲೂ ಇತರರಿಗಿಂತ ಹೇಗೆ ಭಿನ್ನವಾಗಿದ್ದ ಮತ್ತು ...ನಾಗಿದ್ದ ಎಂದು ವಿವರಿಸುವ ಮಾಹಿತಿಗಳು ಸಿಗುವುದು

...ಟಿಡ್ಡಿಗಳನ್ನು ಕೇಳಿದರೆ 'ಔರಂಗಜೇಬ ಸಾವಿರಾರು ...ೂ ದೇವಸ್ಥಾನಗಳನ್ನು ಧ್ವಂಸ ಮಾಡಿದ್ದ' ಎಂದೇ ...ಸುತ್ತಾರೆ. ಆದರೆ ಅದು ನಿಜವೇ? ಇತಿಹಾಸ ತಜ್ಞ ... ಈಟನ್ ಅವರ ಪ್ರಕಾರ 12ನೇ ಶತಮಾನದಿಂದ ... ಶತಮಾನದ ತನಕ - ಅಂದರೆ ಆರು ಶತಮಾನಗಳಲ್ಲಿ ...ಟ್ಟು ಧ್ವಂಸವಾದ ದೇವಸ್ಥಾನಗಳ ಸಂಖ್ಯೆ ಕೇವಲ ...ಅದರಲ್ಲಿ ಔರಂಗಜೇಬನ ಲೆಕ್ಕಕ್ಕೆ ಬರುವುದು 15 ...! ಅವುಗಳನ್ನೂ ಆತ ಧ್ವಂಸ ಮಾಡಿದ್ದು ಯಾಕೆಂದರೆ ...ವಿರೋಧಿಗಳ ಪ್ರಭಾವ ಕೇಂದ್ರಗಳಾಗಿದ್ದರಿಂದ ಅಥವಾ ... ಎದ್ದಿರುವ ಪಠಾಜಿ ಹಿಂಬಾಲಕರ ...ಸ್ಥಾನವಾಗಿದ್ದರಿಂದ. ಅಷ್ಟೇ ಮುಖ್ಯವಾದ ಅಂಶ ...ವುದೆಂದರೆ ಔರಂಗಜೇಬ ಧ್ವಂಸ ಮಾಡಿದ ...ಲಗಳಿಗಿಂತ ಹೆಚ್ಚಿನ ಸಂಖ್ಯೆಯ ದೇಗುಲಗಳನ್ನು ...ಸಿದ್ದ ಎಂಬುದು.



...ನ್ನು ಔರಂಗಜೇಬನನ್ನು ತೆಗಳುವುದಕ್ಕೆ ಹಲವರು ...ಳ್ಳುವುದು 'ಜಜಿಯಾ ತೆರಿಗೆ'ಯನ್ನು. ಹಿಂದೂಗಳ ... ಅಂತಹ ತೆರಿಗೆಯನ್ನು ಔರಂಗಜೇಬ ವಿಧಿಸಿದ್ದನ್ನು ...ಸುವವರು ಮರಾಠರು ತಮ್ಮ ಸಾಮ್ರಾಜ್ಯದಲ್ಲೂ ...ಸ್ಮಾನರ ಮೇಲೆ ಮಾತ್ರ ಅಂತಹದ್ದೇ ತೆರಿಗೆಯನ್ನು ...ದ್ದನ್ನು ಯಾಕೆ ಖಂಡಿಸುವುದಿಲ್ಲವೋ ಗೊತ್ತಿಲ್ಲ. ...ಜೇಬ ಕ್ರೂರಿಯಾಗಿದ್ದ ಎಂದು ಆರೋಪಿಸುವವರು ...ಕ ಬೌದ್ಧ ಧರ್ಮವನ್ನು ಸ್ವೀಕರಿಸುವ ಮುನ್ನ ...ೀಪುತ್ರದಲ್ಲಿ ಟಾರ್ಚರ್ ಚೇಂಬರ್ಸ್ ಹೊಂದಿದ್ದ ...ದನ್ನೂ ಮರೆಯುತ್ತಾರೆ. ಒಂದಂತೂ ಸ್ಪಷ್ಟ, ...ಜೇಬ ಇತರೆ ರಾಜರಂತೆ ಮನುಷ್ಯನಾಗಿದ್ದು ಆತನಲ್ಲೂ ...ದು ಮತ್ತು ಕೆಟ್ಟದ್ದು ಎರಡೂ ಇದ್ದವು.

...ದೆಲ್ಲ ಇರಲಿ, ಔರಂಗಜೇಬ್ ರಸ್ತೆಯ ಹೆಸರು ...ದ ಹಿನ್ನೆಲೆಯಲ್ಲಿ ರೋಹಿತ್ ಚೋಪ್ರಾ ...ವವರು ಇಂಗ್ಲಿಷ್‌ನಲ್ಲಿ ಒಂದು ಕಾಲ್ಪನಿಕ ಪತ್ರವೊಂದನ್ನು ಬರೆದಿದ್ದಾರೆ. ಅದು ನರೇಂದ್ರ ಮೋದಿಗೆ ಔರಂಗಜೇಬ ಬರೆದಿರುವ ಪತ್ರ. ಇಂಗ್ಲಿಷ್ ಲೇಖನದಲ್ಲಿ ಇರುವಷ್ಟು ಹಾಸ್ಯ ಕನ್ನಡಕ್ಕೆ ತರುವುದು ಕಷ್ಟವಾದರೂ, ಆದಷ್ಟು ಪ್ರಯತ್ನಿಸಿ ಅದನ್ನು ಇಲ್ಲಿ ನಿಮಗೆ ನೀಡುತ್ತಿದ್ದೇನೆ:

ದೊರೆಯೇ, ಭಾರತದ ಚಕ್ರವರ್ತಿಯೇ, ಮನ್ ಕಿ ಬಾತ್ ಕಾರ್ಯಕ್ರಮದ ಸತ್ಕಾರನೆ, ಅಚ್ಚೆ ದಿನ್‌ಗಳ ದೂತನೆ, ಭಕ್ತರ ಮುಖಂಡನೆ, ನೀನು ಕ್ಷೇಮ ಎಂದು ಭಾವಿಸಿದ್ದೀನಿ. ನಾನು ನಿನ್ನನ್ನು ಚಕ್ರವರ್ತಿ ಎಂದು ಕರೆದಿದ್ದರ ಬಗ್ಗೆ ನಿನಗೆ ಆಕ್ಷೇಪವಿಲ್ಲವೆಂದು ನಂಬಿದ್ದೇನೆ. ನೀನು ಪ್ರಜಾಸತ್ತಾತ್ಮಕವಾಗಿ ಚುನಾಯಿತನಾದ ನಾಯಕ ಎಂದು ನನಗೆ ಗೊತ್ತು. ಆದರೆ ನಿನ್ನ ರಾಜಾರ್ಹ ಭಂಗಿ ಮತ್ತು ಭವ್ಯವಾದ ಉಡುಗೆತೊಡುಗೆಗಳನ್ನು ಧರಿಸುವ ನಿನ್ನ ಶೈಲಿ ಯಾವುದೇ ಪರಂಪರಾಗತವಾದ ರಾಜಪ್ರಭುತ್ವ ಮತ್ತು ಊಳಿಗಮಾನ್ಯ ಉದಾತ್ತತೆಗೆ ಸರಿಸಮನಾದದ್ದು. ಅಷ್ಟೇ ಅಲ್ಲ, ಈಗ ಬಹಳಷ್ಟು ಭಾರತೀಯರ ಅರಿವಿಗೆ ಬಂದಿರುವಂತೆ ನಿನಗೆ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಅಷ್ಟೇನು ಒಲವು ಇಲ್ಲ. ಅದು ನಿನ್ನ ತಪ್ಪಲ್ಲ ಬಿಡು.

ಅಂದಹಾಗೆ, ಯಾರಾದರೂ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಿನಗೆ ನಂಬಿಕೆ ಇಲ್ಲ ಎಂದು ಆರೋಪಿಸಿದರೆ, ಅವರಿಗೆ 'ಹಿಂದ್ ಸ್ವರಾಜ್' ಪುಸ್ತಕದ ಒಂದು ಪ್ರತಿಯನ್ನು ಕೊಡು. ಆಗ ಅವರಿಗೆ ಗಾಂಧಿ ಅವರಿಗೂ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಅಷ್ಟೇನು ಭರವಸೆ ಇರಲಿಲ್ಲ ಎಂದು ಅರಿವಾಗುತ್ತದೆ. ಚಿನ್ನದ ದಾರಗಳಲ್ಲಿ ಪದೇ ಪದೇ ನಿನ್ನ ಹೆಸರನ್ನು ಹೆಣೆದಿದ್ದ ಆ ಸುಂದರವಾದ ಸೂಟ್ ಅನ್ನು ನೀನು ತೊರೆಯಬೇಕಾದುದು ದೊಡ್ಡ ದುರಂತವೇ ಸರಿ. ಹದಿನಾಲ್ಕನೆ ಲೂಯಿಯಿಂದ ಹಿಡಿದು ಕಾನ್ಯೆ ವೆಸ್ಟ್ ತನಕ ಕಿಂಚಿತ್ತಾದರೂ ಫ್ಯಾಷನ್ ಸೆನ್ಸ್ ಹೊಂದಿರುವ ಯಾವುದೇ ರಾಜನೂ ಅಂತಹ ಸೂಟ್ ಒಂದನ್ನು ಹೊಂದಲು ಬಯಸುತ್ತಿದ್ದ. ನಾನು ಹೇಳುತ್ತೇನೆ ಕೇಳು... ನೀನು ಎಂದಿಗೂ ಆ ಮುಂಡಾಸು ಮಂದಿಯ ಒತ್ತಡಕ್ಕೆ ಮಣಿಯ ಕೂಡದು.

ದೆಹಲಿಯ ಪ್ರತಿಷ್ಠಿತ ಏರಿಯಾದಲ್ಲಿರುವ ಒಂದು ರಸ್ತೆಗೆ ಇಡಲಾಗಿದ್ದ ನನ್ನ ಹೆಸರನ್ನು ನೀನು ಬದಲಾಯಿಸಿದ್ದರ ಬಗ್ಗೆ ನನಗೆ ಒಂದಿಷ್ಟೂ ಬೇಸರವಿಲ್ಲ. ನನಗೆ ಗೊತ್ತು, ಬಿಜೆಪಿಯ ನಾಯಕನೊಬ್ಬನ ಆದೇಶದ ಮೇರೆಗೆ ದೆಹಲಿ ಮುನಿಸಿಪಲ್ ಕಾರ್ಪೊರೇಶನ್ ಆ ಕೃತ್ಯವನ್ನು ಎಸಗಿದೆ ಎಂದು. ಆದರೆ ಅದು ನಿನ್ನ ಅಧಿಕಾರಾವಧಿಯಲ್ಲಿ ಆದದ್ದು. ಎಲ್ಲದಕ್ಕೂ ಚಕ್ರವರ್ತಿಯೇ ಮುಖ್ಯನಾಗುತ್ತಾನೆ. ಆದರೂ ಅದರ ಬಗ್ಗೆ ನಿನಗೆ ಲವಲೇಶದಷ್ಟೂ ಬೇಸರವಾಗಿರಲಿಕ್ಕಿಲ್ಲ. ಪ್ರಕ್ಷಿಪ್ತವಾಗಿ ಕೇಳುವುದಾದರೆ ಈ ಬಗ್ಗೆ ಆರೆಸ್ಸೆಸ್ ಸಭೆಯಲ್ಲಿ ಪ್ರಸ್ತಾಪಿಸಲಾಯಿತೆ? ನನಗೆ ಕುತೂಹಲ ಇರುವುದರಿಂದ ಕೇಳುತ್ತಿದ್ದೇನಷ್ಟೇ.

ನಿನಗೆ ಗೊತ್ತೇ ನರೇಂದ್ರಜೀ, ಒಂದು ರೀತಿಯಲ್ಲಿ ನಾನು ಮತ್ತು ನೀನು ಒಂದೇ ತರಹದವರು. ಐತಿಹಾಸಿಕ ಕಾಲಘಟ್ಟ ಮತ್ತು ಸಾಂದರ್ಭಿಕ ಸನ್ನಿವೇಶಗಳಲ್ಲಿ ಒಂದಿಷ್ಟು ಅಡ್ಜಸ್ಟ್ ಮಾಡಿಕೊಂಡರೆ ನಮ್ಮಿಬ್ಬರ ಮಧ್ಯೆ ಅಷ್ಟೇನು ವ್ಯತ್ಯಾಸಗಳಿಲ್ಲ ಎಂಬುದು ಅರ್ಥವಾಗುತ್ತದೆ. ನಾನು ಭವ್ಯವಾದ ಉಡುಗೆತೊಡುಗೆಗಳ ಬಗ್ಗೆ ನಮ್ಮಿಬ್ಬರಿಗೂ ಇರುವ ಆಸಕ್ತಿಯ ಕುರಿತು ಮಾತನಾಡುತ್ತಿಲ್ಲ.

ನಾವಿಬ್ಬರೂ ಒಂದು ವ್ಯಾಪಕವಾದ, ನಿರ್ವಹಿಸಲು ಅನುಕೂಲವಲ್ಲದಷ್ಟು ದೊಡ್ಡದಾದ, ಅಂಕೆಯಿಲ್ಲದ ಜನಸಂಖ್ಯೆಯನ್ನು ನಿಭಾಯಿಸಬೇಕಿದೆ. ಓಹ್, ಎಡೆಬಿಡದ ವಾದಲೋಲರಾದ ಭಾರತೀಯರೋ! ಅಮರ್ತ್ಯ ಬಗ್ಗೆ ನಿನಗೆ ಅಭಿಮಾನ ಇಲ್ಲದಿರಬಹುದು, ಆದರೆ ಆತ ಭಾರತೀಯರನ್ನು ಎಡೆಬಿಡದ ವಾದಲೋಲರು ಎಂದು ಕರೆದದ್ದು ಸೂಕ್ತವಾಗಿತ್ತು ಎಂದು ನಿನಗೆ ಅನ್ನಿಸುವುದಿಲ್ಲವೇ? ನಿಜ, ನನಗಾದರೋ ದಶಕಗಳ ಕಾಲ ಆಳ್ವಿಕೆ ನಡೆಸಿದ ಅನುಭವ ಇತ್ತು, ಆದರೆ ನಿನಗೋ, ಎರಡು ವರ್ಷಗಳ ಅನುಭವ ಮಾತ್ರ ಇರುವುದರಿಂದ ನಿನಗೆ ಒಂದಿಷ್ಟು ಉದಾರತೆಯನ್ನು ತೋರಬಹುದು. ನಿನಗೊಂದು ಸಲಹೆ ಕೊಡುತ್ತೇನೆ: ಇಡೀ ಭಾರತವನ್ನು ಗುಜರಾತ್ ಆಗಿ ಪರಿವರ್ತಿಸುವುದು ಸಾಧ್ಯವಿಲ್ಲ. ಯಾಕೆ ಎಂದು ಕೇಳುತ್ತೀಯಾ? ಗುಜರಾತಿಗಳ ಧೋಕ್ಲಾ ನೋಡಿ ಗೊಂದಲಗೊಳ್ಳದಿರುವ ಪಂಜಾಬಿಯನ್ನು ನನಗೆ ತೋರಿಸು ನೋಡುವ! ಅದರ ಅರ್ಥ ಏನೆಂದು ನೀನು ಒಬ್ಬನೇ ಇದ್ದಾಗ ತರ್ಕಿಸು. ಜೊತೆಗೆ ಅಲ್ಪಸಂಖ್ಯಾತರನ್ನು ಗುರಿಯಾಗಿಸಿರುವ,



ಅಥವಾ ಬೇಕಂತಲೇ ನಿರ್ಲಕ್ಷಿಸಿರುವ ಕೆಟ್ಟ ಆರೋಪವೂ ನಿನ್ನ ವಿರುದ್ಧ ಇದೆಯಲ್ಲಾ. ಈ ವಿಷಯದಲ್ಲಿ ನನ್ನ ಕೈಗಳು ಸ್ವಚ್ಛವಾಗಿವೆ ಎಂದೇನು ನಾನು ಹೇಳುವುದಿಲ್ಲ. ಆದರೂ ಅದ್ಯಾವ ವಿಚಿತ್ರ ಜಗತ್ತಿನಲ್ಲಿ ಅಕ್ಬರ್ ಜಾತ್ಯತೀತ ಎಂದು ಪರಿಗಣಿಸಲ್ಪಡುತ್ತಾನೆ? ಬೇರೆ ಧರ್ಮೀಯರ ಮೇಲೆ ಆತ ಮಾಡಿದ ದಾಳಿ 'ರಾಜಕೀಯ ದಾಳಿ' ಆಗುತ್ತದೆ, ಆದರೆ ಅದನ್ನೇ ನಾನು ಮಾಡಿದರೆ ಅದು 'ಧಾರ್ಮಿಕ ದಾಳಿ' ಹೇಗೆ ಆಗುತ್ತದೆ? ವಾರೆವ್ಹಾ!! ಇದೆಂತಹ ತರ್ಕ? ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯವು ಭಾರತೀಯ ಇತಿಹಾಸವನ್ನು 'ಕೋಮುವಾದಿ' ಮತ್ತು 'ಜಾತ್ಯತೀತವಾದಿ' ಇತಿಹಾಸ ಎಂದು ಎರಡು ಪರಸ್ಪರ ಗುಂಪುಗಳಾಗಿ ವಿಭಜಿಸಿರುವುದರಿಂದ ಆ ವಿಶ್ವವಿದ್ಯಾಲಯವನ್ನೇ ಬರಕಾಸ್ತು ಮಾಡಬೇಕೆಂಬ ಆರೆಸ್ಸೆಸ್ ಮುಖಂಡರ ಒತ್ತಾಯಕ್ಕೆ ನನ್ನ ಸಹಮತಿಯಂತೂ ಇದ್ದೇ ಇದೆ. ಸತ್ಯವಾಗಿ ಹೇಳುತ್ತೇನೆ ಕೇಳು, ವಿಶ್ವವಿದ್ಯಾಲಯಗಳಲ್ಲಿರುವ ಈ ಅಕಾಡೆಮಿಕ್ ಗಾಂಪರಿಗೆ ನೆಟ್ಟಗೆ ಒಂದು ಬೋಧನಾಂಗ ಸಭೆ ನಡೆಸುವ ಸಾಮರ್ಥ್ಯವಿಲ್ಲ! ಆದರೆ ನಾನು ಮತ್ತು ನೀನು ಅವರಂತಲ್ಲ, ನಮಗೆ ರಾಜಕೀಯ ವ್ಯವಹಾರಿಕತೆ ಕರಗತವಾಗಿದೆ.

ಮಣಿಶಂಕರ್ ಐಯ್ಯರ್ ಒಬ್ಬನಮ್ನ ಹೊರತುಪಡಿಸಿ ಮಿಕ್ಕೆಲ್ಲ ಭಾರತೀಯರಿಗೆ ಗೊತ್ತಿರುವಂತೆ ಬಾಬ್ರಿ ಮಸೀದಿಯ ಬಾಗಿಲನ್ನು ತೆರೆಸಿದ್ದು ಮತ್ತು 1984ರ ಕೋಮುಗಲಭೆಗೆ ಕಾರಣವಾಗಿದ್ದು ಕಾಂಗ್ರೆಸ್ ಪಕ್ಷ. ಆದರೂ ಆ ಪಕ್ಷ ಇವತ್ತು ತನ್ನನ್ನು ಜಾತ್ಯತೀತ ಪಕ್ಷ ಎಂದು ಆರೋಪಿಸಿಕೊಳ್ಳುತ್ತಿರುವುದನ್ನು ಕಂಡು ನಿನಗೆ ರೇಗಿಹೋಗಿರಬೇಕು. ಇದೆಂತಹ ಇಬ್ಬಗೆ ನೀತಿ?

ವೈರಿಗಳನ್ನು, ಹಿರಿಯರನ್ನು, ಸಮಾನರನ್ನು, ಕಿರುಕುಳ ಕೊಡುವವರನ್ನು ನೀನು ಮಟ್ಟಹಾಕಿರುವ ರೀತಿ ಇದೆಯಲ್ಲ, ಅದು ನನಗೆ ನಿಜವಾಗಲೂ ಮೆಚ್ಚುಗೆ ಆಗಿದೆ. ಒಂದೋ ಅವರ ಮೇಲೆ ಪ್ರಶಸ್ತಿಗಳ ಸುರಿಮಳೆಯನ್ನೇಗೈದು ಸುಮ್ಮನಾಗಿಸುತ್ತೀಯ, ಅಥವಾ ಅವರು ತಮ್ಮ ಮನೆಯಲ್ಲೇ ಬಂಧಿಗಳಾಗಿರುವಂತೆ ನೋಡಿಕೊಳ್ಳುತ್ತೀಯ ಅಥವಾ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ಪಾತ್ರ ಇಲ್ಲದಂತೆ ಎಚ್ಚರ ವಹಿಸುತ್ತೀಯ, ಅದ್ಯಾವುದೂ ಸಾಧ್ಯವಾಗದಿದ್ದಾಗ ಅವರನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ನಿಯೋಜಿಸುತ್ತೀಯ! ಸಕತ್ತಾಗಿದೆ ನಿನ್ನ ತಂತ್ರ! ನಾನು ಅನುಸರಿಸುತ್ತಿದ್ದ ಕ್ರಮಗಳು ಇದಕ್ಕಿಂತ ಒಂದಿಷ್ಟು ಭಿನ್ನವಾಗಿರುತ್ತಿದ್ದವು. ಆದರೆ ನಾನು ಇದ್ದದ್ದು ಹದಿನೇಳನೆ ಶತಮಾನದಲ್ಲಿ ಎಂಬುದನ್ನು ನೆನಪಿಟ್ಟುಕೊಳ್ಳೋಣ. ಈ ನಮ್ಮ ಪೆದ್ದು ಮಾಧ್ಯಮಗಳಿಗೆ ಏನಾಗಿದೆ? ಅವು ಹದಿನೇಳನೇ ಶತಮಾನವನ್ನು ಮಧ್ಯಯುಗ ಎಂದು ಬಣ್ಣಿಸುತ್ತಿವೆ!

ನನ್ನ ಮತ್ತು ನಿನ್ನ ನಡುವೆ ಇರುವ ಒಂದೇ ಒಂದು ವ್ಯತ್ಯಾಸವೆಂದರೆ ಅದು ಹಾಡು ಮತ್ತು ನೃತ್ಯಕ್ಕೆ ಸಂಬಂಧಿಸಿದ್ದು. ಆರೆಸ್ಸೆಸ್ ಶೈಲಿಯ ವೈರಾಗ್ಯದಲ್ಲಿ ಬೆಳೆದ ನೀನು ನನ್ನಂತೆಯೇ ನಿಷ್ಠುರನಾಗಿರುತ್ತೀ ಎಂದು ಲೆಕ್ಕಹಾಕಿದ್ದೆ. ಆದರೆ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಎಲೆಕ್ಟ್ರಾನಿಕ್ ಮ್ಯೂಸಿಕ್, ನಿಯಾನ್ ಲೈಟ್, ಹಾಡು-ಕುಣಿತ ಇತ್ಯಾದಿಗಳ ನಡುವೆ ನೀನು ಅನಿವಾಸಿ ಭಾರತೀಯರ ಪ್ರತಿನಿಧಿ ಎಂಬಂತೆ ಪೋಸು ಕೊಟ್ಟಿದ್ದನ್ನು ನೋಡಿ ನನಗೆ ಅಚ್ಚರಿ ಆಯಿತು. ನಿಜ ಹೇಳಬೇಕೆಂದರೆ ಆ ಆಡಂಬರದ ಸಂಜೆಯು 1903ರಲ್ಲಿ ಬ್ರಿಟನ್ನಿನ ರಾಜ ಎಡ್ವರ್ಡ್ ಮತ್ತು ರಾಣಿ ಅಲೆಕ್ಸಾಂಡ್ರಾ ಭಾರತಕ್ಕೆ ಭೇಟಿಕೊಟ್ಟಾಗ ಇದ್ದಕ್ಕಿದ್ದಂತೆ ಅಧಿಕಾರ ಪಡೆದಿದ್ದ ಅಬ್ಬೆಪಾರಿ ಕರ್ಜನ್ ದೆಹಲಿಯಲ್ಲಿ ಆಯೋಜಿಸಿದ್ದ ದರ್ಬಾರಿನಂತಿತ್ತು, ಅದೇನೇ ಇರಲಿ, ಕಲೆಯನ್ನು ನಿರ್ಲಕ್ಷಿಸುವ ಮುಂಗೋಪಿ ಎಂಬ ಪ್ರಸಿದ್ಧಿ ನನಗಿದ್ದರೂ ನೀನು ಸಿಲಿಕಾನ್ ವ್ಯಾಲಿಗೆ ಭೇಟಿಕೊಟ್ಟಾಗ ಅಲ್ಲಿನ ವೈಭೋಗವನ್ನು ನೋಡಲು ನಾನು ಕಾತುರನಾಗಿದ್ದೇನೆ.

ಆ ದೃಶ್ಯಾವಳಿಯನ್ನು ಅಮಿತ್ ಶಾ ಯೂಟ್ಯೂಬ್‌ನಲ್ಲಿ ಅಪ್ ಲೋಡ್ ಮಾಡುತ್ತಾನೆಂದು ನಾನು ನಿರೀಕ್ಷಿಸುತ್ತಿದ್ದೇನೆ. ಹಾಗೊಮ್ಮೆ ಆತ ಇತರೆ ಕೆಲಸಗಳಲ್ಲಿ ಬ್ಯುಸಿ ಆಗಿದ್ದರೆ ಅದನ್ನು ಮಾಡಲು ನೀನು ಅದನಿಗೆ ಆದೇಶಿಸು. ನಾವಿಬ್ಬರೂ ಬೇರೆಬೇರೆ ಕಾಲಘಟ್ಟದಲ್ಲಿ ಇದ್ದದ್ದು ಒಂದು ದುರಂತ. ಹದಿನೇಳನೆ ಶತಮಾನದಲ್ಲಿ ನೀನೊಬ್ಬ ಉತ್ತಮ ನಾಯಕನಾಗುತ್ತಿದ್ದೆ ಎಂಬುದು ನನ್ನ ಅಭಿಪ್ರಾಯ. ಆದರೆ ನಾವಿಬ್ಬರೂ ಜೊತೆಗೂಡಿ ಕೆಲಸ ಮಾಡುತ್ತಿದ್ದೆವು ಎಂಬುದರ ಬಗ್ಗೆ ನನಗೆ ಅನುಮಾನಗಳಿವೆ. ಯಾಕೆಂದರೆ ನಾವಿಬ್ಬರೂ ಹೆಬ್ಬಯಕೆಯುಳ್ಳ, ನಿರ್ದಯಿಗಳು ಮತ್ತು ನಮ್ಮನ್ನಲ್ಲದೆ ಇತರರನ್ನು ನಂಬದೆ ಇರುವವರು. ಆದ್ದರಿಂದ ನೀನು ಓರ್ವ ದುರ್ಜನನಾದ ಎದುರಾಳಿ ಆಗಿರುತ್ತಿದ್ದೆ.

ಯಾರಿಗೆ ಗೊತ್ತು, ಹ್ಯಾಯತಃ ಒಂದು ರಸ್ತೆಗೆ ನಾನು ನಿನ್ನ ಹೆಸರಿಡುತ್ತಿದ್ದೆ.

ಇಂತಿ,

ಔರಂಗಜೇಬ



• ಗೌರಿ ಲಂಕೇಶ್


editorlankesh@gmail.com

ಕಂಡಹಾಗೆ

...ಂತಿದ್ದೇನೆ ರುದ್ರಭೂಮಿಯಲಿ

...ಕಂಬಳಿಯ ಕಬ್ಬಕ್ಕಿ ಕನಸಿನ ಗುರುವೇ
...ಕಿವುಚುತ್ತಿದೆ ಈಗಲೂ, ಅರಗುತ್ತಿಲ್ಲ ನೋವು
...ಹರಕೆಯ ಬೈಗುಳ, ಸೆತ್ತಿ ಸೇವರಿಸುವ ಬೆರಳು
...ತಂದೆ, ನಿಮ್ಮ ಕಣ್ಕೊಳಗಾಡುವ ತೊಟ್ಟಿಲು
... ಈಗಲೂ ಒಂದುಂಗುಟದ ಚಪ್ಪಲಿಯ
... ಸದ್ದು, ಇದ್ದೇನೆ. ಅಲ್ಲೇ
... ಹೀಲದ ಮೊದಲ ಬೆಂಚಿನ ಮೊದಲಲ್ಲಿ
...ತಿದ್ದೇನೆ ಗುರುವೆ
...ಸುದು ನೀವು ಬಾಗಿಲಾಚೆಗೆ, ಬೆಳಕಿನ ಕೋಲಂತೆ
...ಪುಸ್ತಕ ಒತ್ತಿ ಹಿಡಿದು

ಹಗಲು ಹದಿನೆಂಟು ತಾಸೂ
ಹಲಬಾಗಿಲು ತೆರೆದಿರಿ
ಹಂಚಿದಿರಿ ಜ್ಞಾನದ ಬೆಳಕು
ಸಾಹಿಗೊಮ್ಮೆ ಧಾರಾಗದಿಯ ಪಾರಸುದಾರಿಕೆ
ಬೆಟ್ಟಿಲು ಹುಡುಕಿದರಿಗೂ ಬಂದು ಬೀಳೊಡುಗೆ



ಕಡೆಗೊಮ್ಮೆ ಮಕ್ಕಳುಮರಿ ಮಾತಿನ ಶರಾ
ತಕರಾರುಗಳಿಗೆ ಕಾರಣವಿತ್ತು ಗುರುವೇ
ಗೌರವಿಸಲು ಅದಕೂ ಹೆಚ್ಚು


ಸತ್ಯ ನುಂಗಲಾಗದು ತಂದೆ, ಉಗುಳಲೂ ಆಗದು
ಕಂಠದೊಳಗೇ ಸುಡುವ ಲಾವಾರಸ, ಕೆಡುತ್ತಲೇ ಇದೆ ಕಲ್ಯಾಣ
ಈ ಇಪ್ಪುದ್ದ ಒಡನಾಟದಲಿ
ನಾನು ಹೊರಗಣವಳೆಂದು ಕಣ್ಣಂಚು
ತೋಯಿಸಿಕೊಂಡಿದ್ದೇ ಬಂತು
ಒಳಗಿನವರಾಗಲು ನಿಮ್ಮ ಪಡಿಪಾಟಲುಗಳ ಕಾಣದೇ
ಸತ್ಯಶೋಧಕ ಸಾಯುತ್ತಲೇ ಇರಬೇಕಾದದ್ದ ತಿಳಿಯದೇ


ಉಡಿಯಲ್ಲಿ ಹಾಕಿದ್ದೀರಿ ಜ್ಞಾನದ ಬಿತ್ತು
ಅಗಿಯುತ್ತೇನೆ ಬಿಲ ಅಗೆವ ಇಲಿಯಂತೆ
ಬುದ್ಧಿ ಚೂಪಾಗಿಸಿಕೊಂಡು
ನಿಂತಿದ್ದೇನೆ ರುದ್ರಭೂಮಿಯಲಿ
ಕಣ್ಣೀರು ಬತ್ತಿ, ಸೂರ್ಯನಿಗೆ ತಲೆಯೆತ್ತಿ


■ ವಿನಯಾ ಒಕ್ಕುಂದ

ಲಂಕೇಶ್

ದಕ್ಷಿಣ ಕನ್ನಡಕ್ಕೆ ನೇಣಾಗಲಿದೆ ನೇತ್ರಾವತಿ ತಿರುವು ಯೋಜನೆ!!








ದಕ್ಷಿಣ ಕನ್ನಡ ಕಂಗಾಲಾಗಿ ಕೂತಿದೆ! ಜಿಲ್ಲೆಯ ಜೀವನದಿ ನೇತ್ರಾವತಿಯನ್ನು ಆಪೋಷನ ಪಡೆಯಲು ರಕ್ಕಸ ರಾಜಕಾರಣಿಗಳು ಗಂಡಾಗುಂಡಿ ಗುತ್ತಿಗೆದಾರರ ಮತ್ತು ಆಯಕಟ್ಟಿನ ಅಧಿಕಾರಿಗಳ ಕಳ್ಳಕೂಟ ಸ್ಕೆಚ್ ಹಾಕಿರುವ ಆತಂಕದಿಂದ ಜನರು ಬೀದಿಗೆ ಬಂದು ಪ್ರತಿಭಟಿಸುತ್ತಿದ್ದಾರೆ. ಇತ್ತ ದಕ್ಷಿಣ ಕನ್ನಡದ ಪಶ್ಚಿಮ ಘಟ್ಟದ ತಪ್ಪಲು ಮತ್ತು ಕರಾವಳಿಯನ್ನು ಬರಡಾಗಿಸುವ ನೇತ್ರಾವತಿ ನದಿ ತಿರುವು ಯೋಜನೆ ಯಾನೆ ಎತ್ತಿನ ಹೊಳೆ ಯೋಜನೆಯಿಂದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು... ಮುಂತಾದ ಪ್ರದೇಶಕ್ಕೆ ತೊಟ್ಟು ನೀರು ಸಿಗದೆಂಬ ತ್ರಿಕಾಲ ಸತ್ಯ ಸಾರುವ ಹೋರಾಟದ ಕಿಚ್ಚೀಗ ಇಡೀ ದಕ್ಷಿಣ ಕನ್ನಡಕ್ಕೆ ಹಬ್ಬಿಬಿಟ್ಟಿದೆ!

ಈ ಪ್ರಳಯಾಂತಕ ಪ್ರಾಜೆಕ್ಟ್ ಮಾಡಿಯೇ ತೀರುವ ಸ್ವಾರ್ಥದ ಹಠಕ್ಕೆ ಬಿದ್ದಿರುವುದು ಮತ್ತ್ಯಾರೂ ಅಲ್ಲ; ದಕ್ಷಿಣ ಕನ್ನಡವೇ ಹೆತ್ತ ಡಬ್ಬಲ್‌ಗೇಮ್ ಪ್ರವೀಣದ್ವಯರಾದ ವೀರಪ್ಪ ಮೊಯ್ಲಿ ಮತ್ತು ಸದಾನಂದ ಗೌಡ! ಊರಿಗೆಂದೂ ಉಪಕಾರಿ ಅಲ್ಲದ ಈ ಮಾಜಿ ಸಿಎಂಗಳಿಬ್ಬರೂ ಮನೆಗೆ ಹೆಮ್ಮಾರಿಯಂತಾಗಿದ್ದಾರೆ. ಹುಸಿ ನಗೆಯ ಮೊಯ್ಲಿ-ಗೌಡ ನಂಬಿಕೆಗೆ ಅನರ್ಹರೆಂದೇ ಹೆತ್ತೂರಿನ ಜನರು ಅವರಿಬ್ಬರನ್ನು ದೂರ ಓಡಿಸಿದ್ದಾರೆ. ರಾಜಕೀಯ ಅಸ್ತಿತ್ವಕ್ಕಾಗಿ ಊರೂರು ಅಲೆಯುತ್ತ ಹೊರಟ ಗೌಡ ಬೆಂಗಳೂರಲ್ಲಿ ಬೇರಿಳಿಸಿದರೆ, ಮೊಯ್ಲಿ ಚಿಕ್ಕಬಳ್ಳಾಪುರದ ಪಾಲಾಗಿದ್ದಾರೆ. ಎಂಪಿ ಆಗುವ ಉದ್ದೇಶದಿಂದ ಬೆಂಗಳೂರು-ಚಿಕ್ಕಬಳ್ಳಾಪುರದ ಜನರಿಗೆ ನೇತ್ರಾವತಿ ನೀರು ಕೊಡಿಸುವ 'ಆಸೆ ತೋರಿಸಿ







ಯಾಮಾರಿಸುತ್ತಿದ್ದಾರೆ. ನೇತ್ರಾವತಿ ಯೋಜನೆ ಅಸ್ತ್ರ ಮಾಡಿಕೊಂಡು ಆಟ ಆಡುತ್ತಿರುವ ಇವರೆಂಥ ದ್ರೋಹಿಗಳೆಂದರೆ, ಹೆತ್ತೂರಿಗಷ್ಟೇ ಅಲ್ಲ, ಆಶ್ರಯ ನೀಡಿದ ಪ್ರದೇಶಕ್ಕೂ ವಂಚನೆ-ಮೋಸ ಮಾಡುತ್ತಿದ್ದಾರೆ!!

ನೇತ್ರಾವತಿ ನದಿ ತಿರುವು ಅಥವಾ ಎತ್ತಿನ ಹೊಳೆಯ ಯೋಜನೆ ಅವೈಜ್ಞಾನಿಕವಷ್ಟೇ ಅಲ್ಲ, ಪಕ್ಕಾ ಅಸಮರ್ಪಕ ಎಂಬುದು ಕರಾವಳಿ, ಬಯಲು ಸೀಮೆ ಮತ್ತು ಹಾಸನ ಕಡೆಯ ಮಲೆನಾಡಿಗರಿಗೆಲ್ಲ ಗೊತ್ತಿರುವ ವಾಸ್ತವ. ಆದರೆ ಕರಾವಳಿ ಸೀಮೆಯ ಮಾಜಿ ಸಂಸದ ಕಾಂಗ್ರೆಸ್‌ನ ಮುದಿ ಮುತ್ಸದ್ದಿ ಜನಾರ್ದನ ಪೂಜಾರಿಯಿಂದ ಹಾಲಿ ಸಂಸದ ಬಿಜೆಪಿಯ ಭಂಡ ನಳಿನ್‌ಕುಮಾರ್ ಕಟೀಲು ತನಕ, ಅಲ್ಲಿಂದ ಕಾಂಗ್ರೆಸ್ ಮಂತ್ರಿ ರಮಾನಾಥ್ ರೈಯಿಂದ ಬಿಜೆಪಿಯ ಅಂಗಾರಾ ತನಕದ ನೇತ್ರಾವತಿ ಪಾತ್ರದ ಅಷ್ಟೂ ಎಮ್ಮೆಲ್ಲೆಗಳವರೆಗೆ ನೇತ್ರಾವತಿ ನದಿ ನೀರು ರಾಜಕೀಯ ಮಾಡುತ್ತಿದ್ದಾರೆ. ಯೋಜನೆ ಪರವಿರುವ ಮತ್ತು ವಿರೋಧಿಸುವವರಿಗೂ ಇದೊಂದು ಓಟು ಬ್ಯಾಂಕ್ ಬಾನಗಡಿಯಂತಾಗಿದೆ.

ನೇತ್ರಾವತಿ ನೀರು ಯೋಜನೆ

ರಾಜ್ಯದ ಪೂರ್ವ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಎಂಬ ಲೇಬಲ್ ನೇತ್ರಾವತಿ ನದಿ ತಿರುವು ಯೋಜನೆಗೆ ಆಳುವ ವರ್ಗದವರ ಪಂಡಿತರು ಅಂಟಿಸಿದ್ದಾರೆ. ಅಧಿಕಾರಸ್ಥರು ಹೇಳುವ ಪ್ರಕಾರ ಎತ್ತಿನ ಹೊಳೆಯಲ್ಲಿ 24 ಟಿಎಂಸಿ ನೀರಿದೆಯಂತೆ! ಇದರಲ್ಲಿ ಬಯಲುಸೀಮೆಗೆ ಬೇಕಾದ 5 ಟಿಎಂಸಿ ನೀರು ಬೃಹತ್ ಕೊಳವೆಗಳ ಮೂಲಕ ಒಯ್ಯಲಾಗುತ್ತದಂತೆ.

2002ರಲ್ಲಿ ರಾಜ್ಯ ಭೀಕರ ಬರಗಾಲ ಎದುರಿಸಿದಾಗ ಸಿಎಂ ಆಗಿದ್ದವರು ಎಸ್ಸೆಂ ಕೃಷ್ಣ. ಆ ಹೊತ್ತಲ್ಲಿ ದಕ್ಷಿಣ ಕನ್ನಡದ ಪ್ರಮುಖ ನದಿ ನೇತ್ರಾವತಿಯನ್ನು ತಿರುಗಿಸಿ ಬೆಂಗಳೂರು-ಕೋಲಾರ ಕಡೆ ತಂದರೆ ಬರ ನೀಗಬಹುದೆಂಬ ಐಡಿಯಾ ಸಿಎಂಗೆ ಪರ್ಯಾವರ್ಣ ಪ್ರಭೃತಿಗಳು ಕೊಡುತ್ತಾರೆ. ಹಿಂದೆ-ಮುಂದೆ ಯೋಚಿಸದೆ ಎಸ್ಸೆಂ ಕೃಷ್ಣ ನೇತ್ರಾವತಿ ನದಿ ತಿರುಗಿಸಿದರೆ ಏನಾಗುತ್ತದೆಂಬ ವರದಿ ಕೊಡುವಂತೆ ಪರಿಸರ ತಜ್ಞ ಪರಮಶಿವಯ್ಯರಿಗೆ ಕೇಳುತ್ತಾರೆ. ಪರಮಶಿವಯ್ಯ ನೇತ್ರಾವತಿ ನದಿ ತಿರುವು ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಒಪ್ಪಿಸುತ್ತಾರೆ. ಈ ವರದಿಯಲ್ಲಿ ನದಿ ಹೇಗೆ ತಿರುಗಿಸಬೇಕು, ಅದಕ್ಕೆಷ್ಟು ವೆಚ್ಚವಾಗಬಹುದು, ಅದರಿಂದ ಕೋಲಾರದ ಕಡೆಗೆ ನೀರು ಅದೆಷ್ಟು ತರಲು ಸಾಧ್ಯವೆಂಬ 'ಅಸಾಧ್ಯ' ಕಲ್ಪನೆಗಳಿರುತ್ತವೆ.

ಕುದುರೆಮುಖದ ಎಳನೀರು ಘಾಟಿಯ ಬಂಗ್ರಬಲಿಗೆ ಎಂಬಲ್ಲಿ ಹುಟ್ಟುವ ನೇತ್ರಾವತಿ ಚಿಕ್ಕ-ಪುಟ್ಟ ನದಿ-ತೊರೆಗಳನ್ನು ತನ್ನೊಡಲಲ್ಲಿ ಸೇರಿಸಿಕೊಳ್ಳುತ್ತ ಉಪ್ಪಿನಂಗಡಿ ಬಳಿಯ ಕುಮಾರಧಾರ ನದಿಯಲ್ಲಿ ಲೀನವಾಗುತ್ತದೆ. ನಂತರ ಅರಬ್ಬೀ ಸಮುದ್ರ ಸೇರುತ್ತದೆ. ಸದ್ರಿ ನೇತ್ರಾವತಿ, ಕುಮಾರಧಾರ ಮತ್ತಿತರ ಉಪನದಿಗಳ ನೀರು ಎತ್ತಿ ಬೆಂಗಳೂರಿಗೆ ತರುವ ತರಲೆ ಯೋಜನೆಯತ್ತ ಕೃಷ್ಣ ಲಕ್ಷ್ಯ ವಹಿಸುವ ಹೊತ್ತಿಗೆ ಆತ ಮಾಜಿಯಾಗಿ ಹೋದರು. ಆ ಬಳಿಕ ಬಂದ ಎರಡ್ಮೂರು ಮುಖ್ಯಮಂತ್ರಿಗಳೂ ಇತ್ತ ತಲೆ ಹಾಕಲಿಲ್ಲ. ಯಾವಾಗ ಅಚಾನಕ್ ಸದಾನಂದಗೌಡ ಎಂಬ ಗಾಂಪ ಸಿಎಂ ಕುರ್ಚಿಗೇರಿದರೋ ಆಗಾತ ನೇತ್ರಾವತಿಗೆ ಹಾಕುವ ಕೃತ್ಯಕ್ಕೆ ಕೈಹಾಕುತ್ತಾರೆ. 2025ರಲ್ಲಿ ಮುಗಿ[...] ಅಂದಾಜಿನ ತಿರುವು ಯೋಜನೆಗೆ ಆರಂಭದಲ್ಲಿ[...] ಹಣ 8,323.50 ಕೋಟಿ ರೂಪಾಯಿಗಳು. 20[...] ಅಂದರೆ ಸಿದ್ದು ಕಾಲಕೀರ್ದಿಯಲ್ಲಿ 12,912.36 [...] ರೂ. ಬೇಕಾಗುವ ಲೆಕ್ಕ ಹಾಕಲಾಗಿದೆ. ಈಗಾಗಲೇ[...] ಕೋಟಿಗೂ ಹೆಚ್ಚು ಹಣ ವ್ಯಯಿಸಲಾಗಿದೆ.

ಅಸಾಧ್ಯ ಯೋಜನೆ!

ಈಗಿನ ನೀರಾವರಿ ಮಂತ್ರಿ ಎಂ.ಬಿ. ಪಾಟ[...] ನೇತ್ರಾವತಿ ತಿರುವು ಯೋಜನೆಗೆ ಕನಿಷ್ಠವೆಂದರ[...] ಲಕ್ಷ ಕೋಟಿ ಬೇಕೇಬೇಕೆಂದು ಅಂದಾಜು ಹಾ[...] ಹಾಗಿದ್ದರೆ ಮುಗಿಯುವುದು ಯಾವಾಗ ಎಂದು ಕೆ[...] ಆಳುವವರ ಹತ್ತಿರ ಸಮರ್ಪಕ ಉತ್ತರವಿಲ್ಲ. [...] ಜಿಲ್ಲೆಯ ವಾರಾಹಿ ನೀರಾವರಿ ಯೋಜನೆ ಮೂರು[...] ಮುಗಿದರೂ ಪೂರ್ಣವಾಗಿಲ್ಲ. ಕಳಸಾ-ಬಂಡೂರಿ ಯ[...] ಮೂರೂ ಮುಕ್ಕಾಲು ದಶಕದಿಂದ ಹಾಗೇ [...] ಸಾಗಿದೆ. ಕೃಷ್ಣಾ ಮೇಲ್ದಂಡೆ ಪ್ರಾಜೆಕ್ಟ್‌ಗೆ 30 [...] ಪ್ರಾಯವೀಗ!

ನೇತ್ರಾವತಿ ಯೋಜನೆಯಿದೆಯಲ್ಲ, [...] ಕಾರ್ಯಸಾಧುವಾದುದೇ ಅಲ್ಲ. ಒಂದು ಶತಮಾನ [...] ಒಂದು ಹನಿ ನೀರು ರಾಜ್ಯದ ಪೂರ್ವ ಜಿಲ್ಲೆಗಳಿಗೆ [...] ಸಾಧ್ಯವೇ ಇಲ್ಲ. ನೇತ್ರಾವತಿ-ಕುಮಾರಧಾರ ನದಿ [...] ಬೇರೆಡೆ ಸಾಗಿಸುವಷ್ಟು ನೀರೇ ಇಲ್ಲ! ರಾಜ್ಯದ ನೀ[...] ನಿಗಮದ 'ಜ್ಞಾನಿ'ಗಳು ಕುಂತಲ್ಲೇ ನೇತ್ರಾವತಿ-ಎತ್ತಿ[...] ಕಣಿವೆಯಲ್ಲಿ ಬರೋಬ್ಬರಿ 24 ಟಿಎಂಸಿ ನೀರಿದೆ [...] ಸುಳ್ಳು ವರದಿ ತಯಾರಿಸಿದ್ದಾರೆ. ಇದ್ಯಾಕೋ ಎಡವ[...] ಎಂದು ಭಾವಿಸಿದ ಆಳುವವರು ಭಾರತೀಯ [...] ಸಂಸ್ಥೆಯ ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರರಾ[...] ಅಧ್ಯಯನಕ್ಕೇ ನೇಮಿಸಿದ್ದರು.


ಎತ್ತಿನ ಹೊಳೆ ಯೋಜನೆಗೆ ಸಿಗುವ ನೀರು[...] 9.55 ಟಿಎಂಸಿ ಎಂದು ರಾಮಚಂದ್ರರಾವ್ ಕರಾರು[...] ಕಂಡುಕೊಂಡಿದ್ದಾರೆ. ಇದರಲ್ಲಿ ನೇತ್ರಾವತಿ ಕಣಿವೆ [...] ಬಳಕೆಗೆ 6 ಟಿಎಂಸಿ ಬೇಕಾಗುತ್ತದೆ. 2 ಟಿಎಂಸಿ [...] ಅಸ್ತಿತ್ವಕ್ಕಾಗಿ ಹಾಗೇ ಬಿಡಬೇಕಾಗುತ್ತದೆ. ಅಂದರೆ ಸ[...] 1 ಟಿಎಂಸಿಯಷ್ಟೂ ನೀರು ಕೋಲಾರ ಕಡೆ ಒಯ್[...] ಎಂಬುದು ಈ ಲೆಕ್ಕಾಚಾರದ ಅರ್ಥ! ಇದೆಲ್ಲ ಗೆ[...] ವಿಪಕ್ಷ ಬಿಜೆಪಿ ಮತ್ತು ಆಳುವ ಪಾರ್ಟಿ ಕಾ[...] ಕರಾಮತ್ತುಗಾರರು ನೇತ್ರಾವತಿ ತಿರುವು ಯೋ[...] ಹೆಸರಲ್ಲಿ ಕೊಳಕು ರಾಜಕಾರಣದ ಕಸರತ್ತು ನ[...] ದಕ್ಷಿಣ ಕನ್ನಡದ ಜನರಿಗಷ್ಟೇ ಅಲ್ಲ ಬಯಲು [...] ಹಾಸನ ಸೀಮೆ ಜನರಿಗೂ ಅನ್ಯಾಯ ಮಾಡು[...] ಹಾಸನ ಜಿಲ್ಲೆಯಲ್ಲಿ ಸಮುದ್ರಮಟ್ಟದಿಂದ 750 [...] ಎತ್ತರದಲ್ಲಿ ಹುಟ್ಟುವ ಎತ್ತಿನಹೊಳೆ ನದಿಯ [...] 900 ಮೀಟರ್ ಎತ್ತರಕ್ಕೆ ಪಂಪು ಮಾಡುವ ಪ್ರ[...] ವ್ಯರ್ಥ ಸಾಹಸ.


ಕುಮಾರಧಾರಾಗೂ ಕಂಟಕ

ಎತ್ತಿನ ಹೊಳೆ ಪ್ರಾಜೆಕ್ಟ್ ಬೋಗಸ್ [...] ಮೊಯ್ಲಿ ಮಹಾತ್ಮ, ಡೀವಿ ಸಾಹೇಬರಾದಿಯಾಗಿ [...] ಮಂತ್ರಿ ಪಾಟೀಲರ ತನಕದ ಪ್ರಭೃ[...] ಗೊತ್ತಾಗಿಹೋಗಿದೆ. ಹಾಗಾಗಿಯೇ ಕುಮಾ[...] ನದಿಯನ್ನು ಸೇರಿಸಿಕೊಂಡು ಯೋಜನೆ ಕಾ[...] ಮಾಡಲು ರಹಸ್ಯ ಕಾರ್ಯಾಚರಣೆ ನಡೆಸಿದ್ದಾರೆ. [...] ಕಪಿಲೆಗೂ ಕಂಟಕ ಖಂಡಿತ. ಹೊಂಗಡಹಳ್ಳ[...] ಹೊಳೆ, ಎತ್ತಿನ ಹೊಳೆ, ಕಾಡುಮನೆ ಹೊಳೆ, ಕೇ[...] ಮುಂತಾದೆಡೆ ಒಟ್ಟು ಎಂಟು ಕಡೆ ಒಡ್ಡು ಕಟ್ಟಲಾ[...] ಅಲ್ಲಿಂದ ಹನ್ನೆರಡೂವರೆ ಅಡಿ ವ್ಯಾಸದ ಕೊಳವೆಗ[...] ಸಕಲೇಶಪುರದ ಹರದನಹಳ್ಳಿ ಎಂಬಲ್ಲಿ ಕಟ್ಟಲಾಗು[...] ತೊಟ್ಟಿಗೆ ಸಾಗಿಸಲಾಗುತ್ತದೆ. ಇದಕ್ಕೆ ವಿದ್ಯುತ್‌ಚಾಲಿ[...] ಯಂತ್ರಗಳು ಅವಶ್ಯ.

ಈ ಪೈಪ್ ಮತ್ತು ವಿದ್ಯುತ್ ಲೈನ್ [...] ನೂರಿಪ್ಪತ್ತು ಅಡಿ ಜಾಗಬೇಕು. ಇದಕ್ಕಾಗಿ[...] ಕಡಿಯಲೇಬೇಕು. ಕಮ್ಮಿಯೆಂದರೂ 60 [...]

ಎತ್ತಿನಹೊಳೆ ಯೋಜನೆಯ ನಕ್ಷೆ




ಸಿದ್ದು

ದಾರಿಯುದ್ದಕ್ಕೂ 60 ಹೆಕ್ಟೇರ್ ರಕ್ಷಿತಾರಣ್ಯದ
...ನಾಶವಾಗುತ್ತದೆ. ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ
... ಮಂದಿ ಈಗಾಗಲೇ ಯೋಜನೆಯ ಕಾಮಗಾರಿ
...ಹಚ್ಚಿಕೊಂಡಿದೆ. ಶೋಲಾ ಕಾಡು ನಿರ್ನಾಮದಿಂದ
...ಏರುಪೇರಾಗಲಿದೆ. ಮಳೆ ಬರದಿರುವ ವಾತಾವರಣ
...ಣವಾಗಲಿದೆ. ಮಳೆ ಕಾಡು ಧ್ವಂಸವಾದರೆ ಆಗುವ
...ಮದ ಅರಿವು ಹೆಡ್ಡ ಆಳುವ ಮಂದಿಗೆ ಇರಲು
...ಾ? ಕಾಮಗಾರಿಯ ಪರ್ಸೆಂಟೇಜ್, ಕಿಕ್‌ಬ್ಯಾಗ್
...ರಿಗೆ ಪರಿಸರ ಸಮಸ್ಯೆ ಅದ್ಹೇಗೆ ಅರ್ಥವಾದೀತು?

ಪರಿಸರ ಪರವಾನಗಿ ಇಲ್ಲ!

...ತ್ರಾವತಿ ತಿರುವು ಯೋಜನೆ ಹಲವು ಪರಿಸರ
...ಮ-ಕಟ್ಟಳೆಗಳಿಗೆ ವಿರುದ್ಧವಾಗಿದೆ.
...ಗಿಯೇ ಸದ್ರಿ ಪ್ರಾಜೆಕ್ಟ್‌ಗೆ ಕೇಂದ್ರ
... ಮತ್ತು ಪರಿಸರ ಇಲಾಖೆಯ
...ಮತಿ ಸಿಕ್ಕಿಲ್ಲ. 2006ರ
...ನ್‌ಮೆಂಟಲ್ ಇಂಪ್ಯಾಕ್ಟ್
...ಮೆಂಟ್ ನೋಟಿಫಿಕೇಷನ್
... ಈ ಯೋಜನೆಗೆ ಹತ್ತಾರು
...ಕುಗಳು ಎದುರಾಗಿದೆ.
...ಗಿಯೇ ಆಳುವವರ ಅಧಿಕಾರಿ
...ಡ್ಡದಾರಿ ಹಿಡಿದಿದೆ. ನೇತ್ರಾವತಿ
...ತಿರುವು ಯೋಜನೆಗೆ ಈ
...ಸಲ್ಲೇ 'ಎತ್ತಿನ ಹೊಳೆ ಕುಡಿವ
... ಯೋಜನೆ' ಎಂಬ ನಕಲಿ
... ಇಡಲಾಗಿದೆ. ಜಲವಿದ್ಯುತ್
... ಮತ್ತು ನೀರಾವರಿ ಯೋಜನೆ
...ದು ಸುಳ್ಳು ಹೇಳಲಾಗಿದೆ.
...009ರಲ್ಲಿ ಆಗಿರುವ ಪರಿಸರ
...ತಿದ್ದುಪಡಿ ಪ್ರಕಾರ ಕುಡಿಯುವ
... ಯೋಜನೆಗೆ ಕೇಂದ್ರ ಪರಿಸರ
...ಯ ಪರವಾನಗಿ ಅವಶ್ಯವಿಲ್ಲ.
...ದು ಕುಡಿಯುವ ನೀರಿನ
... ಎಂದು ಬಿಂಬಿಸಿದರೆ ಅರಣ್ಯ, ಜೀವ ವೈವಿಧ್ಯ
...ವಿ ಸಂರಕ್ಷಣಾ ಕಾಯ್ದೆಯನ್ನೆಲ್ಲ
...ರಿಸಬಹುದೆಂಬ ಷಡ್ಯಂತ್ರ ಹೆಣೆಯಲಾಗಿದೆ.
...ತರ ರೂ. ಪೈಪ್, ಯಂತ್ರಗಳನ್ನು ತಂದು ಕಾಮಗಾರಿ
...ಸಲಾಗಿದೆ. ಆದರೆ ತೊಂದರೆಯಂತೂ ತಪ್ಪಿದ್ದಲ್ಲ.
...ರಂಗನ್ ವರದಿ ಜಾರಿಯಾದರೆ ನೇತ್ರಾವತಿ
...ಯಲ್ಲಿ ಪರಿಸರ ಮಾರಕವಾದ ಈ ಯೋಜನೆ
...ು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ, ಆನೆ ಕಾರಿಡಾರ್
...ದಲ್ಲೇ ಈ ಯೋಜನೆ ಬರುತ್ತದೆ. ನೇತ್ರಾವತಿ ತಿರುವು
...ನೆ ಆನೆ ಕಾರಿಡಾರಲ್ಲಿ ಮಾಡಲು ಹೇಗೆ ಸಾಧ್ಯ?
... ಕಾನೂನಿಗದು ವಿರುದ್ಧ! ರಾಷ್ಟ್ರೀಯ ನೀರಾವರಿ
...ಂತೆ ನದಿಗಳನ್ನು ತಿರುಗಿಸುವುದು ನಿಷಿದ್ಧ.

ಪ್ರಳಯಾಂತಕ ಪ್ರಾಜೆಕ್ಟ್


...ಲ್ಲ ಪರಿಸರ ನಿಯಮ-ನೀತಿಗೆ ವಿರುದ್ಧವಾಗಿರುವ
... ಜೀವಸಂಕುಲಕ್ಕೆ ಮಾರಕವಾದ ಎತ್ತಿನ ಹೊಳೆ
...ನೆ ವಿರುದ್ಧ ಪರಿಸರ ಪ್ರಿಯರು ಕೋರ್ಟಿಗೆ
...ದ್ದಾರೆ. ಈ ಯೋಜನೆ ಕೈಗೊಂಡರೆ ಕೋಲಾರ..
... ಬರ ನೀಗುವುದಿರಲಿ, ಹಚ್ಚ ಹಸಿರಿನ ದಕ್ಷಿಣ
...ನೇತ್ರಾವತಿ ಪರಿಸರ ಬರಡಾಗೋದು ಗ್ಯಾರಂಟಿ.
... ಜನರಿಗೆ ಕುಡಿವ ನೀರಿಗೂ ತತ್ವಾರ ಬರಲಿದೆ.
...ಲ ಕಡಿಮೆಯಾಗಿ ಕೃಷಿ ನಶಿಸಲಿದೆ. ಬೋರ್‌ವೆಲ್
...ು ಬತ್ತಲಿವೆ. ನದಿಯಲ್ಲಿ ನೀರು ಕಡಿಮೆಯಾಗಿ
... ಮುಂದಕ್ಕೆ ಬಂದು ನದಿ ನೀರು ಉಪ್ಪಾಗಲಿದೆ.
... ಸಂತತಿಗೆ ಮಾರಕವಾಗಲಿದೆ. ಎತ್ತಿನ ಹೊಳೆಯಲ್ಲಿ
...ಡಿ ಎತ್ತರದ ಡ್ಯಾಮ್ ಕಟ್ಟಲಾಗುತ್ತದೆ. ಅಲ್ಲಿರುವ
... ಮಷ್ಟು ಎಷ್ಟು ಗೊತ್ತಾ ಬರೀ ಎರಡೇ ಎರಡು


...ಷ್ಟು ಎಡವಟ್ಟುಗಳಿಂದಲೇ ತುಂಬಿರುವ ಯೋಜನೆ
...ಅನಾಹುತಕಾರಿ ಎಂಬ ಅಧ್ಯಯನ ವರದಿಗಳು
...ಬಂದಿದೆ. ಆದೆಲ್ಲಾ ಸಿದ್ದು ಕಚೇರಿಗೂ ತಲುಪಿದೆ.

ಅನೇಕ ವಿಜ್ಞಾನಿಗಳು, ಪರಿಸರ ಅಧ್ಯಯನಶೀಲರು, ತಜ್ಞರು ಸದ್ರಿ ಯೋಜನೆ ಬೋಗಸ್ ಎಂಬುದನ್ನು ಸರ್ಕಾರಕ್ಕೆ ಖಡಾಖಂಡಿತವಾಗಿ ತಿಳಿಸಿದ್ದಾರೆ. ಅಮೆರಿಕಾದ ಕೊಲೆರಡೊ ನದಿ ಮತ್ತು ಆಸ್ಟ್ರೇಲಿಯಾದ ಸೋವಿಯಾ ನದಿ ತಿರುವು ಯೋಜನೆಗಳಿಂದ ಆಗಿರುವುದಕ್ಕಿಂತ ಹೆಚ್ಚು ಅಪಾಯ ನೇತ್ರಾವತಿ ನದಿ ತಿರುವು ಯೋಜನೆ ಉರುಫ್ ಎತ್ತಿನ ಹೊಳೆ ಯೋಜನೆಯಿಂದಾಗಲಿದೆ ಎಂಬ ಆತಂಕ ಪರಿಸರವಾದಿಗಳನ್ನು ಕಾಡತೊಡಗಿದೆ.

ಕುಡಿಯುವ ನೀರಿಗಿದೆ ಬೇರೆ ದಾರಿ!

ಎತ್ತಿನ ಹೊಳೆ ಯೋಜನೆ ಎಂಬುದು ಎಂದಿಗೂ ಕಾರ್ಯಗತವಾಗದ ಮೋಸದ ಮಸಲತ್ತು, ಕುಟಿಲ ರಾಜಕಾರಣಿಗಳು ಮತ್ತು ಕಳ್ಳ ಕಂಟ್ರಾಕ್ಟರ್‌ಗಳ ಯೋಜನೆಯಿದು; ಬೊಕ್ಕಸವನ್ನು ನಿರಂತರ ಲೂಟಿ ಮಾಡುವ ಪ್ಲಾನ್. ಕೋಲಾರ-ತುಮಕೂರು ಏರಿಯಾದ ನೀರಿನ ಅವಶ್ಯಕತೆ ಪೂರೈಸಲು ಬೇಕಷ್ಟು ಬೇರೆ ಯೋಜನೆಗಳಿವೆ. ಯಶಸ್ವಿಯಾಗಿ ಮಾಡಿ ಮುಗಿಸಬಹುದಾದ, ಯೋಜನಾ ವೆಚ್ಚವೂ ಕಡಿಮೆಯಾದ ಹಲವು ಯೋಜನೆಗಳಿವೆ. ಅರ್ಕಾವತಿ, ಪಾಲಾರ್, ಕುಶಾವತಿ, ಪಿನಾಕಿನಿ.... ಮುಂತಾದ ನದಿಗಳಲ್ಲಿ ನೀರುಕ್ಕುವಂತೆ ಸರ್ಕಾರ ಮಾಡಬಹುದು. ಇದರಿಂದ ಬೆಂಗಳೂರು-ಕೋಲಾರದ ನೀರಿನ ದಾಹ ತಣಿಸಲು ಸಾಧ್ಯ! ಈ ನದಿಗಳಿಗೆ ಮರುಜೀವ ತರುವ ಅಧ್ಯಯನದ ಹಲವು ವರದಿಗಳು ಸರ್ಕಾರದಲ್ಲಿವೆ. ಹಾಗೆಯೇ ಕೋಲಾರ ಜಿಲ್ಲೆಯಲ್ಲಿರುವ ಸುಮಾರು 4,488 ಕೆರೆಗಳ ಅಭಿವೃದ್ಧಿ ಮಾಡಿದರೆ ನೀರಿನ ಬರ, ಅಂತರ್ಜಲದ ಸಮಸ್ಯೆ ಬರಲಾರೆಂದು ಡಾ. ಲಕ್ಷ್ಮೀಶ ಸಿಂಗ್-ಡಾ. ರಾಜೇಂದ್ರ ಸಿಂಗ್ ವರದಿಯಲ್ಲಿ ಹೇಳಲಾಗಿದೆ. ಇದಕ್ಕೆ ಬೇಕಾಗುವ ಹಣ ಕೇವಲ 570 ಕೋಟಿ ಅಷ್ಟೇ! ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಬೇಕಾಗುವ ಕುಡಿಯುವ ನೀರು ಕೇವಲ 6 ಟಿಎಂಸಿ ಮಾತ್ರ. ಇಲ್ಲಿ ವಾಡಿಕೆಯಂತೆ 200 ಟಿಎಂಸಿ ಮಳೆಯಾಗುತ್ತದೆ. ಈ ಮಳೆ ನೀರಿನಿಂದ ತೀರಾ ಕಡಿಮೆ ಖರ್ಚಿನಲ್ಲಿ 6 ಟಿಎಂಸಿ ಕುಡಿಯುವ ನೀರು ಪಡೆಯಬಹುದು.




ಎಂ.ಬಿ. ಪಾಟೀಲ್

ಹೋರಾಟ

ಕಾರ್ಯಸಾಧುವಾದ, ಅಗ್ಗದ ನೀರಾವರಿ ಯೋಜನೆಗಳ ವರದಿಗಳನ್ನೆಲ್ಲ ಬಚ್ಚಿಟ್ಟು, ಸಾಧ್ಯವಿಲ್ಲದ-ದುಬಾರಿ ನೇತ್ರಾವತಿ ತಿರುವು ಯೋಜನೆಗೆ ಸರ್ಕಾರಿ ಮಂದಿ ಕೈಹಾಕಿರುವುದು ದುರಂತವೇ ಸರಿ. ದಕ್ಷಿಣ ಕನ್ನಡ ಜನರೀಗ ಬೀದಿಗಿಳಿದಿದ್ದಾರೆ. ಆಳುವವರ ಧಗಾ-ದಗಲ್‌ಬಾಜಿತನದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವರದಿ ಬರೆಯುತ್ತಿರುವ ವೇಳೆಗೆ ಕುಮಾರಧಾರ-ನೇತ್ರಾವತಿ ಸಂಗಮ ಸ್ಥಳವಾದ ಉಪ್ಪಿನಂಗಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಎತ್ತಿನಹೊಳೆ ಯೋಜನೆಗೆ ಧಿಕ್ಕಾರ ಹಾಕಿದ್ದಾರೆ.

ದೊಡ್ಡ ಸಂಖ್ಯೆಯಲ್ಲಿ ಜನ ಜಮೆಯಾಗಿದ್ದರು. ಎರಡು ತಾಸು ರಸ್ತೆ ಬಂದ್ ಮಾಡಲಾಗಿತ್ತು. ಸೋಗಲಾಡಿ ಸಂಸದ ನಳಿನ್, ಪುತ್ತೂರು ಶಾಸಕಿ ಶಕುಂತಲಾ ಶೆಟ್ಟಿ, ಬೆಳ್ತಂಗಡಿ ಶಾಸಕ ವಸಂತ ಬಂಗೇರಾ ಪ್ರತಿಭಟನೆಯಲ್ಲಿದ್ದರು. ಈಗ ಎಚ್ಚೆತ್ತುಕೊಳ್ಳಬೇಕಾಗಿರುವುದು ಪೂರ್ವ ಜಿಲ್ಲೆಯ ಜನರು. ನೀರು ಕೊಡಲಾಗದ ಈ ಬೋಗಸ್ ಯೋಜನೆ ತಮಗೆ ಬೇಕಾಗಿಲ್ಲವೆಂದು ಜನರು ಮೋಸಗಾರ ಮೊಯ್ಲಿ, ಸಮಯಸಾಧಕ ಸದಾನಂದಗೌಡರಿಗೆ ಮುಖಕ್ಕೆ ಹೊಡೆದಂತೆ ಹೇಳಬೇಕಿದೆ. ಕೆರೆ-ನದಿಗಳ ಪುನರ್ಜೀವಗೊಳಿಸಲು ಆಗ್ರಹಿಸಬೇಕಿದೆ. ತಲೆಕೆಟ್ಟ ರಾಜಕಾರಣಿಗಳಿಗೆ ಬುದ್ಧಿ ಕಲಿಸಬೇಕಿದೆ! ನದಿಯಲ್ಲೇ ನೀರಿಲ್ಲದಿರುವಾಗ ಯೋಜನೆಗೇನು ಅರ್ಥ?!

ಎತ್ತಿನ ಹೊಳೆ ಯೋಜನೆಯಲ್ಲಿ ಕಾಂಗ್ರೆಸ್-ಬಿಜೆಪಿ ಭಾಯಿ-ಭಾಯಿ! ಕದ್ದು-ಮುಚ್ಚಿ ಪ್ಲಾನ್-ಪ್ರಾಜೆಕ್ಟ್ ಮಾಡಲಾಗುತ್ತಿದೆ. ನೇತ್ರಾವತಿ-ಕುಮಾರಧಾರ-ಕಪಿಲೆ-ಎತ್ತಿನ ಹೊಳೆ ಹೀಗೆ ದಕ್ಷಿಣ ಕನ್ನಡದಿಂದ-ಚಿಕ್ಕಬಳ್ಳಾಪುರ ವರೆಗಿನ ಪಶ್ಚಿಮ ಘಟ್ಟದ ಎಲ್ಲ ನದಿ ಸೇರಿಸಿ 'ನೀರಿನ ಪ್ಲಾನ್' ಮಾಡುವ ದೂ(ದು)ರಾಲೋಚನೆ ಆಳುವವರಿಗಿರುವಂತಿದೆ. ಇದು ಬಂಡವಾಳಶಾಹಿ ಕೈಗಾರಿಕೋದ್ಯಮಿಗಳ ಹಿತ ರಕ್ಷಣೆಯ ಯೋಜನೆ ಎಂಬುದು ಬಹಿರಂಗ ರಹಸ್ಯ. ಒಂದು ವೇಳೆ ಎಲ್ಲ ನದಿ ಸೇರಿಸಿ ಬೆಂಗಳೂರಿಗೆ ನೀರು ತಂದರೂ ಜನಸಾಮಾನ್ಯರ ದಾಹ ತಣಿಸುವುದಿಲ್ಲ!

ಅದು ಉಳ್ಳವರಿಗಾಗಿ ಮಾಡಿರುವ ಯೋಜನೆ. ದಕ್ಷಿಣ ಕನ್ನಡ ಮತ್ತು ಪೂರ್ವ ಜಿಲ್ಲೆಯ ಜನರಿಗೆಲ್ಲರಿಗೂ ಇದು ದೋಖಾ ಯೋಜನೆ!! ಜನರ ಆಕ್ರೋಶ ಭುಗಿಲೇಳುವ ಮೊದಲೇ ಆಳುವವರು ಎಚ್ಚೆತ್ತುಕೊಳ್ಳಬೇಕಿದೆ!

■ ನಹುಷ

ನಿಮ್ಮ ಸರಕಾರ ಹಿಂದಿನ ಸರಕಾರದ್ದಾಗಿದೆ


ಥೂತ್ತೇರಿ

— ಯಾಹೂ

ಕರ್ನಾಟಕದ ಕರಾವಳಿ ಭಾಗದಲ್ಲಿ ಅನೈತಿಕ ರೌಡಿಗಿರಿ ಎಗ್ಗಿಲ್ಲದೆ ನಡೆದಿದೆ. ಮುತಾಲಿಕ್ ಎಂಬುವನು ಎಡೂರಪ್ಪನ ಕಾಲದಲ್ಲಿ ಮಾತನಾಡಿದಂತೆಯೇ ಈಗಲೂ ಬೊಗಳುತ್ತಿದ್ದಾನೆ. ಇದನ್ನೆಲ್ಲಾ ನೋಡಿದರೆ ಹಿಂದಿನ ಸರಕಾರವೇ ಮುಂದುವರಿದಿದೆ ಎಂಬ ಅನುಮಾನ ಬರುತ್ತದೆ ನಮಗೆ" ಎಂದು ಸಾಹಿತಿ ಮರುಳಸಿದ್ದಪ್ಪ ಸಿದ್ದು ಮುಖಕ್ಕೇ ಹೇಳಿದರಂತಲ್ಲಾ. ಸಾಮಾನ್ಯವಾಗಿ ಇಂತಹ ಮಾತುಗಳಿಗೆ ಶಡವಾಗಿ ಉತ್ತರಿಸುತ್ತಿದ್ದ ಸಿದ್ದರಾಮಯ್ಯ ತಮ್ಮ ಹಿತೈಷಿ ಮರುಳಸಿದ್ದಪ್ಪನವರ ಮಾತನ್ನು ಮರುಮಾತಿಲ್ಲದೆ ಒಪ್ಪಿಕೊಂಡಂತೆ ಮುಗುಮ್ಮಾದರಂತಲ್ಲಾ. "ಗೋವಾದಲ್ಲಿ ಶ್ರೀರಾಮಸೇನೆ ನಿಷೇಧಿಸಿದಂತೆ ನಮ್ಮಲ್ಲೂ ನಿಷೇಧಿಸಬೇಕು. ಮೌಢ್ಯ ನಿಯಂತ್ರಣ ಕಾನೂನು ಜಾರಿಯಾಗಬೇಕು" ಎಂದು ಒತ್ತಾಯಿಸಿದಾಗ ಮೂಢಾಚರಣೆಗಳ ಹಿಂದೇ ಕಾಂಗ್ರೆಸ್ನಲ್ಲಿರುವುದಲ್ಲದೆ ಈ ಆಚರಣೆ ಜಾರಿಯಾಗದಂತೆ ಭೊಬ್ಬೆ ಇಡುವ ಪುರೋಹಿತಶಾಹಿ ಪಿಂಡಗಳ ಅಬ್ಬರವೇ ಜಾಸ್ತಿಯಾಗಿದೆಯಂತಲ್ಲಾ. ಈ ಸಂದರ್ಭದಲ್ಲಿ ಸಾಹಿತಿಗಳು ಮತ್ತು ವಿಚಾರವಾದಿಗಳು ಅವರಪ್ಪನಾಣೆ ಬಾಯಿಬಿಡದಂತೆ ಸುಮ್ಮನಿರುವುದು ಸಿದ್ದು ಗಮನಕ್ಕೆ ಬಂದಿರುವುದ್ದರಿಂದ ತೇಲಿಸಿ ಮಾತನಾಡಿದರಂತಲ್ಲಾ, ಥೂತ್ತೇರಿ!

* * *

ಹಿಂದಿನ ಸರಕಾರವೇ ಮುಂದುವರಿದಂತಿದೆ ಎಂದು ಮರುಳಸಿದ್ದಪ್ಪನವರು ಹೇಳಿದ ಅಭಿಪ್ರಾಯ ಯಡಿಯೂರಪ್ಪನಿಗೆ ಮೊದಲೇ ತಿಳಿದಿತ್ತೋ ಏನೊ. ಅಂತೂ ಅದಾಗಲೇ ಸೆಕೆಂಡ್ ರೌಂಡಿಗಾಗಿ ಶೋಭಕ್ಕನನ್ನ ಕರೆದುಕೊಂಡು ಕರ್ನಾಟಕವನ್ನು ಸುತ್ತುತ್ತಿದ್ದಾರಲ್ಲಾ, ಜೊತೆಗೆ ಸಿದ್ದು ಸರಕಾರದ ಹಣಕಾಸಿನ ವೈಫಲ್ಯವನ್ನೆಲ್ಲಾ ಪಟ್ಟಿ ಮಾಡಿಕೊಂಡು ಮಾಧ್ಯಮದವರನ್ನು ಕರೆದು ವರದಿ ಒಪ್ಪಿಸುತ್ತಿದ್ದಾರಂತಲ್ಲಾ. ಮಾಧ್ಯಮದವರಿಗೆ ಎಡೂರಪ್ಪನೆಂದರೆ



ಇನ್ನಿಲ್ಲದ ಪ್ರೀತಿ. ಅವರ ಆಡಳಿತದಲ್ಲಿ ಹತ್ತಿರ ಹೋದ ಮಾಧ್ಯಮದವರನ್ನು ಅವರೇ ಪ್ರಶ್ನಿಸಿ "ಮನೆ ಮಾಡಿಕೊಂಡಿದ್ದೀರಾ? ಸೈಟ್ ತೆಗೆದುಕೊಂಡಿದ್ದೀರಾ? ಇಲ್ಲವಾದರೆ ನಮ್ಮ ಆರ್.ಪಿ. ಜಗದೀಶನ ಬಳಿ ಅರ್ಜಿ ಕೊಟ್ಟಿರಿ. ಹಾಗೇ ನಮ್ಮ ಸಿದ್ದಲಿಂಗ ಸ್ವಾಮಿಯನ್ನು ಕಂಡಿರಿ" ಎಂದು ಹೇಳಿ ಕಳುಹಿಸುತ್ತಿದ್ದರಂತಲ್ಲಾ. ಅಂತ ಎಡೂರಪ್ಪ ಎಲ್ಲೀ, ಬರೀ ಬಿಸ್ಕಟ್ ಕಾಫಿಯ ಈ ಸಿದ್ದು ಮತ್ತು ದಿನೇಶ್ ಅಮೀನ್ ಮಟ್ಟು ಎಲ್ಲೀ. ನಮಗಂತೂ ಎಡೂರಪ್ಪನ ಕಾಲವೇ ಸುವರ್ಣಯುಗ, ಅಂತಹ ಯುಗ ಮತ್ತೆ ಬರುವುದಾದರೆ ಎಡೂರಪ್ಪನಿಗೇ ನಮ್ಮ ನಿಷ್ಠೆ ಎಂದು ಎಲ್ಲೂ ಹೇಳಿಲ್ಲವಂತಲ್ಲಾ, ಥೂತ್ತೇರಿ!!

* * *

ಕರ್ನಾಟಕದ ಸಾಹಿತಿಗಳು ಸಿದ್ದುವನ್ನು ಭೇಟಿ ಮಾಡಿದ ಸಮಯದಲ್ಲಿ "ಎಲ್ಲಾ ಸರಿ. ಆ ರಾಘವೇಶ್ವರನ ರಕ್ಷಣೆ ಯಾಕೆ? ಆತನನ್ನು ಇನ್ನೂ ಅರೆಸ್ಟು ಮಾಡಿಲ್ಲವಲ್ಲಾ?" ಎಂದು ಅಬ್‌ಜಕ್ಷನ್ ತೆಗೆದವಂತಲ್ಲಾ. ಆಗ ಸಿದ್ದು "ಆತನಿಗೆ ಬೇಲ್ ಇರುವುದರಿಂದ ಅರೆಸ್ಟು ಮಾಡಲಾಗಿಲ್ಲ, ಆದರೂ ಎಷ್ಟೇ ಪ್ರಭಾವಿಯಾಗಿದ್ದರೂ ಈ ನೆಲದ ಕಾನೂನು ತನ್ನ ಕೆಲಸವನ್ನು ಮಾಡುತ್ತೆ" ಎಂದರಂತಲ್ಲಾ. ಈ ನೆಲದ ಕಾನೂನು ಸಮಾನತೆಯಿಂದ ಕೂಡಿಲ್ಲ, ಕನ್ನಡ ನೆಲದ ಕಾನೂನು ಕೂಡ ಬ್ರಾಹ್ಮಣ-ಶೂದ್ರ, ಮಠಾಧಿಪತಿ-ಭಿಕಾರಿ ಎಂಬ ಮೆಳ್ಳಗಣ್ಣಿನಿಂದ ವರ್ತಿಸುತ್ತಿದೆ ಎಂದು ಸಾಹಿತಿಗಳು ಯೋಚಿಸಲಾರಂಭಿಸಿದರಲ್ಲಾ. ಇಂತಹ ಸಂದರ್ಭದಲ್ಲಿ ಸರಕಾರವನ್ನು ಆಗಾಗ್ಗೆ ತರಾಟೆಗೆ ತೆಗೆದುಕೊಂಡು ವಿಚಾರಿಸಿಕೊಳ್ಳುವ ಸ್ಪೀಕರ್ ಕಾಗೋಡು ತಿಮ್ಮಪ್ಪ ಮಾತ್ರ ತನ್ನ ನೆಲದ ಈ ಹೋರಿಯ ಬಗ್ಗೆ ಈವರೆಗೂ ಚಕಾರವೆತ್ತಿಲ್ಲವಂತಲ್ಲಾ. ಅದಕ್ಕಿಂತ ಹಿಂದಕ್ಕೆ ಹೋದರೆ 'ಬಂ' ಕೂಡ ದೇಶದ ಗಮನ ಸೆಳೆದು ರದ್ದುಗೊಂಡ ಬೆತ್ತಲೆಸೇವೆಯ ರೇಣುಕಾದೇವಿ ತನ್ನ ಕ್ಷೇತ್ರದಲ್ಲೇ ಇದ್ದು ನಡೆಯಬಾರದ್ದು ನಡೆದಾಗಲೂ ಬಾಯಿ ತೆರೆಯಲಿಲ್ಲವಂತಲ್ಲಾ. ಇಂತಹ ಶೂದ್ರ-ರಾಜಕಾರಣಿಗಳಿರುವವರೆಗೂ ಮೂಢಾಚರಣೆ ಕಾನೂನು ಜಾರಿಯಾಗುವುದು ಕನಸಿನ ಮಾತೆಂಬುದು ಸಾಹಿತಿಗಳ ಜ್ಞಾನಕ್ಕೆ ಹೊಳೆಯತೊಡಗಿದೆಯಂತಲ್ಲಾ, ಥೂತ್ತೇರಿ!!

* * *


ಕಲ್ಬುರ್ಗಿಯವರ ಹತ್ಯೆಯಾದನಂತರ ಭಗವಾನ್ ಎಂಬ ವಿದ್ವಾಂಸರು "ನನ್ನನ್ನೂ ಬೇಕಿದ್ದರೆ ಕೊಲ್ಲಿ, ಸುಡುವುದಿದ್ದರೆ ವಿಧಾನಸೌಧದ ಮುಂದೆ ಸುಡಿ" ಎಂದು ಹೇಳಿದ್ದಾರಂತಲ್ಲಾ.



ಕರ್ನಾಟಕದಲ್ಲಿ ನಲವತ್ತು ವರ್ಷಗಳ ನಂತರ ಭೀಕರ ಬರಗಾಲ ತಲೆದೋರುತ್ತಿದೆ. ಜನ ಜಾನುವಾರಿಗೆ ನೀರೆಲ್ಲಿಂದ ತರುವುದೆಂಬ ಸಮಸ್ಯೆ ಜನರ ಮುಂದಿದೆ. ರೈತರ ಆತ್ಮಹತ್ಯೆ ನಿಲ್ಲಲೇ ಇಲ್ಲ. ಇಂತಹ ಜ್ವಲಂತ ಸಮಸ್ಯೆಗಳಲ್ಲಿ ಜನಸ್ತೋಮವೇ ಮುಳುಗಿಹೋಗಿರುವಾಗ ಆ ಬಗ್ಗೆ ಕಿಂಚಿತ್ತೂ ಯೋಚಿಸದ ವಿಚಾರವಾದಿಗಳು ರಾಮಾಯಣ ದರ್ಶನ ಹೊರಬಂದಾಗ ಏನು ಮಾಡುತ್ತಿದ್ದರು? ಅದಕ್ಕೆ ಜ್ಞಾನಪೀಠ ಬಂದಾಗ ಎಲ್ಲಿ ಅಡಗಿದ್ದರು? ಭೈರಪ್ಪ ಪರ್ವ ಬರೆದು ಚಡ್ಡಿಗಳನ್ನೇ ಎದುರು ಹಾಕಿಕೊಂಡಾಗ ಏನು ತಿನ್ನುತ್ತಿದ್ದರು? ಎಂಬ ಪ್ರಶ್ನೆಗಳು ಏಳುತ್ತಿವೆಯಲ್ಲ.

ಇನ್ನು ಮುಂದಾದರೂ ಇದೆಲ್ಲಕ್ಕಿಂತ ಮುಖ್ಯವಾಗಿ ಭಗವದ್ಗೀತೆ ಸಾರವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿ ಎಂದು ಹೇಳುತ್ತಿರುವ ಚುಂಚನಗಿರಿಯ ಅಪ್ರಬುದ್ಧ ಸ್ವಾಮಿಗೆ ಅಟಕಾಯಿಸಿಕೊಂಡು ಗೀತಾ ಸಾರವನ್ನು ಸ್ವಾಮಿಗೆ ಬೋಧಿಸಲು ಈ ವಿಚಾರವಾದಿಗಳಿಗೆ ಏನಾಗಿದೆ ಎಂಬುದು ಪ್ರಜ್ಞಾವಂತ ಒಕ್ಕಲಿಗರ ಒಕ್ಕೊರಲ ಸಲಹೆಯಾಗಿದೆಯಲ್ಲಾ, ಥೂತ್ತೇರಿ!! ■

ಚಿತ್ರದುರ್ಗ ಪರಿಷತ್ ಚುನಾವಣೆ: ಕೈಗೆ ತಪ್ಪುವುದೇ ಸೋಲಿನ ಕಳಂಕ


ಎಚ್.ಆಂಜನೇಯ

ದುರ್ಗದ ರಾಜಕಾರಣ ಮತ್ತೆ ರಂಗೇರುತ್ತಿದೆ. ಈ ವರ್ಷದ ಅಂತ್ಯದಲ್ಲಿ ಅಥವಾ ಮುಂದಿನ ವರ್ಷದ ಆರಂಭದಲ್ಲೇ ಎದುರಾಗಲಿರುವ ಪರಿಷತ್ ಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಈ ಮೂರೂ ಪಕ್ಷಗಳಲ್ಲಿ ಗೆಲುವಿನ ತಾಲೀಮು ಶುರುವಾಗಿದೆ. ಪ್ರತಿಸ್ಪರ್ಧಿ ಪಕ್ಷದೊಂದಿಗೆ ಸೆಣಸಾಡುವುದಕ್ಕಿಂತ ತಮ್ಮ ಸ್ವಂತ ಪಕ್ಷದಲ್ಲಿನ ಕಾಲೆಳೆಯುವಿಕೆಯನ್ನು ಮೆಟ್ಟಿ ನಿಲ್ಲುವುದೇ ಇಲ್ಲಿ ನಿಜವಾದ ಗೆಲುವನ್ನು ನಿರ್ಧರಿಸಲಿದ್ದು, ಟಿಕೆಟ್ ಹಂಚಿಕೆಯೇ ನಿರ್ಣಾಯಕ ಸಂಗತಿಯಾಗಲಿದೆ. ಹಾಗಾಗಿ ಕೈ ಮತ್ತು ಕಮಲ ಪಾಳಯದಲ್ಲಿ ಟಿಕೆಟ್ ಗಿಟ್ಟಿಸಲು ಇನ್ನಿಲ್ಲದ ಸರ್ಕಸ್ ನಡೆಯುತ್ತಿದೆ.

2009ರವರೆಗೂ ಚಿತ್ರದುರ್ಗ ವಿಧಾನ ಪರಿಷತ್ ಆಳ್ವಿಕೆ ಒಂದರ್ಥದಲ್ಲಿ ಭೀಮಸಮುದ್ರದ ಬಿ.ಟಿ. ರುದ್ರಮ್ಮನ ಮನೆತನದ ಖಾಸಗಿ ಪಾಳೇಗಾರಿಕೆಯಂತಿತ್ತು. ಈ ಪರಂಪರೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಶುರುವಾದಂತಹುದು. ಜನತಾ ಪಾರ್ಟಿಯಿಂದ ಬಿ.ಟಿ. ರುದ್ರಮ್ಮ ಸತತ ಎರಡು ಬಾರಿ ಗೆದ್ದು ದಳಕ್ಕೆ ಭದ್ರಬುನಾದಿ ಹಾಕಿದ್ದರು. ಅವರ ನಂತರ ಅಖಾಡಕ್ಕಿಳಿದಿದ್ದು ಅವರ ಮಗ ಬಿ.ಟಿ.ಚನ್ನಬಸಪ್ಪ, ಅವರು ಸತತ ಮೂರು ಬಾರಿ ಪರಿಷತ್ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ಗೆಲುವನ್ನು ತಮ್ಮ ಮನೆಯ ಖಾಸಗಿ ಸ್ವತ್ತನ್ನಾಗಿಸಿದ್ದರು. ಅದಕ್ಕೆ ಬ್ರೇಕ್ ಬಿದ್ದದ್ದು 2009ರಲ್ಲಿ, ಅದೂ ಬಿ.ಟಿ. ಚನ್ನಬಸಪ್ಪ ಸತ್ತ ನಂತರ!

ಅಸಲಿಗೆ ಚಿತ್ರದುರ್ಗ ರಾಜಕಾರಣ ಕಾಂಗ್ರೆಸ್‌ನ ಭದ್ರಕೋಟೆ ಎಂತಲೇ ಭಾವಿಸಲಾಗುತ್ತಿದೆ. ಇಲ್ಲಿಂದ ಅತಿಹೆಚ್ಚು ಶಾಸಕರುಗಳಾಗಿರೋದು, ಸಂಸದರೆನಿಸಿರೋದು, ಅಷ್ಟೇ ಏಕೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳನ್ನು ಸುದೀರ್ಘ ಆಳಿರುವುದು ಕಾಂಗ್ರೆ ಕ್ಯಾಂಡಿಡೇಟುಗಳೇ. ಆದಾಗ್ಯೂ ವಿಧಾನ ಪರಿಷತ್ ಚುನಾವಣೆಯ ಮಟ್ಟಿಗೆ ಕಾಂಗ್ರೆಸ್‌ನ ಸಾಧನೆ ಠುಸ್ ಪಟಾಕಿಯಂತದ್ದು. ಏಕೆಂದರೆ ಸತತ ಮೂವತ್ತು ವರ್ಷಗಳಿಂದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಒಮ್ಮೆಯೂ ಗೆದ್ದಿಲ್ಲ.

2009ರ ಚುನಾವಣೆಯ ವೇಳೆಗಾಗಲೆ ಬಿ.ಟಿ. ಚನ್ನಬಸಪ್ಪನ ಸಾವಿನ ಮುಖೇನ ಪರಿಷತ್ ಮೇಲೆ ಭೀಮಸಮುದ್ರ ಖಾನ್‌ದಾನ್‌ನ ಹಿಡಿತ ಸಂಪೂರ್ಣ ನೆಲಕಚ್ಚಿತ್ತು, ಆಗ ಜೆಡಿಎಸ್‌ನಿಂದ ಬಿ.ಟಿ.ರುದ್ರಪ್ಪನ ಮತ್ತೊಬ್ಬ ಮಗ ಬಿ.ಟಿ.ರುದ್ರೇಶ್ ಕಣಕ್ಕಿಳಿದಿದ್ದರು. ಗೆಲುವು ಭೀಮಸಮುದ್ರದಿಂದ ಹೊರನಡೆಯುವ ಸಾಧ್ಯತೆ ದಟ್ಟವಾಗಿ ಗೋಚರಿಸಿತ್ತು, ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು, ಆಗಿನ್ನು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದು ಈ ವಿಧಾನ ಪರಿಷತ್ ವ್ಯಾಪ್ತಿಗೆ ಒಳಪಡುವ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಕಮಲ ಶಾಸಕರು ಮತ್ತು ಸಚಿವರ ಕಾರುಬಾರೇ ಜೋರಾಗಿತ್ತಾದ್ದರಿಂದ ತಿಪ್ಪಾರೆಡ್ಡಿಯೆಂಬ ಸಮಯಸಾಧಕ ರಾಜಕಾರಣಿ ಸಾಲೀಸಾಗಿ ಗೆಲುವಿನ ನಗೆಬೀರಲು ಸಾಧ್ಯವಾಗಿತ್ತು.

ಹಾಗಂತ ಆ ಚುನಾವಣೆಯಲ್ಲಿ ಕಾಂಗ್ರೆಸ್ ಕೈಕಟ್ಟಿ ಕೂತಿರಲಿಲ್ಲ. ಆದರೆ ಟಿಕೆಟ್ ನೀಡುವಾಗ ಮಾಡಿದ ಯಡವಟ್ಟು ಕೈಗೆ ಮುಳುವಾಗಿತ್ತು. ಮಾಜಿ ಕೇಂದ್ರ ಮಂತ್ರಿ ಜಾಫರ್ ಶರೀಫರು ಪ್ರಭಾವ ಬೀರಿ ಕಾಂಗ್ರೆಸ್ ಟಿಕೆಟ್ಟು ಯಾವಾಗ ತಮ್ಮ ಅಳಿಯ ಮೆಹಬೂಬ್ ಪಾಷಾನಿಗೆ ಒಲಿಯುವಂತೆ ನೋಡಿಕೊಂಡರೋ ಆಗಲೇ ಕಾಂಗ್ರೆಸ್‌ನ ಸ್ಥಳೀಯ ಲೀಡರ್‌ಗಳು ಬಂಡಾಯವೆದ್ದು ಒಳಗಿಂದೊಳಗೇ ತಿಪ್ಪಾರೆಡ್ಡಿಯೊಂದಿಗೆ ಕೈಜೋಡಿಸಿದ್ದರು. ತಿಪ್ಪಾರೆಡ್ಡಿಯ ಗೆಲುವಿನಲ್ಲಿ ಇದು ಕೂಡಾ ಪ್ರಮುಖ ಪಾತ್ರ ನಿಭಾಯಿಸಿತ್ತು.

ಈ ಗೆಲುವನ್ನು ತಿಪ್ಪಾರೆಡ್ಡಿಯ ಅಧಿಕಾರದಾಹ ಬಹಳ ಕಾಲವೇನೂ ಉಳಿಸಿಕೊಳ್ಳಲಿಲ್ಲ. 2013ರ ವಿಧಾನಸಭಾ ಚುನಾವಣೆಗೆ ಚಿತ್ರದುರ್ಗದಿಂದ ಸ್ಪರ್ಧಿಸಿದ ತಿಪ್ಪಾರೆಡ್ಡಿ ಅಲ್ಲಿ ಗೆಲುವು ಸಾಧಿಸುತ್ತಿದ್ದಂತೆಯೇ ಪರಿಷತ್‌ಗೆ ರಾಜೀನಾಮೆ ನೀಡಿ ಥುತ್ತನೆ ಉಪಚುನಾವಣೆಯನ್ನು ತಂದಿಟ್ಟಿದ್ದ.


ಆ ಉಪಚುನಾವಣೆಯಲ್ಲಿ ಗೆಲ್ಲುವ ಎಲ್ಲಾ ಸಾಧ್ಯತೆಯೂ ಕಾಂಗ್ರೆಸ್ ಪಕ್ಷಕ್ಕಿತ್ತು. ಏಕೆಂದರೆ ಚಿತ್ರದುರ್ಗ ಮತ್ತು ದಾವಣಗೆರೆ ಎರಡೂ ಜಿಲ್ಲೆಗಳಲ್ಲಿ ಕಾಂಗ್ರೆಸ್ ಶಾಸಕರೇ ಅಧಿಕ ಸಂಖ್ಯೆಯಲ್ಲಿದ್ದರು. ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದ ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯರ ಹಿಡಿತದಲ್ಲಿ ಚಿತ್ರದುರ್ಗವಿದ್ದರೆ, ಇತ್ತ ದಾವಣಗೆರೆ ಶಾಮನೂರು ಧಣಿಗಳ ಕಬ್ಜಾಕ್ಕೆ ಮರಳಿತ್ತು. ಬಿಜೆಪಿ ಸರ್ಕಾರದ ಭಾನಗಡಿ, ಭ್ರಷ್ಟಾಚಾರದಿಂದ ಕಮಲದ ವರ್ಚಸ್ಸು ಕುಗ್ಗಿ ಹೆಣಗಿತ್ತು. ಎತ್ತ ಕಡೆಯಿಂದ ನೋಡಿದರೂ ಕಾಂಗ್ರೆಸ್ ಗೆಲುವಿನ ಸೂಚನೆಗಳೇ ಢಾಳಾಗಿ ಕಾಣಿಸುತ್ತಿದ್ದವು. ಆದರೆ ಮತ್ತೊಮ್ಮೆ ಕಾಂಗ್ರೆಸ್ ಪಾಲಿಗೆ ಟಿಕೆಟ್ ಪೊಲಿಟಿಕ್ಸೇ ಮುಳ್ಳಾಗಿತ್ತು.


ಹೊಳಲ್ಕೆರೆಯಲ್ಲಿ ಎಚ್.ಆಂಜನೇಯ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಮತ್ತು ಜಿಲ್ಲಾ ಕಾಂಗ್ರೆಸ್ ರಾಜಕಾರಣದಲ್ಲಿ ಹಿರಿತಲೆ ಎನಿಸಿದ್ದ, ದಾವಣಗೆರೆಯ ಶಾಮನೂರು ಧಣಿಗಳೊಂದಿಗೂ ಉತ್ತಮ ಒಡನಾಟವಿದ್ದ, ಎಲ್ಲಕ್ಕಿಂತ ಹೆಚ್ಚಾಗಿ ಈ ಭಾಗದ ಪ್ರಭಾವಿ ಸಾಧು ಲಿಂಗಾಯತ ಜನಾಂಗಕ್ಕೆ ಸೇರಿದ ಹನುಮಲಿ ಷಣ್ಮುಖಪ್ಪ ಪರಿಷತ್ ಟಿಕೆಟ್‌ಗೆ ಕಸರತ್ತು ನಡೆಸಿದ್ದರು. ಆದರೆ ಕಾಂಗ್ರೆಸ್ ಟಿಕೆಟ್ ದಕ್ಕಿದ್ದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸೇತೂರಾಂ ಎಂಬ ಸವಕಲು ನಾಣ್ಯಕ್ಕೆ. ಪಕ್ಕಾ ಕಂಜೂಸ್ ಆಸಾಮಿಯಾದ ಈತ ಪಾರ್ಟಿ ಫಂಡನ್ನೂ ಸ್ವಾಹ ಮಾಡಿಬಿಡಬಲ್ಲ ಜುಗ್ಗಯ್ಯ. ಈ ಹಿಂದೆ ಹೊಳಲ್ಕೆರೆಯಿಂದ ಮೂರು ಬಾರಿ ಶಾಸಕನಾಗಿದ್ದ ಈ ಸೇತೂರಾಂ, ಯಾವಾಗ ಅದು ಮೀಸಲು ಕ್ಷೇತ್ರವಾಯಿತೋ ಆಗ ಅಲ್ಲಿಂದ ಕಾಲ್ಕಿತ್ತು ಹಿರಿಯೂರಿನಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡ. ಕಡೆಗೆ ವಿಧಿಯಿಲ್ಲದೆ ಕಾಂಗ್ರೆಸ್‌ಗೆ ವಾಪಾಸ್ಸಾಗಿ ಜಿಲ್ಲಾಧ್ಯಕ್ಷನ ಕುರ್ಚಿಯಲ್ಲಿ ಠಳಾಯಿಸುತ್ತಿದ್ದಾನೆ.


ಅಂತವನ ಮಡಿಲಿಗೆ ಟಿಕೆಟ್ ಹಾಕಿದ ಕಾಂಗ್ರೆಸ್ ಮತ್ತೊಂದು ಸೋಲನ್ನು ಮೈಮೇಲೆ ಎಳೆದುಕೊಂಡಿತ್ತು. ಅದಕ್ಕೆ ಸರಿಯಾಗಿ ಗೂಳಿಹಟ್ಟಿ ಶೇಖರ್ ಎಂಬ ಆಸಾಮಿ ರೊಕ್ಕದ ಆಟಕ್ಕೆ ಮುನ್ನುಡಿ ಬರೆದಿದ್ದ. ಬೆಂಗಳೂರಿನ ರಿಯಲ್ ಎಸ್ಟೇಟಿಗ ರೊಕ್ಕಸ್ಥ ರಘು ಆಚಾರಿ ಎಂಬ ಅಪರಿಚಿತನೊಬ್ಬನನ್ನು ಎಳೆದು ತಂದು ಕಣಕ್ಕಿಳಿಸಿದ್ದ. ಆತ ಚೆಲ್ಲಾಡಿದ್ದ ಹಣವನ್ನು ಆಯ್ದುಕೊಂಡು ಸಂತೃಪ್ತರಾದ ಜನಪ್ರತಿನಿಧಿಗಳು ಪಕ್ಷೇತರ ಅಭ್ಯರ್ಥಿ ರಘು ಆಚಾರಿಯನ್ನು ಗೆಲ್ಲಿಸಿದ್ದರು.


ಹಾಗೆ ನೋಡಿದರೆ, ಆ ಸಲದ ಉಪಚುನಾವಣೆ ಎದುರಾದದ್ದೇ ಬಿಜೆಪಿಯ ತಿಪ್ಪಾರೆಡ್ಡಿಯ ರಾಜೀನಾಮೆಯಿಂದ. ಹಾಗಾಗಿ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದ ನವೀನ ಗೆಲ್ಲಬಹುದೆಂಬ ನಿರೀಕ್ಷೆಗಳೂ ಇದ್ದವು. ಆದರೆ ಸ್ವತಃ ತಿಪ್ಪಾರೆಡ್ಡಿಯ ಕುತಂತ್ರ ರಾಜಕಾರಣ ಕಮಲವನ್ನು ಮಕಾಡೆ ಮಲಗಿಸಿತ್ತು. ಚಿತ್ರದುರ್ಗದಲ್ಲಿ ತನಗೆ ಪರ್ಯಾಯವಾಗಿ ಮತ್ತೊಬ್ಬ ನಾಯಕ ಬೆಳೆಯುವುದು ತಿಪ್ಪಾರೆಡ್ಡಿಗೆ ಸುತಾರಾಂ ಇಷ್ಟವಿಲ್ಲ. ಹಾಗಾಗಿ ನವೀನನ ಗೆಲುವಿಗೆ ಕೈಜೋಡಿಸುವ ಬದಲು ಬಗಲ್ ಕಾ ದುಶ್ಮನ್ ಆಗಿದ್ದ. ಅಸಲಿಗೆ ಕ್ರಿಮಿನಲ್ ಪರಿಸರದಲ್ಲಿ ಬೆಳೆದಿದ್ದ ದುರ್ಗದ ರೂಪಾ ಕೊಲೆ ಕೇಸಲ್ಲಿ ಭಾಗಿಯಾದ ಆರೋಪ ಹೊತ್ತಿದ್ದ ನವೀನ್, ವಿಕೃತ ಕಾಮಿ ಉಮೇಶ್ ರೆಡ್ಡಿಯ ಬಳಗದಲ್ಲಿದ್ದವನು ಎನ್ನುವ ರೂಮರ್ ಬಿಜೆಪಿ ಪಾಳಯದಲ್ಲೇ ಹರಿದಾಡಲಾರಂಭಿಸಿತ್ತು. ಅದರ ಸೂತ್ರಧಾರಿ ತಿಪ್ಪಾರೆಡ್ಡಿ ಎಂಬ ಗುಮಾನಿ ಇವತ್ತಿಗೂ ಉಸಿರಾಡುತ್ತಿದೆ. ಹಾಗಾಗಿ ಬಿಜೆಪಿ ಅನಾಯಾಸವಾಗಿ ರಘು ಆಚಾರಿಯ ಹಾದಿಗೆ ಆಹಾರವಾಗಿತ್ತು.


ರಘು ಆಚಾರಿ-ಗೂಳಿಹಟ್ಟಿ ಜೋಡಿಯ ನಸೀಬು



ಮಂಜುನಾಥ್


ಸೇತೂರಾಂ


ತಿಪ್ಪಾ


ನವೀನ್


ಹನುಮಲಿ ಷಣ್ಮುಖ


ರಘು ಆಚಾರಿ

ಚೆನ್ನಾಗಿತ್ತೋ ಅಥವಾ ಕೈ ಕಮಲಗಳ ಇಂಟರ್ನಲ್ ಪೊಲಿಟಿಕ್ಸ್ ಕೈಕೊಟ್ಟಿತೊ, ಒಟ್ಟಿನಲ್ಲಿ ಆ ಉಪಚುನಾವಣೆಯಲ್ಲಿ ಹಣವೇ ಅಂತಿಮ ಜಯ ಸಾಧಿಸಿತ್ತು.

ಈ ಸಲದ ಲೆಕ್ಕಾಚಾರಗಳು

ಇಂತಿಪ್ಪ ಹಿನ್ನೆಲೆಯ ವಿಧಾನ ಪರಿಷತ್ ಸ್ಥಾನಕ್ಕೆ ಮತ್ತೊಮ್ಮೆ ಚುನಾವಣೆ ಎದುರಾಗಿದೆ. ಈ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳ ತುಂಬಾ ತನ್ನ ಶಾಸಕರು, ಸಚಿವರ ದಂಡನ್ನೇ ಹೊಂದಿರುವ ಕಾಂಗ್ರೆಸ್‌ಗೆ ಸೋಲಿನ ಕಳಂಕ ತೊಳೆದುಕೊಳ್ಳುವ ಧಾವಂತವಿದ್ದರೆ, ಬಿಜೆಪಿಯ ತಿಪ್ಪಾರೆಡ್ಡಿಗೆ ಮಗದೊಮ್ಮೆ ಗೆಲುವಿಗಿಂತ ಸೋಲಿನದ್ದೇ ಕನವರಿಕೆ ಜೋರಾಗಿರುವಂತಿದೆ.

ಮಂತ್ರಿ ಶಾಮನೂರು ಶಿವಶಂಕರಪ್ಪ ಮತ್ತು ಎಚ್. ಆಂಜನೇಯ ಅವರಿಗೆ ಕೈ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ತಮ್ಮ ಪ್ರಭಾವವನ್ನು ಸಾಬೀತುಪಡಿಸುವ ಜರೂರತ್ತಿದೆ. ಹಾಗಾಗಿ ಹಿಂದೆ ಮಾಡಿದ ತಪ್ಪು ಪುನರಾವರ್ತಿಸದಂತೆ ಎಚ್ಚರಿಕೆಯ ಹೆಜ್ಜೆಯನ್ನು ಇಡಲಾಗುತ್ತಿದೆ. ಆದರೆ ಈ ಬಾರಿಯೂ ಸೇತೂರಾಂ ಟಿಕೆಟ್‌ಗೆ ಪ್ರಯತ್ನಿಸುತ್ತಿರುವ ಸೂಚನೆಗಳು ಸಿಕ್ಕಿವೆ. ಅತ್ತ ಈ ಹಿಂದೆ ಟಿಕೆಟ್ ವಂಚಿತನಾಗಿದ್ದ ಹನುಮಲಿ ಷಣ್ಮುಖ ಕೂಡಾ ಕೈ ಟಿಕೆಟ್‌ಗೆ ಚುರುಕಾಗಿದ್ದಾರೆ. ಜಾತಿ ಮತ್ತು ಪ್ರಭಾವದ ಸಮೀಕರಣಗಳು ಷಣ್ಮುಖಪ್ಪ ಪರವಾಗಿಯೇ ಇವೆ. ಇನ್ನುಳಿದಂತೆ ಮಾಜಿ ಶಾಸಕ ಉಮಾಪತಿ ಕೂಡಾ ಕೈ ಟಿಕೆಟ್‌ಗೆ ಪ್ರಯತ್ನಿಸುತ್ತಿರುವ ವರ್ತಮಾನಗಳು ಕೇಳಿಬರುತ್ತಿವೆ.

ಇದೆಲ್ಲದರ ನಡುವೆ ಮತ್ತೊಂದು ಹೊಸ ವಿಷಯವೂ ಹರಿದಾಡುತ್ತಿದೆ. ಏನೆಂದರೆ ಹಾಲಿ ವಿಧಾನ ಪರಿಷನ್ ಸದಸ್ಯನಾಗಿದ್ದ ರೊಕ್ಕಸ್ಥ ರಿಯಲ್ ಎಸ್ಟೇಟಿಗ ರಘು ಆಚಾರಿ ಕೈ ಪಾಳಯದಲ್ಲಿ ಗುರುತಿಸಿಕೊಳ್ಳುತ್ತಿದ್ದು ಆತನೇ ಪರಿಷತ್ ಚುನಾವಣೆಯ ಕೈ ಅಭ್ಯರ್ಥಿಯಾಗಲಿದ್ದಾನೆ ಎಂಬ ಸಣ್ಣದೊಂದು ಸಂಚಲನವನ್ನೇ ಹುಟ್ಟುಹಾಕಿದೆ. ಪುಷ್ಟೀಕರಿಸುವಂತೆ ಮೊನ್ನೆ ಬಿಬಿಎಂಪಿ ಮೇಯರ್ ಗ ನಡೆದ ಕಾಳಗದಲ್ಲಿ ರಘು ಆಚಾರಿ ಕಾಂಗ್ರೆಸ್‌ಗೆ ಬ ನೀಡಿ ನಿಗೂಢತೆಯ ಗಾಢತೆಯನ್ನು ಮ ಹೆಚ್ಚಿಸಿಯಾಗಿದೆ. ಹಾಗೊಮ್ಮೆ ಬಿಬಿಎಂಪಿ ಬೆಂ ಪ್ರತಿಯಾಗಿ ದುರ್ಗದ ಪರಿಷತ್ ಟಿಕೆಟ್‌ನ್ನು ರಘು ಆ ನೀಡಬೇಕೆಂಬ ಒಪ್ಪಂದವೇನಾದರೂ ಆಗಿದ್ದಲ್ಲಿ, ಕಾಂಗ್ರೆಸ್‌ನ ಸರಣಿ ಸೋಲನ್ನು ಈ ಬಾರಿ ಮುಂದುವರಿಸುವ ಸಾಧ್ಯತೆಯೇ ಹೆಚ್ಚು. ಏಕೆಂದರೆ

ಪರಿಷತ್ ಚುನಾವಣೆಯಲ್ಲಿ ಗೆದ್ದಿದ್ದು ಬಿಟ್ಟರೆ ಮತ್ತೆ ಆತ ಕ್ಷೇತ್ರದಲ್ಲಿ ಮುಖ ತೋರಿಸಿದವನಲ್ಲ. ಹಿಂದಿ ಗೆದ್ದು ಬಿಡಬಹುದೆನ್ನುವ ಸೈಕಾಲಜಿಯ ರಘು ಆ ಸೆದ್ದು ಹೊಡೆಯಲು ಈ ಸಲ ಗೂಳಿಹಟ್ಟಿ ಶೇ ಕೋಲಾರ ಮೂಲದ ಮತ್ತೊಂದು ಕುಳವನ್ನು ತ ಮಾಡಿಟ್ಟುಕೊಂಡಿದ್ದಾನೆ. ಈ ಬಾರಿ ಹಣಕ್ಕಿಂತ ಸ್ಥಳೀಯ ನಾಯಕರ, ಸಚಿವರುಗಳ ಪ್ರಭಾವವೇ ನಿರ್ಣಾ ಆಗಬಹುದಾಗಿದ್ದು, ಆ ನಿಟ್ಟಿನಲ್ಲಿ ಸ್ಥಳೀಯ ಅಭ್ಯ ಗೆಲುವಿನ ಸಾಧ್ಯತೆ ಹೆಚ್ಚು, ಹಾಗೊಮ್ಮೆ ರಘು ಸ್ಥಳೀಯ ಅಭ್ಯರ್ಥಿಯಲ್ಲ ಎಂಬುದೇ ಕಾಂಗ್ರೆಸ್‌ಗೆ ತೊಡಕಾಗಲಿದೆ; ಬಿಜೆಪಿಯಿಂದ ಈ ಸಲವೂ ನ ಕಣಕ್ಕಿಳಿಯುವ ಮಾತುಗಳು ಕೇಳಿಬರುತ್ತಿವೆಯಾ ಹೊಳಲ್ಕೆರೆಯಲ್ಲಿ ಕಳೆದ ಎಂಎಲ್‌ಎ ಎಲೆಕ್ಷನ್‌ನಲ್ಲಿ ಆಂಜನೇಯ ವಿರುದ್ಧ ಸೋತು ಸದ್ಯಕ್ಕೆ ರಾಜ ನಿರುದ್ಯೋಗಿ ಎನಿಸಿರುವ ಎಂ. ಚಂದ್ರಪ್ಪ ಟಿಕೆಟ್ ಕೊಳ್ಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹಾಗೇ ಚಂದ್ರಪ್ಪ ಬಿಜೆಪಿಯಿಂದ ಕಣಕ್ಕಿಳಿದರೆ ತಿಪ್ಪಾರೆಡ್ಡಿಯ ವರ್ಕ್‌ಔಟ್ ಆಗುವುದು ಕಷ್ಟಸಾಧ್ಯ. ಅಲ್ಲದೇ ಗೆದ್ದರೂ, ಮುಂದೆ ಹೊಳಲ್ಕೆರೆಗೆ ಮರಳಿ ಹೋಗುವು ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಲೆಕ್ಕಾಚಾರ ಇಟ್ಟುಕ ತಿಪ್ಪಾರೆಡ್ಡಿ ಅಡ್ಡಗಾಲು ಹಾಕುವ ಸಂಭವವೂ ಹೆ

ಆಗ ಪ್ರಬಲ ಪೈಪೋಟಿ ನೀಡುವಂತಹ ಯನ್ನೇ ಕಾಂಗ್ರೆಸ್ ಸಿದ್ಧಗೊಳಿಸಬೇಕಾಗುತ್ತದೆ. ಕಾಂಗ್ರೆಸ್‌ನ ಸೋಲುಗೆಲುವು ಟಿಕೆಟ್ ಯಾರಿಗೆ ಎಂಬುದನ್ನು ಅವಲಂಬಿಸಿದ್ದರೆ, ಅತ್ತ ಬಿಜೆಪಿಯ ಯೂ ಇದಕ್ಕಿಂತ ಭಿನ್ನವಿಲ್ಲ.

■ ಟಿ.ಎನ್. ಷಣ

02 ⏮ ದೇವರ ಹಂಗೇಕೆ?

ಕೊರಗುತ್ತಾರೆ. ಅನೇಕ ಅಧಿಕಾರಿಗಳು ತಮಗೆ ಸರಿಯಾದ ಹುದ್ದೆ ಸಿಕ್ಕಿಲ್ಲ ಎಂದು ಬಳಲುತ್ತಾರೆ. ಆದರೆ ಲದ್ದೆಯ ಸೋಮಣ್ಣ ಹುಲ್ಲು ಮಾರುವುದರಲ್ಲೇ ತೃಪ್ತಿಪಟ್ಟು ನಮ್ಮೆಲ್ಲರಿಗೆ ಗುರು ಸ್ಥಾನದಲ್ಲಿ ನಿಲ್ಲುತ್ತಾನೆ. ದುಡಿಯುವುದು ಸ್ವಾಭಿಮಾನದ ಪ್ರತೀಕ. ಬೇಡುವುದು ಅಪಮಾನದ ಪ್ರತೀಕ ಎಂದು ಆತ ಸೂಚಿಸಿದ್ದಾನೆ.

ಲದ್ದೆಯ ಸೋಮಣ್ಣ ಈ ಪುಟ್ಟ ವಚನದಲ್ಲಿ ಆರು ಮುಖ್ಯ ವಿಚಾರಗಳನ್ನು ಹೇಳಿದ್ದಾನೆ. 1) ಪಾಲಿಗೆ ಬಂದ ಕಾಯಕವನ್ನು ಮನಸಾರೆ ಮಾಡಬೇಕು. 2) ಕೇವಲ ಸ್ವಂತದ ಸಮಸ್ಯೆಗಳ ಪರಿಹಾರಕ್ಕೆ ಮಾತ್ರ ಕಾಯಕ ಮಾಡದೆ ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆಯೊಂದಿಗೆ ಮಾಡಬೇಕು. 3) ಗುರು ಎಂದರೆ ಜ್ಞಾನ, ಲಿಂಗ ಎಂದರೆ ನೀತಿಧರ್ಮ, ಜಂಗಮ ಎಂದರೆ ಸಮಾಜ. ಹೀಗೆ ಜ್ಞಾನಕಾರ್ಯ, ನೀತಿಧರ್ಮಕಾರ್ಯ ಮತ್ತು ಸಮಾಜಕಾರ್ಯಗಳಿಗಾಗಿ, ದುಡಿದು ಕೂಡಿಸಿದ್ದನ್ನು ವಿನಿಯೋಗಿಸಬೇಕು. ಉಳಿದದ್ದನ್ನು ಪ್ರಸಾದವೆಂದು ಭಾವಿಸುವುದರ ಮೂಲಕ ಹಿತಮಿತವಾಗಿ ಬಳಸಬೇಕು. 4) ಈ ಲೋಕದೊಳಗೆ ಜನಿಸಿದ ಬಳಿಕ ರೋಗರುಜಿನಗಳು, ಬೇನೆಬೇಸರಿಕೆಗಳು ಬಂದೇ ಬರುತ್ತವೆ. ಕೊನೆಗೆ ಸಾವು ಕೂಡ ನಿಶ್ಚಿತವಾದುದಾಗಿದೆ. ಈ ಸಂದರ್ಭದಲ್ಲಿನ ನೋವು ನರಳಾಟಗಳು ಅನಿವಾರ್ಯ. ಆದ್ದರಿಂದ ಇವನ್ನೆಲ್ಲ ಸಮಾಧಾನಚಿತ್ತದಿಂದ ಎದುರಿಸಬೇಕು. 5) ದುಡಿದು ಬದುಕುವ ಛಲ ಉಳ್ಳವರಿಗೆ ಮತ್ತು ಬದುಕಿನ ವಿವಿಧ ಮಜಲುಗಳ ಅರಿವುಳ್ಳವರಿಗೆ ದೇವರ ಹಂಗೂ ಇರಬಾರದು. ಏಕೆಂದರೆ ದೇವರು ನಮ್ಮ ತಾಪತ್ರಯ ಕಳೆಯುವ ಮಂತ್ರದಂಡವಲ್ಲ. ಆತ ಏನಿದ್ದರೂ ಬದುಕನ್ನು ಅರ್ಥಮಾಡಿಕೊಳ್ಳಲು ಬೇಕಾದ ಆತ್ಮಸಾಕ್ಷಿ. 6) ಈ ಸತ್ಯವನ್ನು ಅರಿತುಕೊಂಡು ಬದುಕಿದಷ್ಟು ದಿನ ಸಂತೋಷ ಮತ್ತು ಸಮಾಧಾನದಿಂದ ಬದುಕಬಹುದು.

ಬಸವಣ್ಣನವರ ಬಹುದೊಡ್ಡ ಸಾಧನೆ ಎಂದರೆ ಇಂಥ ಸಹಸ್ರ ಸಹಸ್ರ ಬಡವರಿಗೆ ಆತ್ಮಗೌರವದಿಂದ ಮುನ್ನುಗ್ಗುವಂಥ ಜೀವನದರ್ಶನ ಮಾಡಿಸಿದ್ದು. ಜೀವನೋತ್ಸಾಹದಿಂದ ತುಂಬಿದಂಥ ಬಡ ಕಾಯಕಜೀವಿಗಳಿಂದ ಕೂಡಿದ 'ಶ್ರೀಮಂತ ಸಮಾಜ' ರಚನೆ ಮಾಡಿದ್ದು. 'ಎಲ್ಲ ಜಾತಿಗಳು ಸುಳ್ಳು; ಬಡವರೆಲ್ಲ ಒಂದು' ಎಂಬ ಸತ್ಯದ ನೆಲೆಯ ಮೇಲೆ ಸಮೂಹಪ್ರಜ್ಞೆಯ ಶರಣಸಂಕುಲ ಸೃಷ್ಟಿಸಿದ್ದು. ಆ ಮೂಲಕ ವಿಶ್ವದ ಇತಿಹಾಸದಲ್ಲಿ ಬಡವರಿಗೆ ಸ್ಥಾನವನ್ನು ಕಲ್ಪಿಸಿದ್ದು. ಮಾನವಕುಲಕ್ಕೆ ಒಳಿತಾಗುವ ವಿಚಾರಗಳು ಜನಮಾನಸವನ್ನು ಹೊಕ್ಕಾಗ, ಸಮೂಹ ಪ್ರಜ್ಞೆಯೊಂದಿಗೆ ಕ್ರಿಯಾಶೀಲವಾಗುತ್ತ ಮಾನವೀಯತೆಯ ಮಹಾದರ್ಶನಕ್ಕೆ ಕಾರಣವಾಗುತ್ತವೆ ಎಂಬುದನ್ನು ಸಾಧಿಸಿತೋರಿಸಿದ್ದು.

ಬಸವಣ್ಣನವರ ಈ ಸಾಧನೆಗಳ ಪ್ರತೀಕವಾಗಿ ಸೋಮಣ್ಣ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿ ಉತ್ಸಾಹದ ಚಿಲುಮೆಯಾಗಿ ನಾವೂ ಮುನ್ನು ಮಾಡುತ್ತಾನೆ.

ಹುಲಸೂರಿನಲ್ಲಿ ಲದ್ದೆಯ ಸೋಮಣ್ಣನ ಗು ಇವನ ಆರಾಧ್ಯದೈವ ಸೋಮೇಶ್ವರನ ಗುಡಿ ಲದ್ದೆ ಗ್ರಾಮದಲ್ಲಿದೆ. 'ಭಾಪು ಲದ್ದೆಯ ಸೋಮಾ' ಎಂಬ ಅವನ ವಚನಾಂಕಿತದಲ್ಲಿ ಸ್ವಾಭಿಮಾನದ ಉತ್ಸಾಹ ಮತ್ತು ದೇವರ ಜೊತೆಗಿನ ಸಲುಗೆಯ ಭಾವ ಎದ್ದು ಕಾಣುತ್ತದೆ.



■ ರಂಜಾನ್ ದರ್ಗಾ

...ಸಿಎಫ್ ಅಲ್ವಿನ್ ಎತ್ತಂಗಡಿ ಹಿಂದೆ ರಾಘು-ಕಾಗೋಡು ಜೋಡಿ!

...ಕರ್ ಕಾಗೋಡು ತಿಮ್ಮಪ್ಪನವರಿಗೆ ಈಗ 85ರ ಪ್ರಾಯ; ಒಂಥರಾ ...ರಳು ಆತನ ಬಾಧಿಸುತ್ತಿದೆ. ಸಮಾಜವಾದಿ ಹಿನ್ನೆಲೆಯ ಕಾಗೋಡುಗೆ ... ಬದ್ಧತೆ ಇತ್ತು. ಈಗೀಗ ಎಡಬಿಡಂಗಿಯಂತೆ ಕಾಗೋಡು ಆಡುತ್ತಿದ್ದಾರೆ. ... ಭ್ರಷ್ಟಾತಿಭ್ರಷ್ಟನೂ ಜೈಲ್ ಅನ್ನ ಉಂಡು ಬಂದವನೂ ಆಗಿರುವ ... ಮಹಾತ್ಮನ ಕೊಂಡಾಡುತ್ತಾರೆ. ಮತ್ತೊಮ್ಮೆ ಮಂತ್ರಿ ಆಗಿಲ್ಲವೆಂಬ ...ದಲ್ಲಿ ಸಿದ್ದು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ, ಮಗದೊಮ್ಮೆ ... ಅತಿಕ್ರಮಣದಾರರನ್ನು ಕಾನೂನು ಕಡೆಗಣಿಸಿ ಬೆಂಬಲಿಸಿ ಅಂತಾರೆ; ... ರಾಘು ಸ್ವಾಮಿ ಜೈಲು ಪಾಲಾಗದಂತೆ ಅಡ್ಡ ನಿಲ್ತಾರೆ.

...ಗೋಡು ತನ್ನ ರಾಜಕೀಯ ಜೀವನದಲ್ಲಿ ಎಂದೂ ಇಂಥವನೇ ಅಧಿಕಾರಿ ...ಇವನು ಬೇಡ ಅಂದವರೇ ಅಲ್ಲ. ಆದರೆ ಈಗೀಗ ಅವರು ಬೇಲೂರು ...ಲಕೃಷ್ಣನ ಲೆವೆಲ್‌ನಲ್ಲಿ ಅಧಿಕಾರಿಗಳ ವರ್ಗಾವರ್ಗಿಗೂ ಕೈಹಾಕುತ್ತಿದ್ದಾರೆ.

...ಸಜ್ಜನರು ಅದ್ಯಾಕೋ ಕಾಗೋಡರಿಗೆ ಅಲರ್ಜಿ. ಇದಕ್ಕೆ ಕಾರಣ ...ವಯಸ್ಸು. ಕಾಗೋಡರ ವೃದ್ಧಾಪ್ಯವನ್ನು ಆತನ ಅಣ್ಣನ ಮಗ ಕಾಗೋಡು ..., ತಿ.ನ. ಶ್ರೀನಿವಾಸ್, ಡಿಎಫ್‌ಓ-ಮೋಹನ ಗಂಗೊಳ್ಳಿ... ಥರದವರು ...ಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಪ್ರಲೋಟ ಗಂಗೊಳ್ಳಿ ಅರ್ಹತೆ ...ದ್ದೂ ಐಎಫ್‌ಎಸ್ ಕೇಡರಿನ ಡಿಸಿಎಫ್ ಕುರ್ಚಿಯಲ್ಲಿರುವುದೇ ಕಾಗೋಡು ...ಂದ.

...ಸನಗರದಲ್ಲಿ ಎಸಿಎಫ್ ಆಗಿದ್ದ ಅಲ್ವಿನ್ ದಕ್ಷ-ಪ್ರಾಮಾಣಿಕ ಅಧಿಕಾರಿ. ಹಿಂದೆಯೂ ಕಾಗೋಡು ಅಧಿಕಾರದಲ್ಲಿದ್ದಾಗ ಆತನ ಜತೆ ಕೆಲಸ ...ದ್ದರು. ಈ ಅಲ್ವಿನ್ ತನ್ನ ಏರಿಯಾದಲ್ಲಿನ ಅಕ್ರಮ ಜಲ್ಲಿ, ಕೆಂಪು ಕಲ್ಲು ... ಕಡಿವಾಣ ಹಾಕಿದ್ದರು. ಅರಣ್ಯ ಅತಿಕ್ರಮಣ ನಿಲ್ಲಿಸಿದ್ದರು. ಅರಣ್ಯ ...ಸಮಿತಿಯಲ್ಲಿ ವಸ್ತುನಿಷ್ಠವಾಗಿ ಮಾತಾಡುತ್ತಿದ್ದರು. 70 ವರ್ಷ ಆದ ...ಅತಿಕ್ರಮಣದಾರನಿಗೆ 90 ವರ್ಷವಾಗಿದೆ ಎಂದಾತ ಒಪ್ಪುತ್ತಿರಲಿಲ್ಲ. ...ಅನರ್ಹ ಅರಣ್ಯ ಅತಿಕ್ರಮಣದಾರರ ಪರ ವಹಿಸುವಂತೆ ಡಿಸಿಎಫ್ ..., ತಿ.ನ. ಶ್ರೀನಿವಾಸ್‌ನಂಥವರು ಹೇಳಿದರೂ ಕೇಳುತ್ತಿರಲಿಲ್ಲ. ಇದು ...ಹೊಸನಗರದ ನಕಲಿ ಶಾಸಕ ಕಾಗೋಡು ಅಣ್ಣಾಜಿ, ಆತನ ಬಲಗೈ ...ಶ್ರೀನಿವಾಸ್‌ಗೆ ಹಿಡಿಸುತ್ತಿರಲಿಲ್ಲ.

...ತ್ತಕಾಳು ವಿಶ್ವನಾಥ್ ಎಂಬ ನಿವೃತ್ತ ಡಿಎಫ್‌ಓ ಮಗ ಗುರುರಾಜ್ ...ವಾಗಿ ನಡೆಸುತ್ತಿದ್ದ ಕಲ್ಲು ಗಣಿಗೆ ಅಲ್ವಿನ್ ಬಂದ್ ಮಾಡಿಸಿದ್ದರು.


ರಾಘು ಕಾಗೋಡು

ಇದು ಅಣ್ಣಾಜಿ ಗ್ಯಾಂಗಿನ ಕಣ್ಣು ಕೆಂಪು ಮಾಡಿಸಿತ್ತು. ಮಲ್ಲಂದೂರು ಎಂಬಲ್ಲಿನ ಅರಣ್ಯ ಅತಿಕ್ರಮಣದಾರರಲ್ಲಿ ಹೆಚ್ಚಿನವರು ಕಾಗೋಡರ ಜಾತಿಬಂಧುಗಳಾದ ದೀವರು. ಇವರಲ್ಲಿ ಹಲವರು ಅಕ್ರಮ-ಸಕ್ರಮಕ್ಕೆ ಅರ್ಜಿ ಗುಜರಾಯಿಸಲಿಕ್ಕೂ ಅನರ್ಹರು. ಇಂಥವರನ್ನು ಬೆಂಬಲಿಸುವಂತೆ ಕಾಗೋಡು ಬಣ ಅಲ್ವಿನ್‌ರ ಕಾಡತೊಡಗಿತ್ತು. ಸುಪ್ರೀಂಕೋರ್ಟ್ ತೀರ್ಪು, ಕೇಂದ್ರ ಅರಣ್ಯ ಕಾಯ್ದೆ ಪ್ರಕಾರ ಜನ್ಮದಾಖಲೆ ಆಧಾರದಲ್ಲಿ ಅರ್ಹ ಅತಿಕ್ರಮಣದಾರರ ಗುರುತಿಸುವುದು ಕಷ್ಟದ ಕೆಲಸ. ಇದು ಅಲ್ವಿನ್‌ರ ಕಾನೂನುನಿಷ್ಠೆಗೆ ಸವಾಲಾಗಿತ್ತು, ಆತ ಕಾನೂನು ಮೀರಲಿಲ್ಲ.

ಹಾಗೆಯೇ ರೇಪಿಸ್ಟ್ ರಾಘುನ ರಾಮಚಂದ್ರಾಪುರಮಠ ಮಾಫಿಯಾ ರಾಮಚಂದ್ರಾಪುರ ಗ್ರಾಮದ ಸರ್ವೆ ನಂಬರ್ 7ರಲ್ಲಿ 19 ಎಕರೆ ಅರಣ್ಯ ಅತಿಕ್ರಮಿಸಿ ಕಟ್ಟಡಗಳನ್ನು ಕಟ್ಟಿದ್ದು ಕಾನೂನುಬಾಹಿರವೆಂದು ತೀರ್ಪು ನೀಡಿದ್ದರು ಅಲ್ವಿನ್. ಅಷ್ಟೇ ಅಲ್ಲ, ರಾಘು ಮಠಕ್ಕೆ ಬರೋಬ್ಬರಿ 62,80,746ರೂ. ದಂಡ ಹಾಕಿದ್ದರು. ಇದು ಮಠದ ದುರುಳರಿಗಿಂತ ಹೆಚ್ಚು ಕೆರಳಿಸಿದ್ದು ಕಾಗೋಡರ ಪರಮಾಪ್ತ ಜಾತಿ ಬಂಟನೂ-ಸಾಗರದ ಡಿಸಿಎಫ್ ಸಾಹೇಬನೂ ಆಗಿರುವ ಮೋಹನ ಗಂಗೊಳ್ಳಿಯನ್ನು. ಆತ ಅಲ್ವಿನ್‌ನನ್ನು ಕರೆದು "ನೀನ್ಯಾಕೆ ರಾಮಚಂದ್ರಾಪುರ ಮಠದ ಉಸಾಬರಿಗೆ ಹೋಗಿದ್ದೆ..." ಎಂದು ಗದರಿದ್ದ.

ಒಟ್ಟಿನಲ್ಲಿ ಕಾಗೋಡು ತಿಮ್ಮಪ್ಪರ ಗ್ಯಾಂಗಿನ ಬೇಜಾರಿಗೆ ಅಲ್ವಿನ್‌ನ ಕರ್ತವ್ಯ ಪ್ರಜ್ಞೆಯ ಡ್ಯೂಟಿ ಕಾರಣವಾಗಿತ್ತು, ಕಾಗೋಡರಿಗೆ ಈ ಮುದಿ ಕಾಲದಲ್ಲಿ ಓಟ್‌ಬ್ಯಾಂಕ್ ರಾಜಕೀಯ ಕಾಡುತ್ತಿದೆಯಾ? ಗೊತ್ತಿಲ್ಲ, ಅದ್ಯಾಕೋ ಹುಚ್ಚರ ಹೊಲಸು ಸ್ವಾಮಿ ರಾಘುನ ರಕ್ಷಣೆಗೆ ಕಾಗೋಡು ಟೊಂಕಕಟ್ಟಿ ನಿಂತಿರುವ ಸುದ್ದಿಗಳು ಈಗ ಒಂದೊಂದಾಗಿ ಹೊರಬರುತ್ತಿದೆ. ಸಿಗಂದೂರು ದೇವಸ್ಥಾನಕ್ಕೆ ರೇಪಿಸ್ಟ್ ರಾಘು ಬರದಂತೆ ಅಲ್ಲಿಯ ಪ್ರಜ್ಞಾವಂತ ದೀವರ ಯುವಕರು ಪ್ರತಿಭಟಿಸಿದರೆ, ಅದೇ ಕುಲದ ನಾಯಕಾಗ್ರೇಸ ಕಾಗೋಡು ಅತ್ಯಾಚಾರ-ಅನಾಚಾರ-ಅಕ್ರಮಗಳ ಆರೋಪಿ ರಾಘುನ ಪರ ಒಳಗೊಳಗೇ ಮಸಲತ್ತು ಮಾಡಿದ್ದರು. ಸಮಾಜವಾದಿ ಚಿಂತನೆಯ ಕಾಗೋಡು ಈ ಪರಿ ಸನಾತನಿಯಾಗಿರುವುದು ವಿಚಿತ್ರವಾದರೂ ಸತ್ಯ.


ಕೊನೆಗಾಲದಲ್ಲಿ ಕೊಳಕು ರಾಘು ಸ್ವಾಮಿ ಪರವಾಗಿ ನಿಲ್ಲುವ ದರ್ದು ಕಾಗೋಡರಿಗೆ ಏನಿತ್ತೋ? ಮಲ್ಲಂದೂರು ಅತಿಕ್ರಮಣ ಪ್ರಕರಣ, ಅಕ್ರಮ ಗಣಿ ಬಂದ್, ಅರಣ್ಯ ರಕ್ಷಣೆಗೆ ಕಟ್ಟುನಿಟ್ಟಿನ ಎಚ್ಚರಿಕೆಯೇ ಮುಂತಾದ ನಿಯತ್ತಿನ ಡ್ಯೂಟಿ ಮಾಡಿದ್ದ ಎಸಿಎಫ್ ಅಲ್ವಿನ್ ಮೇಲೆ ಕಾಗೋಡು ಗ್ಯಾಂಗಿಗೆ ದೊಡ್ಡ ಸಿಟ್ಟು ಬಂದಿತ್ತು. ಆತನ ಎತ್ತಂಗಡಿ ಮಾಡಲು ಸಮಯ ಸಾಧಿಸುತ್ತಲೇ ಇತ್ತು ಈ ಕಾಗೋಡರ ಹೆಸರಲ್ಲಿ 'ಜೀವನ ರಾಜಕಾರಣ' ಮಾಡುತ್ತಿರುವ ಬಕಾಸುರ ಪಡೆ. ಯಾವಾಗ ರಾಮಚಂದ್ರಾಪುರ ಮಠದ ಅರಣ್ಯ ಅತಿಕ್ರಮಣ ಅಪರಾಧ ಅಲ್ವಿನ್ ಕಂಡುಹಿಡಿದು ದಂಡ ಹಾಕಿದರೋ ಆಗಲೇ ಆತನ ವರ್ಗಾವಣೆ ಮುಹೂರ್ತವೂ ಕೂಡಿಬಂತು ಕಾಗೋಡು ಹಿಂಬಾಲಕರಿಗೆ.

ಸ್ಪೀಕರ್ ತಿಮ್ಮಪ್ಪ ಹಾಗೂಹೀಗೂ ಅಲ್ವಿನ್‌ರನ್ನು ಸಂಭಾಳಿಸಿಕೊಂಡಿದ್ದರು. ಆದರೆ ಆತ ರಾಮಚಂದ್ರಾಪುರ ಮಠಕ್ಕೆ ಅರಣ್ಯ ಸ್ವಾಹಾ ಮಾಡಿದ್ದಕ್ಕೆ ದಂಡ ಹಾಕಿದಾಗ ಸಹಿಸಿಕೊಳ್ಳಲಾಗಲಿಲ್ಲ. ಮಠ ಮಾಫಿಯಾದ ಹವ್ಯಕರೂ ರಾಘುನ ಪರವಾಗಿ ಕಾಗೋಡರನ್ನು ಕತ್ತಲಲ್ಲಿ ಸಂಧಿಸತೊಡಗಿದ್ದರು. ಬುರ್ನಾಸ್ ರಾಘು ಸ್ವಾಮಿಯ ಆಶೀರ್ವಾದ ಪಡೆಯಲು ಕಾಗೋಡು ಅಲ್ವಿನ್‌ರ ಎತ್ತಂಗಡಿ ಮಾಡಿದ್ದಾರೆ.

ಕಾಗೋಡರಂಥ ಹಿರಿತಲೆಯೇ ಕಂಡೂಕಾಣದಂತೆ ರಾಘು ರಕ್ಷಕ ಪಡೆಯಲ್ಲಿರುವುದು ಸಾಗರ-ಶಿವಮೊಗ್ಗೆಯ ಪ್ರಜ್ಞಾವಂತರನ್ನು ಬೆಚ್ಚಿಬೀಳಿಸಿದೆ. ಕಾಗೋಡರಿಗೆ ಬುದ್ಧಿ ಹೇಳೋರು ಯಾರು? ಕಾಗೋಡರ ತತ್ವ-ಸಿದ್ಧಾಂತ ಎಲ್ಲಿ ಹೋಯ್ತು?

■ ಶುದ್ದೋಧನ

ಶ್ರೀನಿವಾಸ್‌ಗೆ ಪೈಗಳ 'ಪ್ರಸಾದ'?



ಮಣಿಪಾಲದ ಸಾಮ್ರಾಜ್ಯಶಾಹಿ ಸೊಕ್ಕಿನ ಪೈ ...ಗಳ ಅಕ್ರಮ-ಅನ್ಯಾಯ-ಅನಾಹುತಕ್ಕೆಲ್ಲ ಸರ್ಕಾರಿ ... ಸಿಗುತ್ತಲೇ ಇದೆ. ಸರ್ಕಾರದ ಭೂಮಿಯನ್ನು ...ವಾಗಿ ವಶಪಡಿಸಿಕೊಳ್ಳುತ್ತಿರುವ ಪೈ ರಿಪಬ್ಲಿಕ್‌ಗೆ ...ಗಳಿಗೆಯೇ ಅದನ್ನು ಕಪ್ಪ ಕಾಣಿಕೆಯಂತೆ ಕರ್ನಾಟಕ ...ವೇ ಗೌರವಾದರದಿಂದ ಒಪ್ಪಿಸುತ್ತ ಬಂದಿದೆ. ...ಲ-ಮಧ್ಯ ಹೀಗೆ ಯಾವ ಸರ್ಕಾರ ಬಂದರೂ ... ಶರಣಾಗುತ್ತಿರುವುದು ದುರಂತ!

...ಡುಪಿಯ ಹೆರ್ಗ, ಶಿರ್ವ ಮತ್ತು 80 ಬಡಗು ... ಗ್ರಾಮಗಳ ವ್ಯಾಪ್ತಿಯ ಸಾವಿರಾರು ಎಕರೆ ...ಯನ್ನು ಮನಸೋಇಚ್ಛೆ ಕಬಳಿಸುತ್ತ ಸಾಗಿರುವ ... ಆಳುವವರನ್ನು ಮತ್ತವರ ಸಲಹೆಗಾರ ...-ಐಪಿಎಸ್ ಪಂಡಿತರನ್ನೆಲ್ಲ ದುಡ್ಡು ತೋರಿಸಿಯೇ ... ಇದು ಪೈಗಳ ಲಾಗಾಯ್ತಿನ ಬಿಸಿನೆಸ್ ಪಾಲಿಸಿ. ...ಜನ-ಕಾನೂನು ನಿಷ್ಠ-ಶುದ್ಧ ಹಸ್ತ ಎಂದೆಲ್ಲ ...ಕರಾಗಿರುವ ಕಂದಾಯ ಮಂತ್ರಿ ಶ್ರೀನಿವಾಸ್ ... ಆಸ್ಥಾನದಲ್ಲಿ ಪೈಗಳ ಕಪ್ಪ-ಕುರುಡು ಕಾಂಚಾಣದ ... ಯಶಸ್ವಿಯಾಗಿ ನಡೆದುಹೋಗಿದೆ.


...ಮಾಮಾಗಳಿಗೆ ಮಣಿಪಾಲದ ಆಸುಪಾಸಿನ ... ಮಾವನ ಮನೆಯಿಂದ ಬಂದ ಬಳುವಳಿಯಂತೆ! ... ಭೂಮಿ, ಮಾನ-ಮರ್ಯಾದೆ ಇಲ್ಲದೆ ಸರ್ಕಾರಿ ... ಪೈಗಳು ತೆರಿಗೆ ತುಂಬದೆ ವಂಚಿಸುವಷ್ಟು ...ಗಳು! ಮಣಿಪಾಲದ ಶಿಕ್ಷಣ, ಮುದ್ರಣ, ..., ಹೈನ್ಯಾರಿಯ ಮುಂತಾದ ಪರಶೇವಾರಿ ಸುಲಿಗೆ ... ಸ್ಥಾಪಿಸಿರುವ ಪೈಗಳು ಸರ್ಕಾರದಿಂದಲೂ ... ಮಾಡಿಸಿಕೊಳ್ಳುತ್ತಿದ್ದಾರೆ. ಆದರೆ ಭೂ ಮಂಜೂರಾತಿಗೆ ಹೇಳುವ ಉದ್ದೇಶವೇ ಒಂದು; ಅದನ್ನು ಬಳಸೋದೇ ಮತ್ತೊಂದಕ್ಕೆ.


ದಗಾಕೋರ ಪೈಗಳ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಮತ್ತು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ)ಗೆ ಮಣಿಪಾಲದ ಆಚೀಚೆಯ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ 1953 ರಿಂದ 1958 ರ ವರೆಗೆ ಒಟ್ಟು 266.27 ಎಕರೆ ಭೂಮಿ ಸರ್ಕಾರವೇ ಮಂಜೂರು ಮಾಡಿತ್ತು. ಪೈಗಳ ಪ್ರಭಾವವೇ ಹಂಗಿತ್ತು ಬಿಡಿ. ಈ ಜಾಗದಲ್ಲಿ ಭೂಮಂಜೂರಾತಿಯ ಷರತ್ತು ಉಲ್ಲಂಘಿಸಿ ಬೇರೆ-ಬೇರೆ ದಂಧೆ ಪೈಗಳು ಆರಂಭಿಸಿದ್ದಾರೆ. ಹೀಗೆ ಷರತ್ತು ಧಿಕ್ಕರಿಸಿದ ಪೈಗಳಿಂದ ಜಾಗ ಮರಳಿ ಸ್ವಾಧೀನಕ್ಕೆ ಪಡೆಯಲು 6.10.2000 ಇಸ್ವಿಯಲ್ಲಿ ಸರ್ಕಾರ ಆದೇಶ ಮಾಡಿತ್ತು.

ಆದರೆ ನ್ಯಾಯಾಧೀಶರ ಮಕ್ಕಳಿಗೆಲ್ಲ ತಮ್ಮ ಶಿಕ್ಷಣ ವ್ಯಾಪಾರಿ ಕೇಂದ್ರದಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ದುಬಾರಿ ಶಿಕ್ಷಣ ಕೋರ್ಸಿನ ಸೀಟು ಪುಕ್ಕಟೆಯಾಗಿ ಕೊಡುವ ದಂಧೆ ನೀತಿಯ ಪೈಗಳು ಸರ್ಕಾರದ ಆದೇಶಕ್ಕೆ ಹೆದರಲಿಲ್ಲ. ಸೀದಾ ಕೋರ್ಟಿಗೆ ಹೋಗಿ ಕೇಸು ಗೆದ್ದುಕೊಂಡು ಬಂದರು! ಆದರೂ ಮಾನ-ಮರ್ಯಾದೆ ಮಾತ್ರ ಕಲಿಯಲಿಲ್ಲ. ಮತ್ತೆ-ಮತ್ತೆ ಲ್ಯಾಂಡ್ ಗ್ರ್ಯಾಂಟ್ ಉದ್ದೇಶ ಕಡೆಗಣಿಸಿ ತಮ್ಮ ದಂಧೆಗೆ ಅನುಕೂಲಕರವಾಗಿ ಸರ್ಕಾರಿ ಭೂಮಿ ಬಳಸುತ್ತ ಬಂದರು. ಈ ಕಾನೂನುಬಾಹಿರ ಕೃತ್ಯದ ಬಗ್ಗೆ ಸರ್ಕಾರ ಜಿಲ್ಲಾಡಳಿತಕ್ಕೆ ದೂರುಗಳು ಹೋದವು.

ಆಗ ಜಿಲ್ಲಾಧಿಕಾರಿ ಡಾ. ವಿಶಾಲ್ ಒಂದು ವಿಸ್ತೃತ ತನಿಖೆ ನಡೆಸಿದರು. ಪೈ ಮಾಮಾಗಳು 109.38 ಎಕರೆ ಜಾಗದಲ್ಲಿ ಮಂಜೂರಿ ಷರತ್ತು ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ಬಹುಮಹಡಿ ಕಟ್ಟಡಗಳನ್ನು ಎಬ್ಬಿಸಿರುವುದು ಸಾಕ್ಷ್ಯಾಧಾರ ಸಮೇತ ಕಂಡುಹಿಡಿದರು. 85.10ರ ಎಕರೆಯಲ್ಲಿ ಭಾಗಶಃ ಷರತ್ತು ನಿಯಮ ಉಲ್ಲಂಘನೆ ಆಗಿದ್ದರೆ, 24.28 ಎಕರೆಯಲ್ಲಿ ಪೂರ್ತಿ ನಿಯಮಬಾಹಿರ ಭೋಗ್ಯ ನಡೆದಿದೆಯೆಂದು ಸರ್ಕಾರಕ್ಕೆ ಜಿಲ್ಲಾಧಿಕಾರಿ ವರದಿ ಸಲ್ಲಿಸಿದರು. ಉದ್ದೇಶ ಬದಲಾವಣೆ ಪೂರ್ವದಲ್ಲಿ ಸರ್ಕಾರದ ಅನುಮೋದನೆ ಪಡೆದುಕೊಂಡಿಲ್ಲವೆಂಬ ಗಂಭೀರ ಆಕ್ಷೇಪವೆತ್ತಿದ್ದರು! ಮಂಜೂರಾತಿ ಷರತ್ತು ಉಲ್ಲಂಘನೆ ಬಗ್ಗೆ ಆಗಾಗ್ಗೆ ಸರ್ಕಾರಕ್ಕೆ ಎಚ್ಚರಿಸಿದರೂ ಮತ್ತೆಮತ್ತೆ ಕಾನೂನು ಕಡಿಸಿದ್ದಾರೆಂದು ಡಾ. ವಿಶಾಲ್ ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ಬರೆದಿದ್ದರು.

ಪೈಗಳ ಈ ಭೂ ಭಾನಗಡಿ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರಕ್ಕಿರುವ ಎರಡು ಆಯ್ಕೆಗಳನ್ನು ಡಿಸಿ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಒಂದು ಭೂಮಿ ಪಡೆಯುವಾಗ ಹೇಳಿದ ಉದ್ದೇಶಕ್ಕೆ ಹೊರತಾಗಿ ಬಳಕೆ ಮಾಡಿದ ತಪ್ಪಿಗಾಗಿ ಸರ್ಕಾರ ತಕ್ಷಣ 109.38 ಎಕರೆ ಭೂಮಿಯನ್ನು ಹಿಂದಕ್ಕೆ ಪಡೆಯಬೇಕು. ಕಾನೂನಿನಂತೆ





ಪ್ರಕರಣ ಇತ್ಯರ್ಥ ಮಾಡಬೇಕು. ಮತ್ತೊಂದು ಆಯ್ಕೆಯೆಂದರೆ ಷರತ್ತು ಉಲ್ಲಂಘನೆ ಅಪರಾಧಕ್ಕಾಗಿ 109.38 ಎಕರೆ ಭೂಮಿಗೆ ಸರ್ಕಾರದ ದರದ ಮೂರು ಪಟ್ಟು ದಂಡ ವಿಧಿಸಿ ಘಟನೋತ್ತರ ಅನುಮತಿ ನೀಡಬಹುದೆಂಬುದು! ಈ ದಂಡದ ಮೊತ್ತ 1123 ಕೋಟಿಯಷ್ಟಾಗುತ್ತದೆಂದು ಜಿಲ್ಲಾಧಿಕಾರಿಯೇ ಲೆಕ್ಕ ಹಾಕಿ ವರದಿಯಲ್ಲಿ ಬರೆದಿದ್ದಾರೆ.

ಕಂದಾಯ ಇಲಾಖೆಗೆ ಜಿಲ್ಲಾಧಿಕಾರಿ ವರದಿ ತಲುಪುತ್ತಿದ್ದಂತೆಯೇ ಪೈ ಮಾಮಾಗಳ ವಾಮಮಾರ್ಗ ಕಾರ್ಯಾಚರಣೆ ಶುರುವಾಗಿಬಿಡುತ್ತದೆ. ಕಂದಾಯ ಮಂತ್ರಿ ಶ್ರೀನಿವಾಸ್ ಪ್ರಸಾದರ ಆಸ್ಥಾನದಲ್ಲಿ ಕರಾಮತ್ತಿಗಿಳಿಯುತ್ತಾರೆ ಪೈ ಮಾಮಾಗಳ ಏಜೆಂಟರು. ದಂಡ-ತೆರಿಗೆ ಯಾವುದೂ ಇಲ್ಲದೆ 109.38 ಎಕರೆ ಅಧಿಕೃತವಾಗಿ ಕಬ್ಜಾ ಮಾಡಿಕೊಳ್ಳುವ ಹಠಕ್ಕೆ ಬಿದ್ದ ಪೈಗಳು ತಮ್ಮ ನಂಬಿಗಸ್ಥ ಎಚ್.ಎಸ್. ಬಲ್ಲಾಳ್‌ರನ್ನು ಸಂಧಾನಕಾರರಾಗಿ ಮಂತ್ರಿ ಪ್ರಸಾದ್ ಬಳಿ ಕಳಿಸಲು ತಂತ್ರ ಮಾಡುತ್ತಾರೆ. ಬರೋಬ್ಬರಿ 30 ವರ್ಷ ಮಣಿಪಾಲದ ಪೈಗಳ ಆಸ್ಪತ್ರೆಯಲ್ಲಿ ಚಾಕರಿ, ಆನಂತರ ಮಾಹೆಯ ಉಪ-ಕುಲಪತಿಗಿರಿ, ನಿವೃತ್ತಿಯ ಬಳಿಕ ಪ್ರೊ.-ಛಾನ್ಸಲರ್ ಎಂಬ ಅಲಂಕಾರಿ ಸ್ಥಾನಮಾನ ಕೊಟ್ಟು ಪೈಗಳು ತಮ್ಮ ದರ್ಬಾರಿನಲ್ಲಿಟ್ಟುಕೊಂಡಿರುವ ಬಲ್ಲಾಳ್‌ಗೆ ಮಂತ್ರಿ ಪ್ರಸಾದರನ್ನು ಪಳಗಿಸಲು ಆತನ ತಮ್ಮನೇ ಅಸ್ತ್ರವಾಗಿ ಹೋದರು.

ಡಾ. ಎಚ್.ಎಸ್. ಬಲ್ಲಾಳ್ ಸಹೋದರ ಡಾ. ಸುದರ್ಶನ್ ಬಲ್ಲಾಳ್ ಪೈಗಳ ಬೆಂಗಳೂರು ಆಸ್ಪತ್ರೆಯ ಆಯಕಟ್ಟಿನ ವೈದ್ಯ. ಈತ ಮಂತ್ರಿ ಪ್ರಸಾದರ ಡಾಕ್ಟರ್. ಈ ಸುದರ್ಶನ ಅದ್ಯಾವ ಮೋಡಿ ಮಾಡಿದರೋ ಏನೋ? ನಿಷ್ಠೂರವಾದಿ ಪ್ರತೀತಿಯ ಮಂತ್ರಿ ಶ್ರೀನಿವಾಸ್ ಪ್ರಸಾದ್ ದಾರಿ ತಪ್ಪೇಬಿಟ್ಟರು. ಪೈಗಳ ಅಕ್ರಮ ಬಟ್ಟೆಯಾಗಿ ಸಕ್ರಮಕ್ಕೆ ಮುಂದಾದರು. ಕಂದಾಯ ಇಲಾಖಾಧಿಕಾರಿಗಳಿಗೆ ಪೈಗಳ ಭಾನಗಡಿಗೆ ದಂಡ-ಶುಲ್ಕ-ತೆರಿಗೆ ಯಾವುದೂ ಹಾಕದೆ ಸಕ್ರಮ ಮಾಡುವಂತೆ ರಹಸ್ಯ ನಿರ್ದೇಶನ ನೀಡಿದರು.

ಆದರೆ ಪುಕ್ಕಟೆಯಾಗಿ ಅಕ್ರಮ-ಸಕ್ರಮ ಮಾಡಲು ಕಾನೂನಿನ ತೊಡಕೊಂದು ಎದುರಾಗಿದೆ ಎಂದು ಕಂದಾಯ ಅಧಿಕಾರಿಗಳು ಮಂತ್ರಿಗಳಿಗೆ ಮನವರಿಕೆ ಮಾಡುತ್ತಾರೆ. ಜಿಲ್ಲಾಧಿಕಾರಿ ಡಾ. ವಿಶಾಲ್ 1123 ಕೋಟಿ ರೂ. ದಂಡ ಹಾಕಿ ಸಕ್ರಮಕ್ಕೆ ಶಿಫಾರಸ್ಸು ಮಾಡಿರುವುದು ಹೇಳುತ್ತಾರೆ. ಆದರೆ ಇಷ್ಟು ದೊಡ್ಡ ಮೊತ್ತ ಕೊಡಲು ಪೈಗಳ ಜಿಪುಣ ಮನಸ್ಸು ಸಿದ್ಧವಿರಲಿಲ್ಲ. ಆಳುವವರಿಗೆ ಪರ್ಸೆಂಟ್ ಹಂಚಿ ನಾಮಿನಲ್ ದಂಡ ಕೊಡುವ ತಂತ್ರಗಾರಿಕೆ ಹೆಣೆಯುತ್ತಾರೆ.

ಕಂದಾಯ ಇಲಾಖೆಯಲ್ಲಿ ದೊಡ್ಡ ಕಾರಸ್ಥಾನವೇ ನಡೆದಿದೆ. ಜಿಲ್ಲಾಧಿಕಾರಿಯ ವರದಿಯನ್ನು ಅನಾಮತ್ತಾಗಿ ತಿರುಚಲಾಗುತ್ತದೆ. ಜಿಲ್ಲಾಧಿಕಾರಿ 1123 ಕೋಟಿ ದಂಡ ವಸೂಲಿಗೆ ಮಾಡಿದ್ದ ಶಿಫಾರಸ್ಸು ಕೇವಲ 1,12,363 ಎಂದು 'ತಿದ್ದುಪಡಿ' ಆಗುತ್ತದೆ. ಪೈಗಳು ಷರತ್ತು ಉಲ್ಲಂಘಿಸಿ ಅನುಭೋಗಿಸುತ್ತಿರುವ 109. 38 ಎಕರೆ ಭೂಮಿ ಸರ್ಕಾರಿ ಮಾರ್ಗಸೂಚಿ ದರದ ಮೂರು ಪಟ್ಟು ದಂಡವೆಂದರೆ ಒಂದು ಲಕ್ಷ ಹನ್ನೆರಡು ಸಾವಿರದಾ ಮುನ್ನೂರಾ ಅರವತ್ತೂ ಮೂರು ರೂಪಾಯಿ ಎಂದು ಅರ್ಥೈಸುತ್ತದೆ ಕಂದಾಯ ಮಂತ್ರಿಯ ಅಧಿಕಾರಿ ಗಣ!

ಕಂದಾಯ ಇಲಾಖೆಯ ಅಧಿಕಾರಿಗಳು 05.06.2015ರಂದು ಕೇವಲ 1,12,363 ರೂ. ದಂಡ 'ಮಾಹೆ' ದೊರೆಗಳಿಗೆ ಹಾಕಿ 109.38 ಎಕರೆ ಇನಾಮಾಗಿ ಕೊಡುವ ಆದೇಶ ಹೊರಡಿಸಿದ್ದಾರೆ. (ಆರ್‌ಡಿ 30ಎಲ್‌ಜಿಪಿ 2015/5.6.2015) ಈಗಿರುವ ಸಂಶಯ ಒಂದೇ! ರಾಜಕೀಯ ಜೀವನದ ಕೊನೆಯ ಹಂತದಲ್ಲಿರುವ ಕಂದಾಯ ಮಂತ್ರಿ ಶ್ರೀನಿವಾಸ್ ಪ್ರಸಾದ್‌ಗೆ ಅಥವ ಅವರ ಇಲಾಖೆಯ ಅಧಿಕಾರಿಗಳಿಗೆ ಈ ಅಕ್ರಮ ಸಕ್ರಮದಲ್ಲಿ ಸಂದಾಯವಾದ ತಟ್ಟೆ ಕಾಸಿನ ಮೊತ್ತವೆಷ್ಟು? ತನ್ನ ಜೀವ ಉಳಿಸುತ್ತಿರುವ, ತನಗೆ ಇಲಾಜು ಮಾಡುತ್ತಿರುವ ವೈದ್ಯ ಸುದರ್ಶನ ಬಲ್ಲಾಳರ ಋಣ ತೀರಿಸಲು ಮಂತ್ರಿ ಪ್ರಸಾದ್ ಸರ್ಕಾರದ ಬೊಕ್ಕಸಕ್ಕೆ ಕೋಟಿ-ಕೋಟಿ ಹಾನಿ ಮಾಡುವ ಅತಿರೇಕ ಅಧಿಕಾರ ಚಲಾಯಿಸಿದರಾ? ಕಳಂಕವಂತೂ ಪ್ರಸಾದ್‌ಗೆ ಅಂಟಿದೆ.

ಇನ್ನೂ ಕಾಲ ಮಿಂಚಿಲ್ಲ, ಪೈಗಳಿಂದ 1123 ಕೋಟಿ ದಂಡ ಸರ್ಕಾರಕ್ಕೆ ಕಟ್ಟಿಸುವ ಛಾತಿ-ನಿಯತ್ತು ಮಂತ್ರಿ ಪ್ರಸಾದ್ ತೋರಿಸುವರಾ? ಅಥವಾ ಹಾಲು ಮಸೆದ ಕುಖ್ಯಾತಿಯಲ್ಲಿ ರಾಜಕಾರಣ ಮುಗಿಸುವರಾ?

■ ಶುದ್ದೋಧನ

ಪಟೇಲ್ ಗದ್ದಲ–ಒಳಮರ್ಮವೇನು

ಆಗಸ್ಟ್ 25ರಂದು ಗುಜರಾತ್ ರಾಜ್ಯ ಮತ್ತೊಮ್ಮೆ ಹೊತ್ತಿ ಉರಿಯಿತು. ಗುಜರಾತ್‌ನಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಾತ್ರವಲ್ಲ ಸಂಖ್ಯಾತ್ಮಕವಾಗಿಯೂ ಪ್ರಬಲವಾಗಿರುವ ಪಟೇಲ್ ಸಮುದಾಯದ ಲಕ್ಷಾಂತರ ಮಂದಿ ಅಂದು ಅಹಮದಾಬಾದ್ ನಗರದ ಬೀದಿಗಳಲ್ಲಿ ನೆರೆದಿದ್ದರು. ಅವರ ಬೇಡಿಕೆ ಇಷ್ಟೆ. ಪಟೇಲ್ ಸಮುದಾಯವನ್ನು ಓಬಿಸಿ ಜಾತಿಗಳ ಪಟ್ಟಿಗೆ ಸೇರಿಸಿ ಮೀಸಲಾತಿ ಸೌಲಭ್ಯ ಒದಗಿಸಬೇಕು ಎಂಬುದು.

ಚರಿತ್ರೆಯ ವಿಪರ್ಯಾಸ ಹೇಗಿದೆ ನೋಡಿ. ಮೂರು ದಶಕಗಳ ಹಿಂದೆ ನಡೆದಿದ್ದ ಮಂಡಲ್ ವಿರೋಧಿ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದದ್ದು ಇದೇ ಪಟೇಲ್ ಸಮುದಾಯ. ಈಗ ಒಂದು ಹೊಸ ತಲೆಮಾರು ಬರುತ್ತಿದ್ದಂತೆ ಈ ಸಮುದಾಯದ ಬೇಡಿಕೆಯೇ ಬದಲಾಗಿ ಹೋಗಿದೆ. ಮೀಸಲಾತಿ ವಿರೋಧಿಗಳು ಇಂದು ಮೀಸಲಾತಿ ಬೇಡಿಕೆಯನ್ನಿಟ್ಟುಕೊಂಡು ಬೃಹತ್ ಪ್ರತಿಭಟನೆಗೆ ಇಳಿದ್ದಿದ್ದಾರೆ.

ಇನ್ನೂ ಒಂದು ಸ್ವಾರಸ್ಯಕರ ವಿಚಾರವೇನೆಂದರೆ ದಿಢೀರನೆ ಸ್ಫೋಟಗೊಂಡ ಈ ಪ್ರತಿಭಟನೆಯ ನಾಯಕತ್ವ ಹಾರ್ದಿಕ್ ಪಟೇಲ್ ಎಂಬ 22ರ ಹರೆಯದ ಪಡ್ಡೆಹೈದನ ಕೈಯಲ್ಲಿದೆ. ನಿನ್ನೆ ಮೊನ್ನೆಯವರೆಗೂ ಈ ಹೈದ ಸಂಘ ಪರಿವಾರದ ಸಖ್ಯದಲ್ಲಿದ್ದವನು. ಪರಿವಾರದ ಪ್ರಭಾವದಲ್ಲಿರುವ ಪಟೇಲ್ ಜಾತಿಯ ಪ್ರಭಾವಿ ಸಂಘಟನೆಯಾದ ಸರ್ದಾರ್ ಪಟೇಲ್ ಗ್ರೂಪ್ (ಎಸ್‌ಪಿಜಿ)ನಲ್ಲಿದ್ದವನು. ಅಲ್ಲಿಂದ ಹೊರಬಿದ್ದು ಕೆಲವೇ ತಿಂಗಳುಗಳಲ್ಲಿ 'ಪಾಟಿದಾರ್ ಅನಾಮತ್ ಆಂದೋಲನ್ ಸಮಿತಿ' (ಪಿಎಎಸ್ -ಪಾಸ್) ಎಂಬ ಹೊಸ ಸಂಘಟನೆ ಹುಟ್ಟು ಹಾಕಿದ್ದಾನೆ. ಪಟೇಲ್ ಜಾತಿಯ ಜನರು ಲಕ್ಷಾಂತರ ಸಂಖ್ಯೆಯಲ್ಲಿ ಈ ಬಾಲಕನ ಹಿಂದೆ ಹೆಜ್ಜೆಹಾಕುತ್ತಿದ್ದಾರೆ. ಗುಜರಾತ್‌ನ ಈ ಎಲ್ಲ ವಿದ್ಯಮಾನಗಳು ನಾಟಕದ ದೃಶ್ಯಗಳಂತೆ ಭಾಸವಾಗುತ್ತಿದೆ.

ಆಗಸ್ಟ್ 25ರ ಪಾಟಿದಾರ್ ಅಥವ ಪಟೇಲರ ರ್‍ಯಾಲಿಯ ಘಟನಾವಳಿಗಳೆಲ್ಲವೂ ಬಹುತೇಕ ಶಾಂತಿಯುತವಾಗಿಯೇ ನಡೆದಿದ್ದವು. ಪೊಲೀಸರು ಯಾವುದೋ ಒಂದು ಕುಂಟುನೆಪದ ಆಧಾರದಲ್ಲಿ ಹಾರ್ದಿಕ್ ಪಟೇಲ್‌ನನ್ನು ಬಂಧಿಸುವದರೊಂದಿಗೆ ಹಿಂಸೆಗೆ ತಿರುಗಿದ ರ್‍ಯಾಲಿಯನ್ನು ತಹಬಂದಿಗೆ ತರಲು ಗುಜರಾತ್ ರಾಜ್ಯದ ಹಾಗೂ ಕೇಂದ್ರದ ಮೋದಿ ಸರ್ಕಾರಗಳು ಹರಸಾಹಸ ಪಡಬೇಕಾಯಿತು.

ಪಟೇಲರ ಆಕ್ರೋಶಕ್ಕೆ ಸರ್ಕಾರಿ ವಾಹನಗಳು, ಆಸ್ತಿಪಾಸ್ತಿಗಳೂ ಭಸ್ಮವಾಗಿವೆ. ಲಾಠಿ ಚಾರ್ಜ್, ಟಿಯರ್ ಗ್ಯಾಸ್ ಮುಂತಾದ ಕ್ರಮಗಳು ನಿಷ್ಪ್ರಯೋಜಕವಾಗಿವೆ. ಗೋಲಿಬಾರ್ ನಡೆದಿದೆ. ಇದರಲ್ಲಿ 8 ಜೀವಗಳು ಬಲಿಯಾಗಿವೆ. ಗಲಭೆಗೆ ಒಬ್ಬ ಪೊಲೀಸ್ ಪೇದೆಯೂ ಬಲಿಯಾಗಿರುವ ಸುದ್ದಿ ಸೂರತ್‌ನಿಂದ ಬಂದಿದೆ. ಕೂಡಲೆ ಕೇಂದ್ರದಿಂದ ಸಿಆರ್‌ಪಿಎಫ್, ಬಿಎಸ್‌ಎಫ್ ಪಡೆಗಳನ್ನು ರಂಗಕ್ಕೆ ಇಳಿಸಲಾಗಿದೆ. ರ್‍ಯಾಪಿಡ್ ಆಕ್ಷನ್ ಫೋರ್ಸ್‌ಗಳು ಬೀದಿಗಿಳಿದಿವೆ.

ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೇ ಹೋಗಿದ್ದರಿಂದ ಪೊಲೀಸರು ಹಾರ್ದಿಕ್ ಪಟೇಲ್‌ನನ್ನು ಬೇಷರತ್ ಬಿಡುಗಡೆ ಮಾಡಿದ್ದಾರೆ. ರಾಜ್ಯದ ಜನತೆಯನ್ನುದ್ದೇಶಿಸಿ ಮೋದಿಯವರು ಉದ್ದದ ಭಾವುಕ ಶೈಲಿಯ ಭಾಷಣ ಮಾಡಿದ್ದಾರೆ. ಜೀವನದಲ್ಲಿ ಪ್ರಪ್ರಥಮ ಬಾರಿಗೆ ಗುಜರಾತ್‌ನಲ್ಲೇ ಹುಟ್ಟಿ ಬೆಳೆದ ಗಾಂಧೀಜಿಯ ನೆನಪು ಮಾಡಿಕೊಂಡಿದ್ದಾರೆ. ಅವರ ಶಾಂತಿಮಂತ್ರದ ಸಹಾಯ ಪಡೆದು, ಪಟೇಲರು ಶಾಂತಿ ಕಾಪಾಡಬೇಕೆಂದು ಮನವಿ ಮಾಡಿದ್ದಾರೆ. ಏನೇ ವಿಷಯವಿದ್ದರೂ ಚರ್ಚಿಸಿ ಬಗೆಹರಿಸಿಕೊಳ್ಳೋಣ ಎಂದು ಗದ್ಗದಿತ ಕಂಠದಲ್ಲಿ ಅಲವತ್ತುಕೊಂಡಿದ್ದಾರೆ. ಈ ಭಾಷಣದ ವೇಳೆಯಲ್ಲಿ ಒತ್ತಡದಲ್ಲಿದ್ದಂತೆ ಕಂಡುಬಂದ ಮೋದಿಯವರ ಕಣ್ಣೀರು ಬಹುಶಃ ನಿಜವಾದ ಕಣ್ಣೀರಿರಬೇಕು.

ಕೋಮುವಾದಿ ಗಲಭೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಗುಜರಾತ್‌ನಲ್ಲಿ ಗಲಭೆಗಳಿಗೇನೂ ಕೊರತೆಯಿಲ್ಲ. ಚರಿತ್ರೆಯ ಪುಟಗಳನ್ನು ತಿರುವಿದರೆ ಮೋದಿ ಮಾದರಿ ಆಡಳಿತಕ್ಕೂ, ಗಲಭೆಗಳಿಗೂ ಅವಿನಾಭಾವ ಸಂಬಂಧವಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಗಲಭೆಗಳ ಪರಿಣಾಮವಾಗಿಯೇ ಮೋದಿ ಸಿಎಂ ಪಟ್ಟಕ್ಕೇರಿದ್ದು. ಪಟ್ಟ ಗಟ್ಟಿಯಾಗಲು ಅನುಸರಿಸಿದ ಮಾರ್ಗವೂ ಕೋಮು ಗಲಭೆಯೇ. ಹೀಗೆ ಧರ್ಮವನ್ನು ರಾಜಕೀಯಗೊಳಿಸುವ ಮಾರ್ಗದಲ್ಲೇ ನಡೆದು ಅವರು ಪ್ರಧಾನಿ ಪಟ್ಟಕ್ಕೇರಿದ್ದಾರೆ. ಮೊನ್ನೆ ಲೋಕಸಭಾ ಚುನಾವಣೆಯ ವೇಳೆಯಲ್ಲಿ ನಡೆದ ಉತ್ತರ ಪ್ರದೇಶ, ಅಸ್ಸಾಂ ಮುಂತಾದೆಡೆಗಳ ಗಲಭೆ, ಸಾವುನೋವುಗಳ ಪರಿಣಾಮ ಹೇಗೆ ಲೋಕಸಭಾ ಸೀಟುಗಳನ್ನು ಹೆಚ್ಚಿಸಿತು ಎಂಬುದು ನಮ್ಮ ಕಣ್ಣ ಮುಂದಿರುವ ನಿದರ್ಶನ. ಹೀಗೆ ಮೋದಿ ಮಾದರಿ



ಹಾರ್ದಿಕ್ ಬಿಚ್ಚಿಟ್ಟ ಸತ್ಯ

23ರ ಹರೆಯದ ಈ ಹೈದ ವೇದಿಕೆಗಳಲ್ಲಿ ಕತ್ತಿ ಹಿಡಿದು ಝಳಪಿಸುತ್ತಾನೆ, ಹೆಗಲ ಮೇಲೆ ಗನ್ನು ಹಿಡಿದು ಗಬ್ಬರ್‌ಸಿಂಗ್ ಥರದ ಪೋಸು ಕೊಡುತ್ತಾನೆ, ಸಾಮಾನ್ಯವಾಗಿ ಸೊಂಟಕ್ಕೆ ಒಂದು ಪಿಸ್ತೂಲು ನೇತಾಕಿಕೊಂಡು ತಿರುಗಾಡುತ್ತಾ ಅಂಡರ್‌ವಲ್ಡ್ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಾನೆ. ಇಂಥಾ ಹುಚ್ಚಾಟಗಳ ನಡುವೆ ಆಗಾಗ "ನಾನು ಎರಡನೇ ಸರ್ದಾರ್ ಪಟೇಲ್" ಎಂದು ಬಾಲಿಶವಾಗಿ ಬಡಬಡಿಸುತ್ತಾನೆ.

ಈ ಎಲ್ಲ ನಾಟಕೀಯ ದೃಶ್ಯಗಳು ಒಟ್ಟಾರೆ ಆರೆಸ್ಸೆಸ್ ಕೂಟದ ಮೀಸಲಾತಿ ವಿರೋಧಿ ನೀತಿಯ ಭಾಗವೇ ಆಗಿದ್ದರೂ ಇದು ಮೋದಿ – ಶಾ ಜೋಡಿಗೆ ಪೂರಕವಾಗಿಲ್ಲ, ಮೋದಿ ಮಾದರಿಯ ಮರ್ಮವನ್ನು ಬಿಚ್ಚಿಡುತ್ತಿರುವ ಹಾರ್ದಿಕ್‌ನ ಮಾತುಗಳೇ ಅದಕ್ಕೆ ಸಾಕ್ಷಿ.

"ನನಗೆ ಗುಜರಾತ್ ಮಾಡೆಲ್ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ, ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಹಳ್ಳಿಯಲ್ಲಿ ಒಂದೇ ಒಂದು ನೀರಿನ ಟ್ಯಾಂಕನ್ನೂ ಕಟ್ಟಿಸಿಲ್ಲ, ನಮ್ಮ ಹಳ್ಳಿಗೆ ಬಂದು ನೋಡಿ, ಎಲ್ಲಿದೆ ಅಭಿವೃದ್ಧಿ ಅಂತ. ಗುಜರಾತ್‌ನಲ್ಲಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿದ್ದಾರೆ. ಬಡವರು ಮತ್ತಷ್ಟು ಬಡವರಾಗಿದ್ದಾರೆ. ನನ್ನ ತಿಳಿವಳಿಕೆ ಪ್ರಕಾರ ಗುಜರಾತ್ ಮಾಡೆಲ್ ಅಂದರೆ ಇದಿಷ್ಟೆ."

"ರಾಜಕಾರಣಿಗಳು 58 ವಯಸ್ಸಿಗೆ ನಿವೃತ್ತಿಯಾಗಲಿ. ಯುವಜನತೆ ದೇಶವನ್ನು ಮುನ್ನಡೆಸಲಿ" ಎಂದು ಮತ್ತೊಂದು ಬಾಂಬ್ ಸಿಡಿಸಿದ್ದಾನೆ. ಅಂದಹಾಗೆ ಮೋದಿಯ ವಯಸ್ಸು 65 ವರ್ಷ! ಈ ಪ್ರಕಾರ ಮೋದಿ 7 ವರ್ಷಗಳ ಹಿಂದೆಯೇ ನಿವೃತ್ತಿಯಾಗಬೇಕಿತ್ತು!


"1985ರಲ್ಲಿ ನಾವು ಕಾಂಗ್ರೆಸ್ ಪಕ್ಷವನ್ನು ಬೇರುಸಮೇತ ಕಿತ್ತು ಹಾಕಿದ್ದೆವು; ಈ ಬಾರಿ ಬಿಜೆಪಿಗೆ ಅದೇ ಗತಿ ಬರಲಿದೆ. 2017 ರ ಚುನಾವಣೆಯಲ್ಲಿ ಕಮಲ ಅರಳುವುದಿಲ್ಲ."

"182 ಚಾನೆಲ್‌ಗಳ(ಅಂದರೆ ಗುಜರಾತ್‌ನ 182 ವಿಧಾನಸಭಾ ಕ್ಷೇತ್ರಗಳು) ರಿಮೋಟ್ ಕಂಟ್ರೋಲ್ ನನ್ನ ಕೈಯಲ್ಲಿರಬೇಕಾದರೆ ನನಗೆ ರಾಜಕೀಯ ಪಕ್ಷಗಳ ಅವಶ್ಯಕತೆ ಏನಿದೆ?"

"ಮೋದಿಯ ಗುಜರಾತ್‌ನಲ್ಲಿ ಉತ್ತಮ ಆಡಳಿತಗಾರರಿಲ್ಲ. ರಬ್ಬರ್ ಸ್ಟಾಂಪ್ ಆಡಳಿತ ಇಲ್ಲಿದೆ; ಆದರೆ ರಿಮೋಟ್ ಕಂಟ್ರೋಲ್ ದೆಹಲಿಯಲ್ಲೇ ಇದೆ. ಇಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಇನ್ಸ್‌ಪೆಕ್ಟರ್ ಹುದ್ದೆ 25 ಲಕ್ಷಕ್ಕೆ ಮತ್ತು ಕಾನ್ಸ್‌ಟೇಬಲ್ ಹುದ್ದೆ 15 ಲಕ್ಷಕ್ಕೆ ಮಾರಾಟವಾಗುತ್ತಿದೆ."

"ಸರ್ದಾರ್ ಪಟೇಲರನ್ನು ನಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳಬೇಕು; ಅದು ಬಿಟ್ಟು 180 ಅಡಿ ಪ್ರತಿಮೆ ಸ್ಥಾಪಿಸಿ ರಾಜಕೀಯ ಮಾಡೋದರಿಂದ ಏನೂ ಲಾಭವಿಲ್ಲ. ಕಳೆದ ದಶಕದಲ್ಲಿ 8900 ಪಟೇಲ್ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ದಾರ್ ಪಟೇಲರು ತಮ್ಮ ಸಮುದಾಯದ ರೈತರನ್ನು ಆತ್ಮಹತ್ಯೆಗೆ ದೂಡಬೇಕೆಂದು ಹೇಳಿರಲಿಲ್ಲ."

ಹೀಗೆ ವಿವಿಧ ಸಂದರ್ಭಗಳಲ್ಲಿ ಇಂಥ ಹತ್ತಾರು ಬಾಣಗಳನ್ನು ಹಾರ್ದಿಕ್ ಎಸೆದಿದ್ದಾನೆ. ಈ ಬಾಣಗಳು ಮೋದಿಯವರ ಕಡೆಗೆ ಗುರಿ ಮಾಡಿವೆ ಎಂಬುದನ್ನು ಪ್ರತ್ಯೇಕವಾಗಿ ಬಿಡಿಸಿ ಹೇಳಬೇಕಿಲ್ಲ ತಾನೇ?



ರಾಜಕೀಯಕ್ಕೆ ಗಲಭೆಗಳಿಂದ ಉದ್ದಕ್ಕೂ ಲಾಭವೇ ಆಗಿದೆ. ಆದರೆ ಈ ಬಾರಿ ಗುಜರಾತ್‌ನಲ್ಲಿ ನಡೆದ ಗಲಭೆಯ ದೃಶ್ಯಾವಳಿಗಳು ಮೋದಿ ಆಡಳಿತಕ್ಕೆ ಲಾಭ ತಂದುಕೊಡುತ್ತಿದೆಯೆ? ಇಲ್ಲವೇ?

ಮೋದಿಯ ತವರಿನಲ್ಲಿ ಇದ್ದಕ್ಕಿದ್ದಂತೆ ದುತ್ತನೆ ಎದುರಾಗಿರುವ ಈ ವಿದ್ಯಮಾನ ಹಲವು ರಾಜಕೀಯ ಪಂಡಿತರ ತಲೆಕೆಡಿಸಿರುವುದಂತೂ ನಿಜ. ಈ ಬಗ್ಗೆ ಹಲವು ಬಗೆಯ ವಿಶ್ಲೇಷಣೆಗಳು ಕೂಡ ಕೇಳಿಬರುತ್ತಿವೆ. ಮೀಸಲಾತಿ ನೀತಿಯನ್ನು ರದ್ದುಪಡಿಸಲು ಆರೆಸ್ಸೆಸ್ ಮತ್ತು ಅದರ ಪರಿವಾರದ ತೆರೆಮರೆಯ ತಂತ್ರವೇ ಈ ಪಟೇಲ್ ಚಳವಳಿ ಎಂಬುದು ಪ್ರಮುಖವಾಗಿ ಕೇಳಿಬರುತ್ತಿರುವ ಮಾತು. ಸನ್ನಿವೇಶವನ್ನು ಗಮನಿಸಿದರೆ ಈ ಮಾತನ್ನು ತಳ್ಳಿಹಾಕುವುದು ಸಾಧ್ಯವಿಲ್ಲ.

ಹಿರಿಯ ಪತ್ರಕರ್ತರಾದ ದಿನೇಶ್ ಅಮಿನ್‌ಮಟ್ಟು ಅವರ ಇತ್ತೀಚಿನ ಪ್ರಜಾವಾಣಿಯ ಲೇಖನ ವಾಸ್ತವಕ್ಕೆ ಹತ್ತಿರ ಎನ್ನಬಹುದಾದ ನೋಟವನ್ನು ಒದಗಿಸುತ್ತದೆ.

"ಬಹಿರಂಗವಾಗಿ ವಿರೋಧಿಸಲಾಗದ್ದನ್ನು ಅಂತರಂಗದ ಹುನ್ನಾರದ ಮೂಲಕ ನಾಶಪಡಿಸಲೆತ್ನಿಸುವುದು ಎಲ್ಲ ಕಾಲ-ದೇಶಗಳ ಸಂಚುಕೋರರ ಮೋಡಸ್ ಆಪರೆಂಡಿ. ಸಾಮಾಜಿಕ ನ್ಯಾಯದ ಪ್ರಮುಖ ಅಸ್ತ್ರವಾದ ಮೀಸಲಾತಿ ವಿರುದ್ಧ ಇಂತಹದ್ದೊಂದು ಸಂಚು ಗುಜರಾತ್ ರಾಜ್ಯದ ಪಟೇಲರ ಚಳವಳಿಯಲ್ಲಿ ಕಾಣಬಹುದು. ಮೀಸಲಾತಿ ನೀತಿಯನ್ನು ದೇಶದ ಯಾವ ರಾಜಕೀಯ ಪಕ್ಷವೂ ಇಂದು ಬಹಿರಂಗವಾಗಿ ವಿರೋಧಿಸುವ ಸ್ಥಿತಿಯಲ್ಲಿಲ್ಲ...

"ಮಂಡಲ್ ವರದಿಯ ಅನುಷ್ಠಾನವನ್ನು ವಿರೋಧಿಸಿ ಮೈಗೆ ಬೆಂಕಿ ಹಚ್ಚಿಕೊಂಡವರು ಮತ್ತು ಅವರನ್ನು ಬೆಂಬಲಿಸಿದ್ದ ಪಕ್ಷ-ಪರಿವಾರಿಗಳ ಅಂತರಂಗದ ಚಡಪಡಿಕೆ ಏನೇ ಇರಲಿ, ಇಂದು ಅವುಗಳು ಬಹಿರಂಗವಾಗಿ ಮೀಸಲಾತಿಯನ್ನು ಸಮರ್ಥಿಸಲೇಬೇಕಾದ ಸ್ಥಿತಿ...

"ಮೀಸಲಾತಿಯನ್ನು ಗೇಲಿ, ಅಪಹಾಸ್ಯ ಮಾ... ಫಲಾನುಭವಿಗಳೇ ಕೀಳರಿಮೆಯಿಂದ ಬಳಲುವ... ಅವರೇ ಮೀಸಲಾತಿ ವಿರೋಧಿಸುವಂತೆ ಮಾ... ಸಂಚಿನ ಒಂದು ಭಾಗವಾದರೆ, ಮೀಸಲಾತಿ... ಸುತ್ತ ವಿವಾದದ ಧೂಳೆಬ್ಬಿಸಿ ನೋಡುವವ... ಕುರುಡುಗೊಳಿಸಿ, ಅದರ ವಿರುದ್ಧ ಜನರನ್ನು ಎತ್ತಿ... ಸಂಚಿನ ಇನ್ನೊಂದು ಭಾಗ."

ಈಗಿನ ಗುಜರಾತ್ ವಿದ್ಯಮಾನವನ್ನು ಗ... ಮೇಲಿನ ಸಂಚು ಪಟೇಲ್ ವಿದ್ಯಮಾನದ... ಅಡಗಿರುವುದು ನಿಚ್ಚಳ. ಯಾಕೆಂದರೆ ಪಟೇಲ್... ಮೀಸಲಾತಿ ಬೇಡಿಕೆ ಯಾವ ರೀತಿಯಿ... ಸಮರ್ಥನೀಯವಲ್ಲ. "ಈಗಿನ ವಿಧಾನಸಭೆಯ... ಶಾಸಕರಲ್ಲಿ 44 ಮಂದಿ ಪಟೇಲರು. 26 ... ಸದಸ್ಯರಲ್ಲಿ ಐವರು ಪಟೇಲರು. ಮೂವರು... ಸಚಿವರು. ನಾಲ್ವರು ರಾಜ್ಯ ಸಚಿವರು, ಜೊತೆಗೆ ಮ... ಸ್ಥಾನ. ಉದ್ಯಮ, ಕೃಷಿ, ರಾಜಕೀಯ ಕ್ಷೇತ್ರ... ಮಟ್ಟದ ಆಧಿಪತ್ಯ ಹೊಂದಿರುವ ಮತ್ತೊಂದು ... ದೇಶದಲ್ಲೆಲ್ಲೂ ಕಾಣಲು ಸಾಧ್ಯವಿಲ್ಲ."

ಅಮೆರಿಕ ಹಾಗೂ ಯೂರೋಪಿನ ... ವ್ಯಾಪಾರ, ವ್ಯವಹಾರಗಳಲ್ಲಿ ತೊಡಗಿರುವ ಭಾರ... ಗುಜರಾತಿಗಳದು ಸಿಂಹಪಾಲು, ಅವರಲ್ಲಿ ಬ... ಪಟೇಲ್ ಜಾತಿಗೆ ಸೇರಿದವರು. ಸೌದಿ ... ದೇಶಗಳಲ್ಲೂ ಇದೇ ಚಿತ್ರಣವನ್ನು ನಾವು ಕಾಣ... ಗುಜರಾತಿ ಭಾಷೆಯಲ್ಲಿ ಪಾಟಿದಾರ್ ಎಂದರೆ ... ಜಮೀನ್ದಾರ ಎಂದರ್ಥ. ಗುಜರಾತ್‌ನಲ್ಲಿ ಭ... ವರ್ಗವೆಂದರೆ ಇದೇ ಪಾಟಿದಾರ್ ಅಥವ ... ಜಾತಿಯೇ. ಮುಂಬೈ, ಅಹಮದಾಬಾದ್, ... ಮುಂತಾದೆಡೆಗಳಲ್ಲಿ ಕೈಗಾರಿಕೆ ಹಾಗೂ ವಾ... ಉದ್ಯಮಿಗಳಾಗಿರುವ ಪಟೇಲರು ಯಥೇಚ್ಛವಾಗಿ... ಐಟಿ, ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣ ... ಬಹುಪಾಲು ಪಟೇಲ್ ಜಾತಿಯವರ ಒಡೆತ...

ಗುಜರಾತ್ ರಾಜ್ಯದ ಓಬಿಸಿ ಆಯೋಗದ... ಗಿರುವ ಗೌರಂಗ್ ಜಾನಿ ಅವರ ಪ್ರಕಾರ "ಓಬ... ಸೇರಲು ಬೇಕಾದ 11 ಮಾನದಂಡಗಳಲ್ಲಿ ಒಂ... ಪಟೇಲ್ ಜಾತಿಗೆ ಅನ್ವಯಿಸುವುದಿಲ್ಲ, ಗುಜ... ಓಬಿಸಿ ಪಟ್ಟಿಯಲ್ಲಿರುವ 146 ಸಮುದಾ... ಕಾನೂನುಬದ್ಧವಾಗಿ ಅರ್ಜಿ ಸಲ್ಲಿಸಿ, ಓಬಿಸಿ ಸ... ಒತ್ತಾಯಿಸಿದ್ದವು. ಆದರೆ ಪಟೇಲ್ ಜಾತಿಯ ... ಇದುವರೆಗೂ ಅಂಥಾ ಯಾವ ಪ್ರಯತ್ನವನ್ನೂ... ಇದನ್ನು ನೋಡಿದರೆ ಅವರಿಗೆ ಮೀಸಲಾತಿ ಪಡೆ... ಬೇಕಿಲ್ಲ; ಬದಲಿಗೆ ಬೇರೆಯವರಿಗೆ ಸಿ... ಮೀಸಲಾತಿಯನ್ನು ಕಿತ್ತುಹಾಕುವ ಉದ್ದೇಶವಿದೆ ...

ಉದ್ಯೋಗ ಮತ್ತು ಶಿಕ್ಷಣದಲ್ಲಿ ಪಟೇಲರ ಅ... ಓಬಿಸಿಗಳು ಕಸಿಯುತ್ತಿದ್ದಾರೆ ಎಂಬುದು ಕೂಡ ... ವಾದ. ಮೆಡಿಕಲ್ ಸೀಟುಗಳ ಉದಾಹರಣೆಯನ್ನೇ... ವೈದ್ಯಕೀಯ ಶಿಕ್ಷಣದ 4256 ಜನರಲ್ ... ಶೇಕಡ 25ರಷ್ಟು, ಅಂದರೆ 1099 ಸೀಟುಗಳನ್ನು... ಪಡೆದುಕೊಂಡಿದ್ದಾರೆ. ಈ ಕೋರ್ಸ್‌ಗಳ ... ಮಾರ್ಕ್ಸ್‌ಗಳಲ್ಲಿರುವ ವ್ಯತ್ಯಾಸವೂ ಕೇವಲ 2 ... ಮಾತ್ರ. ಉದಾಹರಣೆಗೆ ಹೆಸರಾಂತ ಬಿಜೆ ... ಕಾಲೇಜಿನಲ್ಲಿ ಜನರಲ್ ಕೆಟಗರಿಯವರಿ... ಕಡ್ಡಾಯವಾಗಿದ್ದರೆ, ಅದೇ ಓಬಿಸಿಗಳಿಗೆ 93.1... ಬಹುತೇಕ ಕೋರ್ಸುಗಳಲ್ಲಿ ಇದೇ ಇಂದಿನ ...

ಹೀಗಿರುವಾಗ ಪಟೇಲರಿಗೆ ಮೀಸಲಾತಿ ಎ... ಅಸಂಬದ್ಧವಾದುದು. ಹಾಗಿದ್ದರೆ ಯಾಕಾಗಿ... ಸಮುದಾಯ ಲಕ್ಷಾಂತರ ಸಂಖ್ಯೆಯಲ್ಲಿ ಈ ಪಡ್ಡೆ... ಹಿಂದೆ ಹೊರಟಿದೆ? ಅವರೆಲ್ಲರೂ ಈ ... ಒಳಸಂಚಿನಲ್ಲಿ ಭಾಗೀದಾರರೆನ್ನಲು ಸಾಧ್ಯವೆ?

ಸೂಕ್ಷ್ಮವಾಗಿ ಗಮನಿಸಿದರೆ ಪಟೇಲ್ ... ಆಕ್ರೋಶಕ್ಕೂ ಗುಜರಾತ್ ರಾಜ್ಯದ ಇಂದಿನ ... - ಆರ್ಥಿಕ ಬಿಕ್ಕಟ್ಟಿಗೂ ನೇರ ಸಂಬಂಧವಿದೆ ಎ...

ಬಿಕ್ಕಟ್ಟಿನಲ್ಲಿ ಗುಜರಾತ್ ಮಾ...

ಜನಸಂಖ್ಯೆಯ ಸುಮಾರು 15-16ರಷ್ಟಿರು... ಸಮುದಾಯ ಒಟ್ಟಾರೆಯಾಗಿ ಈ ಶ್ರೇಣೀಕೃತ... ಮೇಲ್‌ಸ್ತರದಲ್ಲಿದೆ ಎನ್ನಬಹುದಾದರೂ... ಶ್ರೀಮಂತರೇನಲ್ಲ, ಬಹುಸಂಖ್ಯಾತ ಪಟೇಲರು... ಕೃಷಿಕರು. ಗುಜರಾತ್‌ನ ಅಭಿವೃದ್ಧಿ ಮಾದ... ಭೂಮಿಯನ್ನು ಕಸಿದುಕೊಂಡಿದ್ದು ಬಿಟ್ಟ... ಕಿಸಿದಿದ್ದೇನೂ ಇಲ್ಲ, ಗುಜರಾತ್‌ನಲ್ಲೂ ರೈತರ... ಜಾತಿಯವರನ್ನೂ ಒಳಗೊಂಡು) ಆ...

ಬರಿಗಾಲಿನ ಸ್ಪರ್ಧಿಗಳ ಕತೆ

ಮೋದಿ ಪ್ರಧಾನಿಯಾದ ನಂತರ ಮೀಸಲಾತಿಯ ವಿರುದ್ಧ ನಾನಾ ಮಸಲತ್ತುಗಳು ನಡೆಯುತ್ತಿರುವುದನ್ನು ನಾವು ನಿತ್ಯವೂ ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ವಾಟ್ಸ್‌ಆಪ್‌ನಲ್ಲಿ ಹರಿದಾಡಿದ ಒಂದು ಪುಟ್ಟ ಕತೆ ಸ್ವಾರಸ್ಯಕರವಾಗಿದೆ. ಅದರ ಪೂರ್ಣಪಾಠ ಇಲ್ಲಿದೆ ಓದಿ.

ಸಾಮ್ರಾಟ ಸಭಾಪುರದ ಮಹಾರಾಜರ ಆಡಳಿತ ಅತ್ಯಂತ ಅಭಿವೃದ್ಧಿಶೀಲವೂ ಅನವರತ ಪ್ರಜಾಪರವೂ ಆಗಿದ್ದಿತು. ನೆರೆಹೊರೆಯ ದೇಶಗಳೊಂದಿಗೆ ಸುಮಧುರ ಸಂಬಂಧವಿದ್ದುದರಿಂದ ಬಹಳ ಕಾಲದಿಂದ ಯಾವುದೇ ಯುದ್ಧ ನಡೆದಿರಲಿಲ್ಲ. ಸಾವಿರಾರು ಸೈನಿಕರು ಯಾವುದೇ ಸವಾಲುಗಳಿಲ್ಲದೇ ಆರಾಮಾಗಿದ್ದರು. ಯುದ್ಧದ ಭಯವಿಲ್ಲವಾಗಿ ಸೈನಿಕರೆಲ್ಲಾ ಜಡ್ಡುಗಟ್ಟಿ ಹೋಗಿದ್ದರು. ಬಹಳ ವರ್ಷಗಳಿಂದ ಹೊಸ ಸೈನಿಕರ ನೇಮಕಾತಿಯೂ ನಡೆದಿರಲಿಲ್ಲ ಮತ್ತು ಅದರ ಅವಶ್ಯಕತೆಯೂ ಬಂದಿರಲಿಲ್ಲ, ರಾಜಾಡಳಿತದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತು.

ಒಂದು ದಿನ ಮುಖ್ಯ ಅಮಾತ್ಯರೂ, ಪ್ರಚಂಡ ಮುತ್ಸದ್ದಿಗಳೂ ಆಗಿದ್ದ ಸುಬುದ್ಧಿ ಮಹಾನುಭಾವರು ಮಹಾರಾಜರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಇಂತೆಂದರು: "ರಾಜನ್, ತಮ್ಮ ಆಳ್ವಿಕೆಯಲ್ಲಿ ಎಲ್ಲವೂ ಸುಸೂತ್ರವಾಗಿರುವಂತೆ ಹೊರನೋಟಕ್ಕೆ ಕಂಡುಬಂದರೂ ಅನೇಕ ದೋಷಗಳೂ, ನ್ಯೂನತೆಗಳೂ ನಮ್ಮ ಪ್ರಜೆಗಳಲ್ಲಿ ಇರುವ ಸಾಧ್ಯತೆಗಳಿವೆ. ಅವನ್ನು ಸರಿಪಡಿಸುವುದು ತಮ್ಮ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿದೆ."

ಈ ಮಾತನ್ನು ಕೇಳಿ ಮಹಾರಾಜರಿಗೆ ಅಸಂತೋಷವಾಗುವುದು. ಆದರೂ ಅವರು ಕೋಪಗೊಳ್ಳಲಿಲ್ಲ, ಕಾರಣ ಆ ಅಮಾತ್ಯರಲ್ಲಿದ್ದ ವಿದ್ವತ್ತು ಮತ್ತು ಆಪತ್ತಿನಲ್ಲಿ ಅತ್ಯುತ್ತಮ ಸಲಹೆಗಳನ್ನು ಕೊಟ್ಟು ಮಹಾರಾಜರ ಘನತೆಯನ್ನು ಕಾಪಾಡಿದ್ದ ಅನುಭವ. ಮಹಾರಾಜರು ಹೀಗೆಂದರು: "ಮಂತ್ರಿವರ್ಯರೇ, ತಮ್ಮ ಅನಿಸಿಕೆಗೆ ಕಾರಣವಾದರೂ ಏನು? ಮತ್ತು ನಮ್ಮಿಂದ ಕರ್ತವ್ಯಲೋಪವಾಗಿದ್ದರೆ ಅದನ್ನು ಕಂಡುಹಿಡಿಯುವುದು ಹೇಗೆ? ಅದಕ್ಕೆ ಪರಿಹಾರವೇನು?" ಇದನ್ನು ಕೇಳಿದ ಅಮಾತ್ಯರು ಪ್ರಸನ್ನರಾಗಿ "ರಾಜನ್, ತಮ್ಮ ಘನತೆಗೆ ತಕ್ಕ ಮಾತುಗಳನ್ನಾಡಿರುವಿರಿ. ತಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡುವೆನು. ತಮ್ಮಲ್ಲಿ ಒಂದು ಭಿನ್ನಹ. ನಾವು ಅನೇಕ ವರ್ಷಗಳಿಂದಲೂ ಸೈನಿಕರ ನೇಮಕಾತಿಯನ್ನೇ ಮಾಡಿಲ್ಲ. ಇಂದು ನಮಗೆ ಶತ್ರುಗಳ ಭಯವಿಲ್ಲ ನಿಜ. ಆದರೆ ದುರಾದೃಷ್ಟವಶಾತ್ ನೆರೆರಾಜ್ಯದವರು ಆಕ್ರಮಣ ಮಾಡಿದರೆ ನಾವು ಸೋಲನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಸೈನ್ಯವನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿಡಬೇಕಾದದ್ದು ಮಹಾರಾಜರ ಕರ್ತವ್ಯ, ಇದಕ್ಕಾಗಿಯೇ ಪ್ರಜೆಗಳು ತಮ್ಮನ್ನು ನಂಬಿ ತಮಗೆ ಸುಂಕ ಕಂದಾಯ ಇತ್ಯಾದಿಗಳನ್ನು ಕೊಡುತ್ತಾರೆ. ತಾವು ದಯಮಾಡಿ ಸೈನಿಕರ ನೇಮಕಾತಿಗೆ ಅನುಮತಿಯನ್ನು ನೀಡಬೇಕು."

ಮಹಾರಾಜರು ಕೂಡಲೇ ಒಪ್ಪಿಗೆ ನೀಡುತ್ತಾರೆ. ಇಡೀ ರಾಜ್ಯದಲ್ಲಿ ಡಂಗುರ ಸಾರಿಸಿ ಸೈನ್ಯಕ್ಕೆ ಸೇರಲು ಇಚ್ಛಿಸುವವರು ಒಂದು ಗೊತ್ತಾದ ದಿನ ರಾಜಧಾನಿಯ ಅತಿದೊಡ್ಡ ಮೈದಾನವಾದ ಖಗಪಿಂಗಳ ಸ್ಥಳಕ್ಕೆ ಬಂದು ಸೇರುವಂತೆ ತಿಳಿಸಲಾಗುವುದು. ಆ ದಿನ ಮಹಾರಾಜರು ಖುದ್ದು ಹಾಜರಿದ್ದು ಸೈನಿಕರ ಆಯ್ಕೆಯನ್ನು ವೀಕ್ಷಿಸುವಂತೆ ಅಮಾತ್ಯರು ವಿನಂತಿಸುವರು.

ಸೈನಿಕರ ಆಯ್ಕೆಯನ್ನು ಒಂದು ಓಟದ ಸ್ಪರ್ಧೆಯ ಮುಖಾಂತರ ನಡೆಸಲಾಗುವುದು. ಸ್ಪರ್ಧಿಗಳು ಒಂದು ಯೋಜನ ದೂರವನ್ನು ಓಡಬೇಕು. ಮೊದಲು ಗುರಿ ಮುಟ್ಟಿದ ನೂರು ಜನರನ್ನು ಆಯ್ಕೆ ಮಾಡಲಾಗುವುದೆಂದು ತಿಳಿಸಲಾಯಿತು.

ಸ್ಪರ್ಧಿಗಳಲ್ಲಿ ಕೆಲವರು ಅತ್ಯಂತ ದಷ್ಟಪುಷ್ಟರಾಗಿದ್ದು ಉತ್ತಮ ಪಾದಕವಚ (ಷೂ) ಗಳನ್ನು ಧರಿಸಿ ಬಂದಿದ್ದರು. ಕೆಲವರು ಸಾಮಾನ್ಯ ಪಾದರಕ್ಷೆಗಳನ್ನು ಧರಿಸಿ ಬಂದಿದ್ದರು. ಮತ್ತೂ ಕೆಲವರು ಬರಿಗಾಲಿನಲ್ಲಿ ಬಂದಿದ್ದರು. ಆ ಬರಿಗಾಲಿನ ಜನ ಬಹುದೂರದಿಂದ ಬಂದಿದ್ದು ದೇಹ ಬಳಲಿ ಸೊರಗಿರುವುದು. ಆದರೆ ಅವರ ಮುಖದಲ್ಲಿ ಉತ್ಸಾಹ ತುಂಬಿ ತುಳುಕುತ್ತಿರುವುದು.


ಸ್ಪರ್ಧೆ ಪ್ರಾರಂಭವಾಯಿತು. ನಿರೀಕ್ಷೆಯಂತೆ ಹತ್ತಿರದ ಊರುಗಳಿಂದ ಬಂದಿದ್ದವರೂ, ದಷ್ಟಪುಷ್ಟರೂ ಆಗಿದ್ದವರೂ, ಉತ್ತಮ ಪಾದಕವಚಗಳನ್ನು ಧರಿಸಿದ್ದವರೂ ರಭಸದಿಂದ ಓಡಿ ಗುರಿ ಮುಟ್ಟುವರು. ಬರಿಗಾಲಿನವರಿಗೆ ಒರಟುದಾರಿಯಲ್ಲಿದ್ದ ಕಲ್ಲು ಮುಳ್ಳುಗಳು ಚುಚ್ಚಿ ಅಪಾರ ಯಾತನೆಯನ್ನು ಉಂಟುಮಾಡುವುವು. ಜೊತೆಗೆ ಈಗಾಗಲೇ ಬಹು ದೂರದಿಂದ ನಡೆದುಬಂದಿದ್ದ ಬಳಲಿಕೆ ಅವರನ್ನು ಕಾಡುವುದು. ಅವರು ಅದನ್ನೆಲ್ಲ ನುಂಗಿಕೊಂಡು ಓಡುವರು. ಆದರೆ ಅವರು ಗುರಿಮುಟ್ಟುವ ಮುನ್ನವೇ ಅನೇಕರು ತಮಗಿದ್ದ ಸೌಲಭ್ಯಗಳ ಫಲವಾಗಿ ಸುಲಭವಾಗಿ ಗುರಿ ಮುಟ್ಟುವರು. ಸೋತ ನತದೃಷ್ಟ ಮಂದಿ ದುಃಖದಿಂದ ಒಂದುಕಡೆ ಕೂರುವರು.

ಮಹಾರಾಜರು ಮೊದಲು ಗುರಿಮುಟ್ಟಿದ ನೂರು ಮಂದಿಯನ್ನು ಆಯ್ಕೆಮಾಡಲು ತಿಳಿಸುವರು. ಆಗ ಮುತ್ಸದ್ದಿಯಾಗಿದ್ದ ಸುಬುದ್ಧಿ ಅಮಾತ್ಯರು ಇಂತೆಂದರು: "ರಾಜನ್, ತಪ್ಪು ನಡೆಯುತ್ತಿರುವುದು ಇಲ್ಲೇ. ನಾವು ಆಯ್ಕೆ ಮಾಡುವ ವಿಧಾನದಲ್ಲೇ ದೊಡ್ಡ ದೋಷವಿದೆ. ನಾವು ಎಲ್ಲರಿಗೂ ಸಮಾನ ಸೌಲಭ್ಯಗಳು ದೊರೆಯುವಂತೆ ಮಾಡಬೇಕಿತ್ತು, ದೂರದ ಊರುಗಳಿಂದ ಬರಿಗಾಲಲ್ಲಿ ಬಂದು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಎರಡನೇ ಮೂರನೇ ಸ್ಥಾನ ಗಳಿಸಿರುವವರ ಸಾಮರ್ಥ್ಯ ಮೊದಲ ಸ್ಥಾನ ಗಳಿಸಿದವರಿಗಿಂತ ಮೇಲ್ಮಟ್ಟದ್ದು, ಅವರಿಗೆ ಪೌಷ್ಟಿಕ ಆಹಾರ ಮತ್ತು ಅತ್ಯುತ್ತಮ ಪಾದಕವಚಗಳನ್ನು ಒದಗಿಸಿದರೆ ಅವರನ್ನು ಮೀರಿಸುವವರು ಯಾರೂ ಇರಲಾರರು. ನಮಗೆ ಬೇಕಾಗಿರುವುದು ಅಂಥಾ ಅಸಲಿ ಶಕ್ತಿಶಾಲಿಗಳೇ ಹೊರತು ಕೇವಲ ಸೌಲಭ್ಯಗಳ ದೆಸೆಯಿಂದ ಮೊದಲಿಗರಾಗುವವರಲ್ಲ, ಆದ್ದರಿಂದ ಬರಿಗಾಲಿನಲ್ಲಿದ್ದರೂ ಸಾಕಷ್ಟು ಸಾಧನೆ ತೋರಿದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡುವುದು ಜಾಣತನ."

ಈ ವಿವರಣೆಯನ್ನು ಕೇಳಿದ ಮಹಾರಾಜರು ಆಶ್ಚರ್ಯದಿಂದ ಒಂದುಕ್ಷಣ ಮೌನವಾಗುವರು. ಅವರಿಗೆ ತಮ್ಮ ತಪ್ಪಿನ ಅರಿವಾಗುವುದು. ಅಮಾತ್ಯರ ಸಲಹೆಯಂತೆ ಆ ಬರಿಗಾಲು ಜನರನ್ನು ಸೈನ್ಯಕ್ಕೆ ಆಯ್ಕೆ ಮಾಡುವರು. ಇದರಿಂದ ಆ ರಾಜ್ಯದ ಸೈನ್ಯ ಅತ್ಯಂತ ಪ್ರಬಲವಾಗುವುದು.

ಮುಂದೆ ಅಮಾತ್ಯರ ಸಲಹೆಯ ಮೇರೆಗೆ ಆ ರಾಜ್ಯದಲ್ಲಿನ ಬರಿಗಾಲಿನ ಶ್ರೇಯೋಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸುವರು.

ಈ ಪ್ರಸಂಗ "ಮೀಸಲಾತಿ ವಿರೋಧಿಗಳ" ಕಣ್ಣು ತೆರೆಸಲಿ. ಮೀಸಲಾತಿಯ ಬಗ್ಗೆ ಮುಕ್ತ ಮನಸ್ಸಿರಲಿ. ಮೀಸಲಾತಿ ನಾವು ಯಾರಿಗೋ ಕೊಡುತ್ತಿರುವ ಭಿಕ್ಷೆಯಲ್ಲ, ಅದು ನಾವು ಸಲ್ಲಿಸಬೇಕಿರುವ ಒಂದು ಕರ್ತವ್ಯ ಎಂಬುದರ ಅರಿವಿರಲಿ.



...ದ್ದಾರೆ. ದೇಶದ ಕೃಷಿ ಬಿಕ್ಕಟ್ಟು ಗುಜರಾತ್‌ನಲ್ಲಿ ... ಹೆಚ್ಚೇ ಹೊರತು ಕಡಿಮೆಯೇನಿಲ್ಲ.

...ದಾರ್ ಸಮುದಾಯದವರ ಹಿಡಿತದಲ್ಲಿದ್ದ ವಜ್ರದ ...ನೆಲಕಚ್ಚಿದೆ. ಸುಮಾರು 20,000 ಸಣ್ಣಪುಟ್ಟ ...ದು ಮುಚ್ಚಿಕೊಂಡಿವೆ. ಈ ಉದ್ಯಮದ ಸಾವಿರಾರು ...ಸಗಾರರು ಉದ್ಯೋಗ ಕಳೆದುಕೊಂಡು ಮತ್ತೆ ...ಮರಳಿದ್ದಾರೆ. ಮೋದಿ ಮಾದರಿಯ ವಿಖ್ಯಾತ ... ಗುಜರಾತ್ ಸಮಾವೇಶಗಳು ಭಾರೀ ...ಳಿಗೆ ಲಾಭದಾಯಕವಾಗಿದೆಯೇ ಹೊರತು, ...ಸಮುದಾಯದವರ ಸಣ್ಣ ಮತ್ತು ಮಧ್ಯಮ ...ಗೆ ಪೂರಕವಾಗಿಲ್ಲ.

...ರ್ವ್ ಬ್ಯಾಂಕ್ ಇತ್ತೀಚೆಗೆ ಸಂಗ್ರಹಿಸಿರುವ ... ಪ್ರಕಾರ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ...ಉದ್ಯಮಗಳು ಸಂಕಷ್ಟದಲ್ಲಿವೆ. ಗುಜರಾತ್‌ನಲ್ಲಿ ... ಲಕ್ಷದ 61 ಸಾವಿರ ಇಂಥ ನೋಂದಾಯಿತ ...ವೆ. ಅವುಗಳಲ್ಲಿ ಬಹುಪಾಲು ಪಟೇಲ್ ಜಾತಿ ...ಖ್ಯೆಯಲ್ಲಿರುವ ಅಹಮದಾಬಾದ್, ಸೂರತ್, ...ಕ್, ವಡೋದರಾ, ಭರೂಚ್, ಜಾಮನಗರ್, ... ಮತ್ತು ವಲ್ಸದ್ ಜಿಲ್ಲೆಗಳಲ್ಲಿ ಕೇಂದ್ರೀಕೃತ ...21 ಲಕ್ಷ ಮಂದಿಗೆ ಉದ್ಯೋಗ ಕಲ್ಪಿಸಿವೆ. ಈ ...ಗಳ ಪೈಕಿ 48,000 ಉದ್ಯಮಗಳು ...ಡಿವೆ.

...ವಾಸಿಗಳಾಗಿರುವ ಪಟೇಲರಲ್ಲೂ ಕೆಳ ಮಧ್ಯಮ, ...ವರ್ಗದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ... ನಿರುದ್ಯೋಗಿಗಳ ಸಂಖ್ಯೆಯೂ ದೊಡ್ಡ ...ಲ್ಲಿದೆ.

...ಸಂಕಷ್ಟದಲ್ಲಿರುವ ರೈತರ ನೋವನ್ನೂ, ನಿರು...ಯುವಕರ ಪಡೆಯ ಆಕ್ರೋಶವನ್ನೂ, ...ವ ಸಣ್ಣಪುಟ್ಟ ಉದ್ದಿಮೆದಾರರ ಆಕಾಂಕ್ಷೆಗಳನ್ನು ...ಕ್ ಪಟೇಲ್ ಬಂಡವಾಳವಾಗಿಸಿಕೊಂಡಂತೆ ...

...ಅಷ್ಟು ಮಾತ್ರ ಹೇಳಿದರೆ ಎಲ್ಲವೂ ಮುಗಿದು ...ದಿಲ್ಲ. ಕೇವಲ ಒಂದೇ ತಿಂಗಳ ಅವಧಿಯಲ್ಲಿ ...ಜನರನ್ನು ಈ ಎಳಸು ಬಾಲಕ ಒಟ್ಟುಗೂಡಿಸಿ ...ಹೇಗೆ? ಅದರಲ್ಲೂ ಸಮಾವೇಶ ಮತ್ತು ಅದಕ್ಕೆ ...ವ ಏರ್ಪಾಟುಗಳು, ವ್ಯವಸ್ಥಿತ ಪ್ರಚಾರ ಎಲ್ಲವನ್ನೂ ...ರೆ ಇದರ ಹಿಂದೆ ಕಾಣದ ಅನುಭವಿ ಕೈಗಳ ...ವುದು ನಿಚ್ಚಳ. ಅಂಥ ಅನುಭವಿ ಕೈಗಳು ...

...ಮಾನಗಳಿಂದಲೂ ತಮ್ಮ ತೆರೆಮರೆಯ ಕೈವಾಡದ ...: ಈ ಭರತ ಖಂಡವನ್ನು ತಮ್ಮ ಕಪಿಮುಷ್ಟಿಯ ...ಸಿದ್ದ ವೈದಿಕಶಾಹಿ ಶಕ್ತಿಗಳೇ ಇಂದಿನ ನಾಟಕೀಯ ...ಳ ಹಿಂದಿನ ಸೂತ್ರಧಾರರು. ಅಂದರೆ ಆರೆಸ್ಸೆಸ್ ...ವಿಷ್ಪಕೂಟವೇ ಪಿಎಎಎಸ್ ಎಂಬ ಸಂಘಟನೆ ...ರ್ದಿಕ್ ಪಟೇಲ್ ಎಂಬ 'ಯುವ ನಾಯಕ'ನ ...ಳು.

... ಹಿಡನ್ ಅಜೆಂಡಾದ ಬಗ್ಗೆ ವಿಶ್ವ ಹಿಂದೂ ... ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ...ಳಿಕೆ ಗಮನಿಸೋಣ. "ಜಾತಿ ಆಧಾರಿತ ... ರದ್ದಾಗುವಂತಹ ಪರಿಸ್ಥಿತಿ ನಿರ್ಮಾಣವಾಗ ... ವಿಎಚ್‌ಪಿ ಬಯಕೆ, ಇದಕ್ಕಾಗಿ ಮೀಸಲಾತಿಯ ...ನ್ನು ಅಧ್ಯಯನ ಮಾಡಲು ಕೇಂದ್ರ ಸರ್ಕಾರ ...ರ್ಟ್‌ನ ಉಸ್ತುವಾರಿಯಲ್ಲಿ ಆಯೋಗ ... ಆರ್ಥಿಕವಾಗಿ ಹಿಂದುಳಿದವರಿಗೆ ಮಾತ್ರ ... ಸೌಲಭ್ಯ ಇರಬೇಕು" ಎಂಬ ತಮ್ಮ ... ಬಹಿರಂಗಪಡಿಸಿದ್ದಾರೆ.

... ಉದ್ಯೋಗಗಳೇ ಮಾಯವಾಗುತ್ತಿರುವ ಇಂದಿನ ...ಲ್ಲಿ ಕಾರ್ಪೊರೇಟ್ ಕ್ಷೇತ್ರಕ್ಕೂ ಮೀಸಲಾತಿ ...ಬೇಕೆಂಬ ಬೇಡಿಕೆ ಈಗೀಗ ಹೆಚ್ಚು ಮುನ್ನೆಲೆಗೆ ...ಹೀಗಾಗಿ ಮೀಸಲಾತಿಯ ವಿರುದ್ಧದ ಈ ...ಕಾರ್ಪೊರೇಟ್ ವಲಯ ಕೂಡ ಕೈಜೋಡಿಸಿದೆ ...ಗಳು ಕೇಳಿಬಂದಿವೆ. ಈ ಪಡ್ಡೆ ಹುಡುಗನಿಗೆ ...ಲ್ಲಿ ಸಿಕ್ಕ ಪ್ರಚಾರ ಗಮನಿಸಿದರೆ ಈ ಮಾತನ್ನು ...ಗದು.

...ದ್ಯಮಾನ ಗುಜರಾತ್ ಹಾಗೂ ಪಟೇಲ್ ...ಮೀರಿದ ಉದ್ದೇಶಗಳನ್ನು ಹೊಂದಿತ್ತು ...ಕೊಂಡದ್ದು ಪ್ರಬಲ ಪುರಾವೆ ಎಂದರೆ



ಅಂದಿನ ಹಾರ್ದಿಕ್ ಪಟೇಲ್‌ನ ಭಾಷಣ. ಆ ಮೈದಾನದಲ್ಲಿ ನೆರೆದಿದ್ದವರೆಲ್ಲಾ ಗುಜರಾತಿಗಳೇ ಆಗಿದ್ದರು; ಕಾರ್ಯಕ್ರಮ ನಡೆದದ್ದೂ ಕೂಡ ರಾಜಧಾನಿ ಅಹಮದಾಬಾದ್‌ನಲ್ಲೇ. ಆದರೂ ಹಾರ್ದಿಕ್ ಒಂದು ಗಂಟೆಕಾಲ ಹಿಂದಿಯಲ್ಲೇ ಭಾಷಣ ಮಾಡಿದ. ಇದು ಬಹಳಷ್ಟು ಮಂದಿಯ ಹುಬ್ಬೇರಿಸುವಂತೆ ಮಾಡಿತ್ತು. ಹಿಂದಿ ಭಾಷಣವನ್ನು ದೇಶಾದ್ಯಂತ ಪ್ರಚಾರ ಮಾಡಿ ಇದೇ ರೀತಿ ಮೀಸಲಾತಿ ಹೋರಾಟದಲ್ಲಿರುವ ಜಾಟ್, ಗುಜ್ಜರ್ ಮುಂತಾದ ಜಾತಿಗಳನ್ನು ಒಟ್ಟುಗೂಡಿಸುವುದು ಇದರ ಹಿಂದಿನ ಸದ್ಯದ ಹಿಡನ್ ಅಜೆಂಡಾ ಆಗಿದ್ದರೆ, ತಮ್ಮ ದೀರ್ಘಕಾಲೀನ ಷಡ್ಯಂತ್ರಕ್ಕೆ ದೇಶಾದ್ಯಂತ ಬೆಂಬಲ ಪಡೆದುಕೊಳ್ಳುವುದು ಮತ್ತೊಂದು ಅಜೆಂಡಾ ಆಗಿತ್ತು.

ಮೋದಿಯ ಬಾಯಲ್ಲಿ ಬಿಸಿ ತುಪ್ಪ

ಇದೆಲ್ಲವೂ ಸತ್ಯ. ಆದರೆ ಈ ತಂತ್ರ ಮೋದಿಯ ಇಂದಿನ ಗುಜರಾತ್ ರಾಜಕಾರಣ ಹಾಗೂ ಅಖಿಲ ಭಾರತ ರಾಜಕಾರಣದ ಮೇಲೆ ಎಂಥ ಪರಿಣಾಮ ಬೀರುತ್ತಿದೆ? ಸ್ವಲ್ಪ ಆಳಕ್ಕಿಳಿದು ನೋಡಿದರೆ ಈ ವಿದ್ಯಮಾನ ಸದ್ಯಕ್ಕಂತೂ ಮೋದಿ ಹಾಗೂ ಅಮಿತ್ ಶಾ ಜೋಡಿಗೆ ಲಾಭಕರವಾಗಿ ಕಾಣುತ್ತಿಲ್ಲ. ಮೊತ್ತಮೊದಲನೆಯದಾಗಿ ಇದು ಮೋದಿಯ 'ಗುಜರಾತ್ ಮಾದರಿ', 'ಉತ್ತಮ ಆಡಳಿತ' ಎಂಬಿತ್ಯಾದಿ ಪ್ರಚಾರಗಳಿಗೆ ಭಾರೀ ಹೊಡೆತ ಕೊಟ್ಟಿದೆ. ಅಭಿವೃದ್ಧಿಯಲ್ಲಿ ಏನೇನೋ ಸಾಧಿಸಿಬಿಟ್ಟಿದೆಯೆಂಬ ಗುಜರಾತ್‌ನಲ್ಲಿ ಶಿಕ್ಷಣ ಹಾಗೂ ಉದ್ಯೋಗದ ಸಮಸ್ಯೆಯ ತೀವ್ರತೆಯನ್ನು ಈ ವಿದ್ಯಮಾನ ಮುನ್ನೆಲೆಗೆ ತಂದಿದೆ. ಅನೇಕ ಟಿವಿ ಚಾನೆಲ್‌ಗಳ ಪ್ಯಾನೆಲ್ ಚರ್ಚೆಗಳಲ್ಲಿ ಗುಜರಾತ್ ಮಾಡೆಲ್ ವಿಫಲವಾಗಿದೆಯೆ ಎಂಬ ಪ್ರಶ್ನೆಯ ಸುತ್ತ ಚರ್ಚೆಗಳು ಗರಿಕೆ ಹೊಡೆಯುತ್ತಿವೆ.

ನಾವು ಪರಿಗಣಿಸಲೇಬೇಕಾದ ಮತ್ತೊಂದು ಅಂಶವೆಂದರೆ ಈ ಹಾರ್ದಿಕ್ ಪಟೇಲನ ನಾಟಕೀಯ ವಿದ್ಯಮಾನ ಸ್ಫೋಟಗೊಂಡ ಕಾಲಾವಧಿ. ಬಿಹಾರ ಚುನಾವಣೆಯ ಹೊಸ್ತಿಲಿನಲ್ಲಿ ಮೋದಿ-ಶಾ ಕೂಟ ನಿಂತಿದೆ. ಇಂಥ ಅವೇಳೆಯಲ್ಲಿ ಮೋದಿ ಮಾದರಿ ಆಡಳಿತದ ಬಗ್ಗೆ ಭಾರೀ ಪ್ರಮಾಣದ ಅಪಸ್ವರ ಗುಜರಾತ್‌ನಿಂದಲೇ ಕೇಳಿಬಂದಿದೆ. ನಿತೀಶ್ ಹಾಗೂ ಲಾಲೂಗಳು ಪಟೇಲ್ ವಿದ್ಯಮಾನವನ್ನು ಟೀಕಿಸುತ್ತಾ ಮೋದಿ ಮಾದರಿಯ ಆಡಳಿತದ ವೈಫಲ್ಯವನ್ನು ಚುನಾವಣಾ ವಿಚಾರವಾಗಿಸಿಕೊಂಡಿದ್ದಾರೆ. ಹಿಂದುಳಿದ ಮತ್ತು ದಲಿತ ಜಾತಿಗಳ ಪ್ರಾಬಲ್ಯ ಹೊಂದಿರುವ ಬಿಹಾರದಲ್ಲಿ ಈ ವಿಚಾರ ತನ್ನದೇ ಪರಿಣಾಮವನ್ನು ಹೊಂದಿರುತ್ತದೆ.

ಮತ್ತೊಂದೆಡೆ, ತಮಗೆ ಮೀಸಲಾತಿ ಕೊಡಲು ಸಾಧ್ಯವಿಲ್ಲವಾದರೆ ಜಾತಿ ಆಧಾರಿತ ಮೀಸಲಾತಿಯನ್ನೇ ರದ್ದುಮಾಡಬೇಕೆಂಬ ಮಾತುಗಳನ್ನು ಪಟೇಲ್ ನಾಯಕರು ಹೇಳುತ್ತಿರುವುದರಿಂದ ಗುಜರಾತ್‌ನ ದಲಿತ ಹಾಗೂ ಹಿಂದುಳಿದ ಜಾತಿಗಳನ್ನು ಇದು ಕೆರಳಿಸಿದೆ. ಈ ವಿದ್ಯಮಾನ ಗುಜರಾತ್‌ನ ಒಬಿಸಿ ಜಾತಿಗಳ ನಾಯಕರು ಮತ್ತೊಮ್ಮೆ ಒಟ್ಟಾಗುವಂತೆ ಮಾಡಿದೆ. ಈಗಾಗಲೇ ಭಾರೀ ಪ್ರತಿಭಟನಾ ಪ್ರದರ್ಶನಗಳನ್ನು ಮಾಡಿರುವ ಹಿಂದುಳಿದ ಜಾತಿಗಳು ಒಬಿಸಿ ಮೀಸಲಾತಿ ಕೋಟಾದೊಳಕ್ಕೆ ಪಟೇಲ್ ಜಾತಿಯನ್ನು ತುರುಕಲು ಪ್ರಯತ್ನಿಸಿದರೆ ಅದರ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಈಗಾಗಲೇ ಎಚ್ಚರಿಕೆ ಕೊಟ್ಟಿದ್ದಾರೆ.

ಧರ್ಮದ ಆಧಾರದಲ್ಲಿ ಜನರನ್ನು ಒಡೆದು ರಾಜಕೀಯ ಮಾಡುತ್ತಿರುವ ಮೋದಿ ಆಡಳಿತದಲ್ಲಿ ಜಾತಿ ಆಧಾರಿತವಾಗಿ ಜನರು ಒಡೆದುಹೋಗುವುದು ಮೋದಿಯ ಪಾಲಿಗೆ ಅನಪೇಕ್ಷಿತ ಬೆಳವಣಿಗೆ.

ಇಂಥ ಪ್ರತಿಕೂಲ ವಿದ್ಯಮಾನಗಳನ್ನು ತಡೆಗಟ್ಟಲು ಗುಜರಾತ್ ಆಡಳಿತಾರೂಢರು ತಮ್ಮದೇ ರೀತಿಯಲ್ಲಿ ವಿಫಲ ಪ್ರಯತ್ನ ಹಾಕಿದರು.

ಪಟೇಲ್ ರ್‍ಯಾಲಿಯ ತಯಾರಿಯಲ್ಲಿದ್ದ ಅವಧಿಯಲ್ಲೇ ಒಂದು ಆಡಿಯೋ ಟೇಪ್ ವಾಟ್ಸಪ್, ಫೇಸ್‌ಬುಕ್‌ಗಳಲ್ಲಿ ವ್ಯಾಪಕವಾಗಿ ಸರ್ಕುಲೇಟ್ ಆಯಿತು. ಪಟೇಲ್ ಜಾತಿಯವರೇ ಆದ ಆನಂದಿಬೆನ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಯುತ್ತಿದೆಯೆಂದೂ, ಪಟೇಲ್ ಸಮುದಾಯದವರು ಇದನ್ನು ಅರ್ಥ ಮಾಡಿಕೊಂಡು, ಹಾರ್ದಿಕ್ ಪಟೇಲ್‌ನಿಂದ ದೂರ ಉಳಿಯಬೇಕೆಂದೂ ಮನವಿ ಮಾಡಲಾಗಿತ್ತು, ಬಿಹಾರದ ನಿತೀಶ್ ಕುಮಾರ್, ದೆಹಲಿಯ ಕೇಜ್ರಿವಾಲ್ ಮುಂತಾದವರು ಹಾರ್ದಿಕ್ ಪಟೇಲ್‌ನ ಹಿಂದಿದ್ದಾರೆ ಎಂಬ ಊಹಾಪೋಹಗಳನ್ನು ಹರಿಯಬಿಡಲಾಯಿತು. ಹಾರ್ದಿಕ್‌ನನ್ನು ಹೋಲುವ ಹುಡುಗನೊಬ್ಬ ಕೇಜ್ರಿವಾಲ್ ಜೊತೆಗಿರುವ ಫೋಟೋ ಎಲ್ಲೆಡೆ ಹರಿದಾಡಿತು. ಇತ್ತೀಚೆಗೆ ಹಾರ್ದಿಕ್‌ನನ್ನು ಹೋಲುವ ವ್ಯಕ್ತಿಯುಳ್ಳ ಸೆಕ್ಸ್ ವಿಡಿಯೋ ಕೂಡ ಬಿಡುಗಡೆಯಾಗಿದೆ. ಕಾಂಗ್ರೆಸ್ ಎಂಎಲ್‌ಎ ತೇಜಶ್ರೀ ಪಟೇಲ್ ಜೊತೆಗೆ ಹಾರ್ದಿಕ್ ಇರುವ ಫೋಟೋ ಹಾಗೂ ವಿಡಿಯೋ ಕ್ಲಿಪ್ಪಿಂಗ್‌ಗಳು ಸರ್ಕುಲೇಟ್ ಆದವು. ಅದಕ್ಕೆ ಪ್ರತಿಯಾಗಿ ಹಾರ್ದಿಕ್ ಗುಂಪು ಬಿಜೆಪಿ ನಾಯಕರ ಜೊತೆಗಿದ್ದ ಹಲವಾರು ಫೋಟೋಗಳನ್ನು ಬಿಡುಗಡೆ ಮಾಡಿ ತಾವು ಯಾವುದೇ ಪಕ್ಷದ ಪರವಲ್ಲ, ನಮ್ಮದು ತಟಸ್ಥ ನೀತಿ ಎಂಬ ವಿವರಣೆ ನೀಡಿದ್ದಾರೆ.

ಗುಜರಾತ್ ಸರ್ಕಾರ ಮತ್ತು ಪೊಲೀಸರು ವ್ಯವಹರಿಸಿದ ರೀತಿಯನ್ನು ಗಮನಿಸಿದರೆ, ಈ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಯಾವುದೇ ಪೂರ್ವ ತಯಾರಿಯಿಲ್ಲದೆ ಅಡ್ಡಾದಿಡ್ಡಿ ವರ್ತಿಸಿ, ಹಲವು ಎಡವಟ್ಟುಗಳನ್ನು ಮಾಡಿರುವುದು ಕಂಡುಬರುತ್ತದೆ. ಪರಿಣಾಮವಾಗಿ 8 ಜೀವಗಳು ಬಲಿಯಾಗಿವೆ. ನೂರಾರು ಜನ ಗಾಯಗೊಂಡಿದ್ದಾರೆ. ಈ ಬೆಳವಣಿಗೆಗಳಿಂದ ಸರ್ಕಾರದ ವಿರುದ್ಧದ ಪಟೇಲರ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿದೆ. ಬಂಧಿತರನ್ನು ಬಿಡಿಸಿಕೊಳ್ಳಲು ಪಟೇಲ್ ಮಹಿಳೆಯರು ವಿವಿಧ ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಿದ ವರದಿಗಳು ಬಂದಿವೆ.

ಈ ಎಲ್ಲ ವಿದ್ಯಮಾನಗಳನ್ನು ಗಮನಿಸಿದರೆ ಈ ಪಟೇಲ್ ಜಾತಿಯ ಹೋರಾಟದಲ್ಲಿ ಮೋದಿ-ಶಾ ಕೂಟದ ಪಾಲ್ಗೊಳ್ಳುವಿಕೆಯಿದೆ ಎಂದು ಹೇಳಲಾಗದು. ಹಾರ್ದಿಕ್ ಪಟೇಲ್‌ನ

▶▶ 15



ಮುರಿದ ಮನೆ ಹರಿದ ಮನ

ನಟ ದರ್ಶನ್ ತನ್ನ ಪತ್ನಿಯನ್ನು ನಡೆಸಿಕೊಂಡ ರೀತಿಗೂ ಸುದೀಪ್ ವರ್ತನೆಗೂ ಎಷ್ಟೊಂದು ವ್ಯತ್ಯಾಸ. ಪತ್ನಿಯನ್ನು ಅರೆಜೀವ ಹೊಡೆದು ಜೈಲುಪಾಲಾದ ದರ್ಶನ್ ಮಾತ್ರವೇ ಅಲ್ಲ, ತೀರ ಇತ್ತೀಚೆಗೆ ದುನಿಯಾ ವಿಜಿ ತನ್ನ ಪತ್ನಿ ಜೊತೆ ಮಾಡಿಕೊಂಡ ಬೀದಿರಂಪವನ್ನೂ ಜನ ಮರೆತಿಲ್ಲ, ಶೃತಿ-ಮಹೇಂದರ್ ಮನೆ ಮುರಿದ ಪ್ರಹಸನ, ಓಂ ಪ್ರಕಾಶ್‌ರಾವ್-ರೇಖಾದಾಸ್ ಕಚ್ಚಾಟ- ಹೀಗೆ ಸಿನಿಮಾ ಮಂದಿಯ ಸಾಂಸಾರಿಕ ತಾಪತ್ರಯಗಳ ಕುರಿತಂತೆ ಜನ ಏನೆಲ್ಲಾ ರಂಪ ರಾದ್ಧಾಂತ ನೋಡಿಲ್ಲ. ಆದರೆ ಸುದೀಪ್-ಪ್ರಿಯಾ ವಿಚ್ಛೇದನದಷ್ಟು ಘನತೆಯ ಡೈವೋರ್ಸ್ ಗಾಂಧಿನಗರದ ಮಟ್ಟಿಗೆ ಮತ್ತೊಂದುಂಟೆ?

ಒಂದರ ಮುಕ್ತಾಯವೆಂದರೆ ಹೊಸದೊಂದರ ಪ್ರಾರಂಭವಿದ್ದಂತೆ. ಯಾವುದರ ಆರಂಭಕ್ಕೋ ಇನ್ನಾವುದರ ಅಂತ್ಯಕ್ಕೋ ಗೊತ್ತಿಲ್ಲ; ಕಿಚ್ಚ ಸುದೀಪ್ ತನ್ನ ಹದಿನಾಲ್ಕು ವರ್ಷದ ದಾಂಪತ್ಯಕ್ಕೊಂದು ವಿದಾಯ ಹೇಳ ಹೊರಟಿದ್ದಾರೆ. ಒಲ್ಲದ ಮನಸ್ಸು. ಸಲ್ಲದ ಸಂದಿಗ್ಧ. ವಾಸಿಯೇ ಆಗದ ಕಾಯಿಲೆಗೆ ಗೊತ್ತಿದ್ದೂ ಮದ್ದೆಂಬಂತೆ ಜಗ್ಗಾಡಿ ಉಜ್ಜಾಡಿ ಕೊನೆಗದು ಫ್ಯಾಮಿಲಿ ಕೋರ್ಟಿಗೆ ಬಂದು ನಿಂತಿದೆ. ಹೆಚ್ಚೆಂದರೆ ಇನ್ನು ಎರಡೋ ಮೂರೋ ಅಥವಾ ಆರು ಹಿಯರಿಂಗ್‌ಗಳಷ್ಟೇ ಬಾಕಿ. ಏನೇ ಕೊಸರಾಡಿ ಎಳೆದಾಡಿದರೂ ಆರು ತಿಂಗಳ ಮೇಲಾಗುವುದಿಲ್ಲ, ಅದು ಮುಗಿಯಿತೆಂದರೆ ನೀ ಯಾರೋ ನಾ ಯಾರೋ!

ಕಿಚ್ಚ ಹುಚ್ಚ ಮಚ್ಚ ಬಚ್ಚಾ ಯಾರೇನೇ ಕರೆದರೂ ಸುದೀಪ್ ಬದುಕಿನ ವಾಸ್ತವಕ್ಕೂ ಸಿನಿಮಾ ತೆರೆ ಮೇಲಿನ ಫ್ಯಾಂಟಸಿಗೂ ಇರುವ ವ್ಯತ್ಯಾಸವಿದು. ಕತೆ ಹೀಗೆಯೇ ಸಾಗಬೇಕೆಂದು ಸಿನಿಮಾದ ಸ್ಕ್ರಿಪ್ಟ್ ಬದಲಾಯಿಸಬಹುದೇನೊ. ಹಾಗಂತ ನಿಜಬದುಕಿನ ಕತೆ ಹೇಳಿ ಬರೆಸುವಂಥದ್ದಲ್ಲವಲ್ಲ, ಬರುವ ಪಾತ್ರಗಳು, ಏರ್ಪಡುವ ಸನ್ನಿವೇಶ, ಎದುರಾಗುವ ವಿಷಯ ಇತ್ಯಾದಿಗಳೆಲ್ಲದರ ತಾರ್ಕಿಕ ಅಂತ್ಯಕ್ಕೆ ಸುದೀಪ್ ದಾಂಪತ್ಯ ಬಂದು ನಿಂತಾಗಿದೆ. ಒಡೆದ ಕನ್ನಡಿಗೂ ಮುರಿದ ಮನಸ್ಸಿಗೂ ಹೊಲಿಗೆ ಹಾಕಲಾಗದು. ಆದರೆ ವಿದಾಯದ ವಿಧಾನವಿದೆಯಲ್ಲ ಅದೇ ವ್ಯಕ್ತಿತ್ವವೊಂದರ ಘನತೆಯನ್ನು ನಿರ್ಧರಿಸುತ್ತದೆ.

ಸುದೀಪ್-ಪ್ರಿಯಾ ವಿಚ್ಛೇದನ ಬಹುಶಃ ಗಾಂಧಿನಗರದ ಅತ್ಯಂತ ಘನತೆಯ, ಗೌರವದ, ಗಾಂಭೀರ್ಯದ ಮತ್ತು ಅತೀ ದುಬಾರಿಯ ವಿಚ್ಛೇದನವೆಂಬ ದಾಖಲೆಯಲ್ಲೇ ಉಳಿದುಬಿಡಬಹುದೇನೊ!

ನಟ ದರ್ಶನ್ ತನ್ನ ಪತ್ನಿಯನ್ನು ನಡೆಸಿಕೊಂಡ ರೀತಿಗೂ ಸುದೀಪ್ ವರ್ತನೆಗೂ ಎಷ್ಟೊಂದು ವ್ಯತ್ಯಾಸ. ಪತ್ನಿಯನ್ನು ಅರೆಜೀವ ಹೊಡೆದು ಜೈಲುಪಾಲಾದ ದರ್ಶನ್ ಮಾತ್ರವೇ ಅಲ್ಲ, ತೀರ ಇತ್ತೀಚೆಗೆ ದುನಿಯಾ ವಿಜಿ ತನ್ನ ಪತ್ನಿ ಜೊತೆ ಮಾಡಿಕೊಂಡ ಬೀದಿರಂಪವನ್ನೂ ಜನ ಮರೆತಿಲ್ಲ, ಶೃತಿ-ಮಹೇಂದರ್ ಮನೆ ಮುರಿದ ಪ್ರಹಸನ, ಓಂ ಪ್ರಕಾಶ್‌ರಾವ್-ರೇಖಾದಾಸ್ ಕಚ್ಚಾಟ- ಹೀಗೆ ಸಿನಿಮಾ ಮಂದಿಯ ಸಾಂಸಾರಿಕ ತಾಪತ್ರಯಗಳ ಕುರಿತಂತೆ ಜನ ಏನೆಲ್ಲಾ ರಂಪ ರಾದ್ಧಾಂತ ನೋಡಿಲ್ಲ, ಆದರೆ ಸುದೀಪ್-ಪ್ರಿಯಾ ವಿಚ್ಛೇದನದಷ್ಟು ಘನತೆಯ ಡೈವೋರ್ಸ್ ಗಾಂಧಿನಗರದ ಮಟ್ಟಿಗೆ ಮತ್ತೊಂದುಂಟೆ?

ಅದು ಒಂದಲ್ಲ ಎರಡಲ್ಲ ಹದಿನಾಲ್ಕು ವರ್ಷಗಳ ದಾಂಪತ್ಯ. ಯಾರೋ ಬಿಗ್‌ಬಾಸ್ ರಿಯಾಲಿಟಿ ಶೋ ನಟಿಯೊಬ್ಬಳಿಗೆ ಸುದೀಪ್ ವಜ್ರದ ನೆಕ್ಲೆಸ್ ಕೊಟ್ಟರಂತೆ, ಇನ್ನಾರೋ ತಮಿಳು ನಟಿಯನ್ನು ಹಾಕಿಕೊಳ್ಳುವಂತೆ ನಿರ್ಮಾಪಕರಿಗೆ ತಾಕೀತು ಮಾಡಿದರಂತೆ ಇತ್ಯಾದಿ ಸುದೀಪ್ ಕುರಿತಂತೆ ಅಪರೂಪಕ್ಕೊಮ್ಮೆ ಯಾವುದೋ ಸಂದಿಯಿಂದ ಇಂಥ ಸಣ್ಣಪುಟ್ಟ ಗಾಸಿಪ್‌ಗಳು ಕೇಳಿಬರುತ್ತಿದ್ದದ್ದು ಬಿಟ್ಟರೆ ಗಾಂಧಿನಗರದ ಇತರೇ ನಟರ ಹಾಗೆ ಪಜೀತಿಗೆ ಬಿದ್ದ ಪ್ರಸಂಗಗಳಿರಲಿಲ್ಲ, ಸುದೀಪ್ ಮುಂಗೋಪದ ಬಗ್ಗೆ ಜನ ಕೇಳಿದ್ದುಂಟು. ಸುದೀಪ್ ಜಿದ್ದಾಜಿದ್ದಿಯನ್ನೂ ಸಿನಿಮಾ ಮಂದಿ ಕಂಡಿದ್ದುಂಟು. ಕೆಲವರಿಗದು ದುರಹಂಕಾರದಂತೆ ಕಂಡಿರಬಹುದು. ಕೆಲವರು ದರ್ಪವೆಂದು ಮೂಗು ಮುರಿದಿರಲೂಬಹುದು.



ಆದರೆ ಸುದೀಪ್ ಯಾವತ್ತಿಗೂ ರಸಿಕ ಚಪಲಕ್ಕೆ ಬಿದ್ದವರಲ್ಲ. ಏಕೆಂದರೆ ಹುಚ್ಚ ಹಿಟ್ಟಾಗಿ ಗಾಂಧಿನಗರದ ಮಟ್ಟಿಗೆ ಸುದೀಪ್ ನೆಲೆ ಕಂಡುಕೊಳ್ಳುತ್ತಿದ್ದಂತೆ ಆತನ ಬಾಳಿಗೆ ಎಂಟ್ರಿ ಕೊಟ್ಟಿದ್ದು ಪ್ರಿಯಾ. ಪ್ರಿಯಾ ರಾಧಾಕೃಷ್ಣನ್ ಆಕೆಯ ಪೂರ್ತಿ ಹೆಸರು. ಸುದೀಪ್ ಅಕ್ಕ ಸುನೀತಾ ಆ ಹೊತ್ತಿಗೆ ಸಿಟಿ ಬ್ಯಾಂಕ್ ಉದ್ಯೋಗಿ. ಪ್ರಿಯಾ ಸುದೀಪ್ ಅಕ್ಕನ ಸಹೋದ್ಯೋಗಿ. ನೆಟ್ಟಗಿನ್ನು ನಟನೆಯೇ ರೂಢಿಯಾಗದೆ ಗಾಂಧಿನಗರದಲ್ಲಿ ಸುದೀಪ್ ಇನ್ನೂ ಕಣ್ಣು ಬಿಡುತ್ತಿದ್ದ ಕಾಲಕ್ಕೆ ಪ್ರಿಯಾ ಜೆಟ್ ಏರ್‌ವೇಸ್‌ನಲ್ಲಿ ಗಗನಸಖಿಯಾಗಿದ್ದಳು. ಸಿಟಿ ಬ್ಯಾಂಕಿಗೆ ಅಕ್ಕ ಕೆಲಸಕ್ಕೆ ಸೇರಿದ್ದೇ ಪ್ರಿಯಾ ಅಕ್ಕ ಜೊತೆ ಸುದೀಪ್ ಮನೆಗೆ ಬರಲಾರಂಭಿಸಿದಳು.

ಆ ಹೊತ್ತಿಗೆ ಸುದೀಪ್ ತಾನು ನಟನಾಗಬೇಕೋ ಕ್ರಿಕೆಟ್ ಆಟಗಾರನಾಗಬೇಕೋ ಅಥವಾ ಕುಕ್ ವೃತ್ತಿಯನ್ನು ಆಯ್ದುಕೊಳ್ಳಬೇಕೋ ಎಂದು ಇನ್ನೂ ನಿರ್ಧರಿಸದಿದ್ದ ಕಾಲ. ಹಾಗೆ ನೋಡಿದರೆ ಪ್ರಿಯಾ ಸುದೀಪ್‌ಗಿಂತಲೂ ವಯಸ್ಸಿನಲ್ಲಿ ಎರಡು ವರ್ಷ ದೊಡ್ಡವಳು. ಅಕ್ಕನ ಜೊತೆ ಆಗಾಗ ಮನೆಗೆ ಬರುತ್ತಿದ್ದ ಪ್ರಿಯಾ ಕಂಡರೆ ಸುದೀಪ್‌ಗೆ ಅದೆಂಥದೋ ಹುಚ್ಚು, ಕೇರಳ ಮೂಲದ ನಾಯರ್ ಕುಟುಂಬದ ಪ್ರಿಯಾಳದ್ದು ಸಂಪ್ರದಾಯಸ್ಥ ಮಲೆಯಾಳಿ ಪ್ರವೃತ್ತಿ. ಸುದೀಪ್ ಒತ್ತಾಯಕ್ಕೆ ಬಿದ್ದು ತಂದೆ ಸರೋವರ್ ಸಂಜೀವ್ ಪ್ರಿಯಾ ತಂದೆ ರಾಧಾಕೃಷ್ಣನ್ ಜೊತೆ ಮದುವೆಯ ಪ್ರಸ್ತಾಪವಿಟ್ಟರಾದರೂ ಸುದೀಪ್ ತಾಯಿ ಸರೋಜರದ್ದು ಕೊಂಚ ಬಿಗುಮಾನ.

ಮಗಳ ಹೆಸರು ಸಾನ್ವಿ

ಅಷ್ಟಕ್ಕೂ ಮದುವೆಯ ಪ್ರಪೋಸ್ ಮಾಡಿದ್ದೇ ಸುದೀಪ್. ಮದುವೆಗೂ ಮುನ್ನ ಪ್ರಿಯಾ ತಂದೆ ರಾಧಾಕೃಷ್ಣನ್ ಸಾಕಷ್ಟು ಚೌಕಾಸಿಗಿಳಿದಿದ್ದಕ್ಕೂ ಕಾರಣವಿತ್ತು, ಅದು ನಡೆನುಡಿ ವ್ಯತ್ಯಾಸ. ಸಂಪ್ರದಾಯಸ್ಥ ಮಲೆಯಾಳಿ ಕುಟುಂಬದ ಪ್ರಿಯಾ ಅಪ್ಪಟ ಬೆಂಗಳೂರಿನ ವ್ಯವಹಾರಸ್ಥ ಕುಟುಂಬವೊಂದಕ್ಕೆ ಸೊಸೆಯಾಗುವುದರ ಸಮಸ್ಯೆ ಸಹಜವಾಗೇ ತಂದೆಯನ್ನು ಕಾಡಿತ್ತು. 2001ರ ಜುಲೈನಲ್ಲಿ ಸುದೀಪ್ ಪ್ರಿಯಾ ಮದುವೆ ಅದ್ದೂರಿಯಾಗೇ ನಡೆಯಿತು. ಮುಖ್ಯಮಂತ್ರಿಯಾಗಿದ್ದ ಜೆ.ಹೆಚ್. ಪಟೇಲ್, ರೆಬೆಲ್ ಸ್ಟಾರ್ ಅಂಬರೀಷ್, ರಾಜ್ ಫ್ಯಾಮಿಲಿ ಇತ್ಯಾದಿ ಗಾಂಧಿನಗರದ ಹಿರಿಕಿರಿ ನಟರೆಲ್ಲರೂ ಮದುವೆಗೆ ಬಂದು ಆಶೀರ್ವದಿಸಿದ್ದರು.

ಪ್ರಿಯಾ ನಟಿಯಲ್ಲ, ಗ್ಲಾಮರ್ ಹಿನ್ನೆಲೆಯೂ ಇಲ್ಲ, ಹೀಗಾಗಿ ಈ ಮದುವೆಗೆ ಯಾವುದೇ ಸಮಸ್ಯೆಯಿಲ್ಲ [...] ಗಾಂಧಿನಗರ ಲೆಕ್ಕ ಹಾಕಿತ್ತು, ಜೆ.ಪಿ.ನಗರದ ಸು[...] ಮನೆಗೆ ಪ್ರಿಯಾ ಕಾಲಿಟ್ಟ ನಾಲ್ಕನೇ ವರ್ಷಕ್ಕೆ [...] ಸಾನ್ವಿ ಜನಿಸಿದಳು. ಅದೂ ಸೌತ್ ಎಂಡ್ ಸ[...] ಸಾಧಾರಣ ಭಾರತಿ ನರ್ಸಿಂಗ್ ಹೋಮಿನಲ್ಲಿ, [...] ಮಗಳೇನೋ ತಂದೆ ಸುದೀಪ್‌ಗೆ ಅಚ್ಚುಮೆಚ್ಚಾದಳ[...] ಬೇರೆಯದೇ ಸಮಸ್ಯೆಯೊಂದು ಸದ್ದಿಲ್ಲದೆ ತಲೆ [...] ಹೆರಿಗೆಗೂ ಒಂದು ತಿಂಗಳು ಮುನ್ನ ಪ್ರಿಯಾ ತನ್ನ ತಾ[...] ಮನೆಯಲ್ಲಿದ್ದಳಲ್ಲ; ಅಂಥಾ ಸ್ಥಿತಿಯಲ್ಲಿ ಯಾರೇ ಪತಿ [...] ನಿಂತು ಆರೈಕೆ ಮಾಡಬೇಕಿತ್ತಲ್ಲವೆ?

ಆದರೆ ಸುದೀಪ್ ಬರುತ್ತಿದ್ದದ್ದು ಅಪರೂಪಕ[...] ಅದೂ ಕದ್ದುಮುಚ್ಚಿ. ಹೀಗೇಕೆಂದು ಪತ್ನಿ ಕೇಳಿದರೆ ಸು[...] ತನಗೆ ಈ ಏರಿಯಾಕ್ಕೆ ಬರುವುದೇ ದೊಡ್ಡ ಹಿಂಸೆ, ಅ[...] ಜನ ತನ್ನನ್ನು ಎಲ್ಲಿ ನೋಡಿಬಿಡುತ್ತಾರೋ ಎಂದೇ [...] ಬಾಣಂತಿ ಪತ್ನಿಯನ್ನು ನೋಡಲು ಬರುತ್ತಿಲ್ಲ ಎಂ[...] ಸುದೀಪ್ ನೆಪವಾಗಿತ್ತು, ಏಕೆಂದರೆ ಮದುವೆಯಾದ ನಾ[...] ವರ್ಷಕ್ಕೆ ಸರಿಯಾಗಿ ಸುದೀಪ್ ಬಣ್ಣದ ಬದುಕಿನ ಉ[...] ಶುರುವಾಗಿತ್ತು, ಪುನೀತ್, ದರ್ಶನ್, ಶಿವಣ್ಣ ಉಪ್ಪಿ ಸರಿ[...] ತೂಗುತ್ತಿದ್ದ ಸುದೀಪ್‌ಗೆ ಬಾಲಿವುಡ್, ಟಾಲಿವು[...] ಸಂಪರ್ಕವೇರ್ಪಟ್ಟಿತ್ತು, ತನ್ನ ಇಮೇಜ್ ಮತ್ತು ಜನಪ್ರಿ[...] ತಕ್ಕಂತೆ ಪ್ರತಿಷ್ಠೆಯನ್ನೂ ನಿಭಾಯಿಸಬೇಕಾದ ಹಂಗಿಗೆ [...] ಸುದೀಪ್ ಪಜೀತಿ ಪತ್ನಿಗೆಲ್ಲಿ ಅರ್ಥವಾಗಲು ಸಾಧ[...]

ಏಕಾಂಗಿಯಾದ ಪತ್ನಿ

ಇದು ಬರುಬರುತ್ತ ಚಿತ್ರವಿಚಿತ್ರ ರೂಪ ತಾ[...] ರಂಭಿಸಿತು. ಹಿಂದಿಯಲ್ಲಿ ರಣ್, ರಾಂಗೋಪಾಲ್ [...] ತೆಲುಗಿನಲ್ಲಿ ನಿರ್ಮಿಸಿದ ರಕ್ತಚರಿತ್ರ ಬಿಡುಗಡೆಯಾಗು[...] ಸುದೀಪ್ ಇಮೇಜ್‌ಗೆ ಬೇರೆಯದೇ ರಂಗೇ[...] ಬಿಡುವಿಲ್ಲದ ಶೂಟಿಂಗ್. ಸಾಲದ್ದಕ್ಕೆ ಸೆಲೆಬ್ರಿಟಿ [...] ಕೆಪಿಎಲ್, ರಾಜ್ ಕಪ್, ಬಿಗ್‌ಬಾಸ್‌ಗಳ [...] ವಾರಕ್ಕೊಮ್ಮೆ ಮನೆಗೆ ಬಂದರೆ ಹೆಚ್ಚು, ಬರು[...] ಪ್ರಿಯಾ ಏಕಾಂಗಿಯಾದಳು. ಸಾಲದ್ದಕ್ಕೆ ಸುದೀಪ್ ಅ[...] ಸೂಕ್ಷ್ಮ ವ್ಯಕ್ತಿತ್ವ ಮತ್ತು ವಿಚಿತ್ರ ಶಿಸ್ತು ಬೇರೆ. [...] ಬಳಸುವ ಟಾಯ್ಲೆಟ್ಟನ್ನು ಬೇರೆ ಯಾರೂ ಬಳಸಕೂ[...] ಬೇರೆ ಯಾರಾದರೂ ತನ್ನ ಟಾಯ್ಲೆಟ್ ಬಳಸುತ್ತಿದ್ದಾ[...] ಗೊತ್ತಾದರೆ ಸುದೀಪ್ ಮೂಡಿಗೆ ಬರಲು ಮೂ[...] ದಿನಗಳೇ ಬೇಕು.

ಇದೆಲ್ಲವನ್ನೂ ಪ್ರಿಯಾ ಹೇಗೋ ಸಹಿಸಿಕೊ[...]ದ್ದಳಾದರೂ ಸುದೀಪ್ ತಾಯಿ ಸರೋಜ ಸಂಜೀ[...] ಜೊತೆ ಹೊಂದಾಣಿಕೆ ಮಾತ್ರ ಸಾಧ್ಯವಾಗಲೇ ಇಲ್ಲ, ಏ[...] ಸುದೀಪ್ ತಾಯಿಯದ್ದು ಆ ಕಾಲದಿಂದಲೂ [...] ವ್ಯಕ್ತಿತ್ವ. ತನ್ನ ಮಾತಿಗೆ ಯಾರೂ ಎದುರಾಡುವ[...] ಇತ್ತ ಅಸಾಧ್ಯ ಏಕಾಂತ ಮತ್ತೊಂದೆಡೆ ಅತ್ತೆಯ ಬಿಗು[...]

ಮಗಳು ಬಂದ ಖುಷಿಯಲ್ಲಿ ಮೊದಮೊ[...] ಮನೆಯತ್ತ ಆಸಕ್ತಿ ವಹಿಸಿದ ಸುದೀಪ್‌ಗೆ ತೆಲುಗಿನ [...] ಚಿತ್ರದ ಅವಕಾಶ ಕೂಡಿಬಂದಿದ್ದೇ ಬೇರೆ[...] ತಾಪತ್ರಯಗಳು ಶುರುವಾದವು. ನಿರ್ದೇಶಕ ರಾಜ[...] ಮೇಲೆ ಬಿದ್ದು ಸುದೀಪ್ ಕಾಲ್‌ಶೀಟ್ ಪಡೆದು [...] ಪ್ರಮೋಷನ್‌ಗೆಂದು ತಮಿಳುನಾಡು, ಕೇ[...] ಮುಂಬಯಿಗಳಿಗೆ ಕರೆದೊಯ್ಯುತ್ತಿದ್ದದ್ದು ಬಿಡುವಿಲ್ಲದ[...] ಹೋಯಿತು. ಇದೇ ಹೊತ್ತಿಗೆ ಬಿಗ್‌ಬಾಸ್ ರಿಯಾ[...] ಶೋ ಬೇರೆ. ಮಗಳೆಡೆಗೆ ವಿಪರೀತ ಆಸಕ್ತಿ ವ[...] ಸುದೀಪ್ ಬರುಬರುತ್ತ ಪ್ರಿಯಾಳೆಡೆಗೆ ಕಾಳಜಿ[...] ಕುಂದಿಸಿರಬೇಕು. ಪರಿಸ್ಥಿತಿಯನ್ನು ನಿಭಾಯಿಸುವಂಥ [...] ಪತ್ನಿಗಿರಬೇಕಿತ್ತು. ಅಷ್ಟಕ್ಕೂ ತಾನೇಕೆ ಪ್ರತಿಯೊ[...] ತಲೆಕೊಡಬೇಕೆಂಬ ಸ್ವಾರ್ಥವೂ ಇದ್ದೀತೇನೊ.

ಐದು ವರ್ಷದ ಹಿಂದೆ ಕಸ್ತೂರಿ ಟೀವಿಯ[...] ರಮೇಶ್ ನಡೆಸಿಕೊಟ್ಟ 'ಪ್ರೀತಿಯಿಂದ ರಮೇಶ್' [...] ಶೋಗೆ ಸುದೀಪ್ ಪತ್ನಿ ಪ್ರಿಯಾ ಜೊತೆ ಭಾಗವ[...] ಎಲ್ಲಾ ಬಾಯಿ ಬಿಡಿಸಿದ ನಂತರ ರಮೇಶ್ [...] ಪ್ರಿಯಾಳನ್ನುದ್ದೇಶಿಸಿ ಕೇಳಿದ್ದು ಒಂದೇ ಮಾತು. [...] ಒಂದೇ ಶಬ್ಧದಲ್ಲಿ ಸುದೀಪ್ ಹೇಗೆ ಅಂತ ವಿವರಿಸ್ತಿ[...] ಎಂದು ರಮೇಶ್ ಕೇಳಿದ್ದಕ್ಕೆ ಪ್ರಿಯಾ ಹೇಳಿದ್ದು [...] ಮಾತು.

Difficult...!

ನಾನಿರೋದೇ ಹಂಗೆ

ಅದು ಮೇಲುನೋಟಕ್ಕೆ ಔಪಚಾರಿಕವಾಗಿ ಕ[...] ಪತ್ನಿ ಪ್ರಿಯಾಳ ಮನದಲ್ಲೇನಿದೆ ಎಂಬುದನ್ನು ಸ್ಪಷ್ಟ[...] ನಟ ರಮೇಶ್‌ಗಷ್ಟೇ ಅಲ್ಲ, ಆ ಕಾರ್ಯಕ್ರಮ ನೋ[...] ಪ್ರತಿಯೊಬ್ಬರಿಗೂ ಸುದೀಪ್ ಮತ್ತಾತನ ಪತ್ನಿ ಜೆ[...] ಅನ್ಯೋನ್ಯತೆಯ ಮಟ್ಟ ಏನೆಂಬುದೂ ಬಯಲ[...] ಹಾಗಂತ ರಮೇಶ್ ಬಿಡಬೇಕಲ್ಲ, "ಸುದೀಪ್... [...] ಹೇಳಿ.... ನೀವು ಈ ಥರ ಯಾಕೆ? ನಿಮ್ಮ ಅರ್ಧಾ[...] ನೀವು ಅರ್ಥವಾಗೋಲ್ಲ ಅಂದರೆ ಬೇರೆ ಯಾರಿಗೆ [...] ನೀವು ಅರ್ಥವಾಗಲು ಸಾಧ್ಯ...?" ಎಂದು [...] ಪ್ರಶ್ನೆಯಿಟ್ಟರು.



ವಿಚಾರವಾದಿ ಹೋರಾಟಕ್ಕೆ ಚಾಲನೆ ನೀಡಿದ ಬೃಹತ್ ರ್‍ಯಾಲಿ





ಅಕ್ಷರಶಃ ಅದೊಂದು ಬೃಹತ್ ರ್‍ಯಾಲಿ. ಧಾರವಾಡ, ಕರ್ನಾಟಕದಿಂದ ಮಾತ್ರವಲ್ಲ ನಾಡಿನ ಮೂಲೆಗಳಿಂದ ಸಾಹಿತಿಗಳು, ಚಿಂತಕರು, ...ದರು, ಹೋರಾಟಗಾರರು, ಪತ್ರಕರ್ತರು, ...ಕರು, ವಿವಿಧ ಅಕಾಡೆಮಿ ಪ್ರಾಧಿಕಾರಗಳ ಅಧ್ಯಕ್ಷರು ...ಸದಸ್ಯರು, ವಿದ್ಯಾರ್ಥಿಗಳು... ಹೋರಾಟದ ಸಾಗರಕ್ಕೆ ...ಗಿ ಹರಿದುಬಂದಿದ್ದರು. ಸ್ಥಳೀಯ ಕಾಲೇಜುಗಳಿಂದ ...ವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೀದಿಗಿಳಿದಿದ್ದರು. ...ಸು ಸಂಖ್ಯೆಯಲ್ಲಿ ಸಂವೇದನಾಶೀಲ ಮನಸ್ಸುಗಳು ...ಡಿದ್ದವು.

...ಯನ್ನು ಕೊಲ್ಲಬಹುದು, ಚಿಂತನೆಗಳನ್ನಲ್ಲ', 'ಹಣೆಗೆ ...ಬಹುದು ಚಿಂತನೆಗೆ ಅಲ್ಲ', 'ಅಭಿವ್ಯಕ್ತಿ ಸ್ವಾತಂತ್ರ್ಯ ...ಸಿ', 'ಸಾಹಿತಿಯನ್ನು ಕೊಲ್ಲಬಹುದು, ಸಾಹಿತ್ಯವನ್ನು ...ರಾ?', `ಕೋಮುವಾದಿಗಳಿಗೆ ಧಿಕ್ಕಾರ'... ಹೀಗೆ ...ಲ್ಲಿ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದರೆ ...ಡದ ನೆಲ ಅದುರುತ್ತಿತ್ತು. ಹತ್ಯೆಕೋರ ಶಕ್ತಿಗಳ ...ಲ್ಲಿ ನಡುಕು ಹುಟ್ಟುವಂತಿತ್ತು. 'ಇನ್ನು ನಾಡು ...ಮನವನ್ನು ಸಹಿಸುವುದಿಲ್ಲ' – ಎಂಬ ಸಂದೇಶವನ್ನು ಸ್ಪಷ್ಟವಾಗಿ ರವಾನಿಸಿತು. ಸಾಂಸ್ಕೃತಿಕ ಲೋಕದ ...ಗಳಿಗೆ ನೈತಿಕ ಧೈರ್ಯ ತುಂಬುವಂತಿತ್ತು.

...ರವಾಡದ ನೆಲವೇ ಹಾಗೆ. ನಾಡಿನಲ್ಲಿ ಹೊಸ ...ಗಳು ಎದುರಾದಾಗೆಲ್ಲ ಚಳವಳಿಗೆ ಜನ್ಮ ನೀಡಿದೆ. ...ಬುವರ ಹತ್ಯೆಯನ್ನು ಖಂಡಿಸಿ ಧಾರವಾಡದಲ್ಲಿ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿ ಹಾಗೂ ನಂತರದಲ್ಲಿ ನಾಡಿನ ಚಿಂತಕರು ನಡೆಸಿದ ಚಿಂತನಾ ಸಭೆ ಹೊಸ ವಿಚಾರವಾದಿ ಹೋರಾಟಕ್ಕೆ ನಾಂದಿ ಹಾಡಿತು.

ಈ ರ್‍ಯಾಲಿಯು ಹಂತಕರ ಕ್ರೌರ್ಯದಿಂದ ಹುಟ್ಟಿದ ದಿಗ್ಭ್ರಮೆ, ಭಯ, ಆತಂಕ, ತಲ್ಲಣಗಳಿಂದ ಹೊರಬಂದು ಹೋರಾಟಕ್ಕೆ ಸನ್ನದ್ಧವಾಗುವ ಛಾತಿಯನ್ನು ನೀಡಿತು. ಕಲ್ಬುರ್ಗಿಯವರ ನೆತ್ತರು ನೆಲಕ್ಕೆ ಬಿದ್ದ ಮಣ್ಣಲ್ಲಿ 'ಡಾ. ಎಂ.ಎಂ. ಕಲ್ಬುರ್ಗಿ ಹತ್ಯಾ ವಿರೋಧೀ ಹೋರಾಟ ವೇದಿಕೆ' ಜೀವ ತಳೆದು ಆಗಸ್ಟ್ 14 ರಂದು ರ್‍ಯಾಲಿಗೆ ಕರೆ ನೀಡಿದ್ದು ಒಂದು ನೆಪವಾಗಿತ್ತು. ದೇಶ ಹಾಗೂ ನಾಡಿನಲ್ಲಿ ಕೋಮುವಾದಿ, ಮತೀಯವಾದಿ ಶಕ್ತಿಗಳು ಮತ್ತು ಅವುಗಳ ಹಿತಾಸಕ್ತಿಗೆ ಪೂರಕವಾದ ಪ್ರಭುತ್ವಗಳಿಂದ ಕಳೆದ ಕೆಲವು ದಶಕಗಳಿಂದಲೂ ಸಾಹಿತಿ ಚಿಂತಕರ ಮೇಲೆ ಹಲ್ಲೆ ಜೀವ ಬೆದರಿಕೆ ನಡೆಯುತ್ತಲೇ ಇತ್ತು. ಮಹಾರಾಷ್ಟ್ರದ ಧಾಬೋಲ್ಕರ್ ಮತ್ತು ಪನ್ಸಾರೆಯವರ ಹತ್ಯೆ, ಕರ್ನಾಟಕದ ಲಿಂಗಣ್ಣ ಸತ್ಯಂಪೇಟೆ ಮತ್ತು ಕಲ್ಬುರ್ಗಿಯವರ ಹತ್ಯೆ ಕ್ರೌರ್ಯವನ್ನು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಇದರ ಉದ್ದೇಶವಾಗಿತ್ತು. ಈ ಎಲ್ಲ ತಲ್ಲಣಗಳು ಪ್ರತಿರೋಧದ ಮನೋಭಾವವನ್ನು ಹುಟ್ಟಿಸಿದ್ದವು. ಧಾರವಾಡದ ರ್‍ಯಾಲಿ ಅದಕ್ಕೊಂದು ಮೂರ್ತ ರೂಪವನ್ನು ನೀಡಿತು. ಹಿಂದಿನ ದಿನ ಚಂಪಾ ಅವರು ಮಾತನಾಡಿ "ಸಮಕಾಲೀನ ಬಿಕ್ಕಟ್ಟುಗಳನ್ನು ಎದುರಿಸುವಂಥ ಹೋರಾಟ ಧಾರವಾಡದಿಂದ ಆರಂಭವಾಗಬೇಕು" ಎಂದು ಹುರಿದುಂಬಿಸಿದ್ದರು. ರ್‍ಯಾಲಿ ಮುಗಿಸಿ ಹೋಗುವಾಗ ಹಿರಿಯರಾದ ಚೆನ್ನವೀರ ಕಣವಿಯವರು "ಈ ರ್‍ಯಾಲಿ ಧಾರವಾಡದ ಇತಿಹಾಸದಲ್ಲಿ ಅಭೂತಪೂರ್ವ" ಎಂದು ಉದ್ಗಾರ ತೆಗೆದರು. ವರ್ತಮಾನದ ಸಂಕಟಗಳಿಂದ ಪಾರಾಗುವ ಹೋರಾಟದ ಅಗತ್ಯವನ್ನು ಹೊಸ ತಲೆಮಾರಿಗೆ ಮನವರಿಕೆ ಮಾಡಿಸಿದ್ದು ಈ ರ್‍ಯಾಲಿಯ ಸಾಧನೆಯಾಗಿದೆ.

ಡಾ. ಚೆನ್ನವೀರ ಕಣವಿ, ತೋಂಟದ ಶ್ರೀಗಳು, ಡಾ. ರಾಜೇಂದ್ರ ಚೆನ್ನಿ, ಕೆ. ನೀಲಾ, ಡಾ. ಸಿದ್ಧನಗೌಡಾ ಪಾಟೀಲ, ಸಿ. ಬಸವಲಿಂಗಯ್ಯ, ಎಸ್.ಆರ್. ಹಿರೇಮಠ, ಡಾ. ಮಾಲತಿ ಪಟ್ಟಣಶೆಟ್ಟಿ, ಬಂಜಗೆರೆ ಜಯಪ್ರಕಾಶ, ಡಾ. ರಹಮತ್ ತರೀಕೆರೆ, ಸರಜೂ ಕಾಟ್ಕರ್ ಮೊದಲಾದವರು ತಮ್ಮ ಚಿಂತನೆಗಳನ್ನು ಹಂಚಿಕೊಂಡರು. ಸೆಪ್ಟೆಂಬರ್ 14ರಂದು ಕರ್ನಾಟಕದ ಪೊಲೀಸ್ ಇಲಾಖೆ ಕಲ್ಬುರ್ಗಿಯವರ ಕೊಲೆ ನಡೆದದ್ದು ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ ಎಂದು ಪ್ರಕಟಿಸಿದ್ದರಿಂದ ಅಲ್ಲಿಯವರೆಗಿನ ಹತ್ಯೆಯನ್ನು ಕುರಿತಾದ ಊಹಾಪೋಹಗಳಿಗೆ ತೆರೆಬಿದ್ದಿತ್ತು.

ಹೀಗಾಗಿ ಚಿಂತಕರು ಮತೀಯ ಸಿದ್ಧಾಂತ ಹಾಗೂ ಸಂಘಟನೆಗಳ ಕುರಿತು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೆಚ್ಚು ಆಸ್ಥೆಯಿಂದ ಮಾತನಾಡಿದರು. ದಾಬೋಲ್ಕರ್, ಪನ್ಸಾರೆ, ಸತ್ಯಂಪೇಟೆ ಇವರ ಪ್ರಕರಣಗಳಲ್ಲಿ ಆದಂತೆ ಕಲ್ಬುರ್ಗಿಯವರ ಪ್ರಕರಣದಲ್ಲಿ ಆದರೆ ಹೋರಾಟವನ್ನು 'ಬೆಂಗಳೂರು ಚಲೋ' ಆಗಿ ರೂಪಿಸುವುದಾಗಿ ಎಚ್ಚರಿಕೆ ನೀಡಿದರು. ಸೈದ್ಧಾಂತಿಕ ಭಿನ್ನಾಭಿಪ್ರಾಯವು ಕಾರಣವಾದ ಅಪರಾಧಿಗಳನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಲಾಯಿತು. ಇಂತಹ ಸಾಮಾಜಿಕ ಅಪರಾಧಗಳು ಹೆಚ್ಚುತ್ತಿರುವಾಗ ಸರ್ಕಾರ ಯಾವ ನಿಟ್ಟಿನಲ್ಲಿ ತೀವ್ರವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು. ಮಹಾರಾಷ್ಟ್ರದಲ್ಲಿ ಚಿಂತಕರ ಹತ್ಯೆಯ ನಂತರವಾದರೂ 'ಅಂಧಶ್ರದ್ಧಾ ವಿರೋಧಿ ಕಾನೂನು' ಜಾರಿಗೆ ಬಂದಿದೆ. ಅದೇ ರೀತಿ ಕರ್ನಾಟಕ ಸರ್ಕಾರವೂ ಮೂಢನಂಬಿಕೆ ವಿರೋಧಿ ಕಾನೂನನ್ನು ಜಾರಿಗೆ ತರಲು ಒತ್ತಾಯಿಸಲಾಯಿತು.

ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಚಿಂತಕರು ರಾಜ್ಯದಾದ್ಯಂತ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಿದರು. ಪ್ರತೀ ಜಿಲ್ಲೆಯಲ್ಲಿ ಧಾರವಾಡದ ರ್‍ಯಾಲಿಯ ಮಾದರಿಯಲ್ಲಿಯೇ ವಿದ್ಯಾರ್ಥಿ ಯುವ ಸಮುದಾಯವನ್ನು ಒಳಗೊಂಡು ಜಾಥಾ ಮಾಡುವುದು, ಕಲ್ಬುರ್ಗಿಯವರ ಮುಖ್ಯ ಬರಹಗಳ ವಾಚಿಕೆಯೊಂದನ್ನು ಸಿದ್ಧಪಡಿಸಿ ವಿದ್ಯಾರ್ಥಿ ಸಮುದಾಯಕ್ಕೆ ಕಾರ್ಯಾಗಾರಗಳನ್ನು ಏರ್ಪಡಿಸುವುದು ಎಂಬ ಯೋಜನೆಯನ್ನು ರೂಪಿಸಲಾಯಿತು. ನಮ್ಮ ವರ್ತಮಾನದ ಬಿಕ್ಕಟ್ಟುಗಳಿಗೆ ಪರ್ಯಾಯಗಳನ್ನು ಹುಡುಕುವ ವಿಚಾರವಾದಿ ಹೋರಾಟವನ್ನು ಆರಂಭಿಸುವ ಸಿದ್ಧತೆಗಳು ಕಲ್ಬುರ್ಗಿಯವರ ಮೂಲಕ ಆರಂಭವಾದ ಚಾರಿತ್ರಿಕ ಸಮಾವೇಶ ಇದಾಗಿತ್ತು.

● ಎಂ.ಡಿ. ಒಕ್ಕುಂದ





...ಕ್ಕೆ ಸುದೀಪ್ ಉತ್ತರ ಖಡಕ್ಕಾಗಿಯೇ ಇತ್ತು, ...ಯಾರಿಗೂ ನಾನು ಸುಲಭಕ್ಕೆ ಅರ್ಥವಾಗೋನಲ್ಲ, ...ರೋದೇ ಹಂಗೆ. ಯಾರೇನೇ ತಿಪ್ಪರಲಾಗ ...ಹೊ ನಾನು ಯಾರ ಮಾತೂ ಕೇಳಲ್ಲ. Even ...ಲ್ಲ ಅಷ್ಟೇ. ನನ್ನ ಇಚ್ಛೆಗೆ ವಿರುದ್ಧವಾಗಿ ಯಾರೂ ...ಸಿಲ್ಲ, ಹಾಗೊಮ್ಮೆ ಶೂಟಿಂಗ್ ವೇಳೆ ನನ್ನ ...ದಾದ್ರೂ ಕಿಟ್ಟಸು ಅಂದ್ರೆ ಮತ್ತೆ ನಾನು ಮೂಡ್‌ಗೆ ...ಕ್ಕೆ ಮೂರ್‍ನಾಲ್ಕು ದಿನ ಕೆಲವೊಮ್ಮೆ ವಾರವೂ ...ಕ್ಕೆ ನಾನು ಮನಸ್ಸು ಮಾಡ್ಬೆ ಎಂದರೆ ನನ್ನನ್ನು ...ರ ಕೈನಲ್ಲೇ spoil ಮಾಡಿಬಿಡ್ತೀನೀ... ಗೊತ್ತಾ? ಅದೂ, ತಾನು ಸುದೀಪ್‌ನ್ನು ಅರ್ಥ ...ಬಿದ್ದೀನಿ ಅಂದ್ರೆ, ಅದು ಅವರ ಮೂರ್ಖತನ ...ಯಾರೇ ಆದ್ರೂ, ನನ್ನನ್ನು ಪೂರ್ತಿ ...ಕೊಳ್ಳಿ ಅಂತ ನಾನೇನು ಕಾದು ಕೂರುವುದಿಲ್ಲ, ...ಮಾಡಿಕೊಳ್ಳೋದೂ ಬೇಕಿಲ್ಲ. ನಾನಿರೋದೇ ...

...ಅಷ್ಟು ಕಸ್ತೂರಿ ವಾಹಿನಿಯಲ್ಲಿ ಹೀಗಿಯಂದ ...ದಟ್ಟ ಫೋನಲ್ಲಿ ತನ್ನ ಪತ್ನಿಯನ್ನು ಪಕ್ಕ, ಕೂರಿಸಿಕೊಂಡು ಸುದೀಪ್ ಹೇಳಿದ ಮಾತುಗಳು. ಕೆಲವರಿಗಿದು ದುರಹಂಕಾರವೆನಿಸಿರಬೇಕು. ದರ್ಪವೆನಿಸಿರಬಹುದು. ಆದರೆ ಸುದೀಪ್ ಹೇಳಿದ್ದು ತಾನೆಂಥ ಸ್ವಾಭಿಮಾನಿ ಮತ್ತು ಛಲಗಾರ ಎಂಬ ಬಗ್ಗೆಯೇ ಹೊರತು ಅದಕ್ಕೆ ಮತ್ತೇನೂ ಅರ್ಥವಿರಲಿಲ್ಲ. ಸುದೀಪ್‌ರ ಇಂಥ ಮಾತುಗಳು ಯಾರಿಗೆಷ್ಟು ಅರ್ಥವಾಯಿತೋ ಗೊತ್ತಿಲ್ಲ. ಸ್ವತಃ ಕೈಹಿಡಿದ ಮಡದಿಗೇ ಸುದೀಪ್ ಅರ್ಥಮಾಡಿಕೊಳ್ಳುವುದು ಕಷ್ಟವಾಯಿತೋ ಅಥವಾ ಬೇಕಿರಲಿಲ್ಲವೋ ಗೊತ್ತಿಲ್ಲ.

ಬರುಬರುತ್ತ ಪತಿ-ಪತ್ನಿ ಮಧ್ಯೆ ಅಂತರ ಹೆಚ್ಚುತ್ತಲೇ ಹೋಯಿತು. ಈ ಮಧ್ಯೆ ಸುದೀಪ್ ಸ್ನೇಹಿತ ಸ್ಟಾರ್ ಹೀರೋನ ಕುಡುಕ ಪತ್ನಿ ಪ್ರಿಯಾಳ ಜೊತೆಯಾದಳು. ಗಳಸ್ಯ ಕಂಠಸ್ಯ ಹೀರೋಗಳ ಕ್ಷೋಭೆಗ್ರಸ್ತ ಪತ್ನಿಯರೂ ಸಮಾನ ಮನಸ್ಕ ಸ್ನೇಹಿತೆಯಾದರು. ಪ್ರಿಯಾಳ ಗೆಳತಿಗೆ ಯಾರೋ [illegible] ಪತ್ರಕರ್ತೆಯೊಬ್ಬಳು ಗೆಳತಿಯಂತೆ. ಆಕೆಗೆ ಸುದೀಪ್ ಬಗ್ಗೆ ಅದ್ಯಾರು ಮಾಹಿತಿ ಕೊಡುತ್ತಿದ್ದರೋ, ಯಾರೋ ಟೀವಿ ಆ್ಯಂಕರ್‌ಗೆ ಸುದೀಪ್ ದಿಡ್ಡದ ನೆಕ್ಲೆಸ್ ಕೊಟ್ಟರೆಂದು ಕತೆ ಕಟ್ಟಿ ಹೇಳಿದ್ದನ್ನೇ ಪ್ರಿಯಾ ನಂಬಿಬಿಟ್ಟರು. [illegible] ಯಾರೋ ನಟಿಯೊಬ್ಬಳ ಜೊತೆ ಸಂಬಂಧ ಕಲ್ಪಿಸಿ ಯಾರೋ ಕಟ್ಟಿದ ಕತೆಯನ್ನೂ ಪ್ರಿಯಾ ಸತ್ಯವೆಂದು ಭ್ರಮಿಸಿದರು. ಇಬ್ಬರಿಗೂ ವಿಪರೀತ ಈಗೋ. ಯಾರಿಗೆ ಯಾರೂ ಮಣಿಯದ ಪ್ರತಿಷ್ಠೆ.

ಯೋಗಿಯ ವೈರಾಗ್ಯ

ಅದು ವಿಪರೀತಕ್ಕೆ ಹೋಗಿದ್ದು 2011ರ ಮಾರ್ಚ್‌ನಲ್ಲಿ. ಇತ್ತ ಸುದೀಪ್ ಮತ್ತೊಂದೆಡೆ ಅತ್ತೆ ಸರೋಜರ ವಿರುದ್ಧ ಪ್ರಿಯಾ ಸಿಟ್ಟಿನ ಕಟ್ಟೆಯೊಡೆದ ಫಲವಾಗಿ ದೊಡ್ಡ ಸದ್ದೇ ಸ್ಫೋಟಿಸಿತ್ತು. ವಿರಹವೇದನೆಗೆ ಬಿದ್ದ ಪ್ರಿಯಾ ಜೆ.ಪಿ. ನಗರದ ಸುದೀಪ್ ಮನೆಯನ್ನು ಶಾಶ್ವತವಾಗಿ ತೊರೆದಳು. ಕನಕಪುರ ರಸ್ತೆಯ ಕರಿಷ್ಮಾ ಹಿಲ್ಸ್‌ನಲ್ಲಿ ಪತ್ನಿ ಮತ್ತು ಮಗಳಿಗೆಂದೇ ಪ್ರತ್ಯೇಕ ಕಾಟೇಜ್ ಖರೀದಿಸಿದ್ದ ಸುದೀಪ್ ಮಗಳ ಊಟೋಪಚಾರಕ್ಕೆಂದೇ ಪ್ರತ್ಯೇಕ ಅಡುಗೆಯವನನ್ನು ನೇಮಿಸಿದ್ದರು. ಪತ್ನಿ ಮೇಲಿನ ಸೇಡಿಗೆ ಮಗಳ ಮೇಲೆ ಪ್ರೀತಿಯೋ ಅಥವಾ ಮಗಳ ಮೇಲಿನ ವ್ಯಾಮೋಹಕ್ಕೆ ಪತ್ನಿ ಮೇಲೆ ಸಿಟ್ಟೋ ಬಲ್ಲವರ್‍ಯಾರು?

ವರ್ಷಗಟ್ಟಲೆ ಪತಿ ಪತ್ನಿ ಮಧ್ಯೆ ಮಾತೇ ಇಲ್ಲ. ಇಬ್ಬರಿಗೂ ಒಬ್ಬರ ಮೇಲೊಬ್ಬರಿಗೆ ಒಳಗೊಳಗೇ ಪ್ರೀತಿಯ ಜಿದ್ದು. ಪರಸ್ಪರ ಮಾತೇ ಆಡದೆ ಹೋದರೂ ಸಾರ್ವಜನಿಕವಾಗಿ ಜೊತೆಗಿದ್ದಂತೆ ನಾಟಕ. ಪರಸ್ಪರ ಕೆಡುಕು ಬಯಸದೆ ಯಾರ ವರ್ಚಸ್ಸಿಗೆ ಯಾರೂ ಮಸಿ ಬಳಿಯದ ಹಾಗೆ ಎಚ್ಚರ. ಇನ್ನೆಷ್ಟು ದಿನ ಅಂತ ಹೀಗೆ ನಟಿಸಲು ಸಾಧ್ಯ? ಯಾರಾದರೂ ಒಬ್ಬರು ಸೋಲಬೇಕಲ್ಲವೆ? ಕೊನೆಗೂ ಸುದೀಪ್ ತಾವೇ ಮಣಿದಿದ್ದಾರೆ. ತನ್ನ ಬದುಕಿನ ಅಷ್ಟೂ ಗಳಿಕೆಯನ್ನೆಲ್ಲ ವಿದಾಯದ ಗೆಳತಿಯ ಪಾದಕ್ಕರ್ಪಿಸಿದ್ದಾರೆ. ಅದು ಯೋಗಿಯೊಬ್ಬನಿಗೆ ಮಾತ್ರ ಸಾಧ್ಯವಾಗಬಹುದಾದ ವೈರಾಗ್ಯ. ತನ್ನ ಬದುಕಿನ ಅಷ್ಟೂ ದುಡಿಮೆಯನ್ನೆಲ್ಲ ಅಗಲಿ ಹೊರಟ ಗೆಳತಿಯ ಸಂತೋಷದ ಮೂಲಕ ಕಾಣುವ ತಾಕತ್ತೋ ಅಥವಾ ತನ್ನ ಮಗಳ ನಗುವಿನಲ್ಲಿ ಕಾಣ ಹೊರಟ ದೊಡ್ಡಸ್ತಿಕೆಯೋ ಗೊತ್ತಿಲ್ಲ. ಪ್ರಾಯಶ್ಚಿತವೋ ಪಶ್ಚಾತ್ತಾಪವೋ ಬಲ್ಲವರ್‍ಯಾರು? ಕೊನೆಗೂ ಸುದೀಪ್ ಬೇರೆ ಯಾರಿಗೂ ಸಾಧ್ಯವಾಗದ ದೊಡ್ಡಸ್ತಿಕೆಯನ್ನೇ ಮೆರೆದಿದ್ದಾರೆ.

ಅದಕ್ಕೆ ಅವನ ಮಾತುಗಳೇ ಸಾಕು. ನಾನಿದನ್ನು ಮುಚ್ಚಿಡಲು ಅಥವಾ ಪರಿಸ್ಥಿತಿಯಿಂದ ಓಡಿಹೋಗಲು ಇಚ್ಛಿಸುವುದಿಲ್ಲ. ನನ್ನ ಬದುಕಿನ ಈ ಸ್ಥಿತಿಗೆ ಯಾರು ಹೊಣೆಗಾರರೋ ಅವರಿಗೂ ನನ್ನ ಧನ್ಯವಾದಗಳು. ಅವರಿಗೆ ಒಳ್ಳೆಯದಾಗಲಿ. ಸಂತೋಷವಾಗಿರಿ. ನನಗೆ ಆಶೀರ್ವಾದ ಮಾಡಿ. ಬದುಕಿನಲ್ಲಿ ಏರಿಳಿತಗಳು ಇದ್ದದ್ದೇ. ಆದರೆ ಕೆಲವನ್ನು ತಾನಾಗಿಯೇ ವಾಸಿಯಾಗಲು ಬಿಡಬೇಕು. ನನ್ನ ಖಾಸಗಿ ಬದುಕನ್ನು ಯಾರು ಬೇಕಾದರೂ ತಮ್ಮ ಬಾಯಿಚಪಲಕ್ಕೆ ಬಳಸಿಕೊಳ್ಳಬಹುದಾದರೆ ಅಂಥವರು ನನಗೊಬ್ಬಳು ಮಗಳಿದ್ದಾಳೆ ಮತ್ತು ಆಕೆಯ ಮನಸ್ಸಿಗೆ ಘಾಸಿ ಮಾಡುವ ಅಧಿಕಾರ ಯಾರಿಗೂ ಇಲ್ಲ ಎಂಬುದನ್ನು ಅರ್ಥ ಮಾಡಿಕೊಂಡರೆ ಸಾಕು...!

[illegible]ನ ಈ ಮಾತುಗಳೇ ಇಡೀ ಕತೆಯನ್ನು ಬಿಚ್ಚಿಡುತ್ತವೆಯಲ್ಲವೆ?

● ಡಾ. ಸೋಮನಾಥ್

ಡಾ. ಎಂ. ಎಂ. ಕಲಬುರ್ಗಿ: ಎಂದೂ ಖಾಲಿಯಾಗದ ಕಣಜ

...ಟ್ಟುಕೊಂಡ ಗುರಿಗಳು ಮತ್ತು ಆಶಯಗಳ ಕುರಿತು ನಾನು ಸ್ಪಷ್ಟವಾಗಿದ್ದೇನೆ. ಈ ಆಶಯಗಳು ನನ್ನ ಜನರಿಂದ ಸಾಕಾರಗೊಳ್ಳುತ್ತವೆ ಎಂಬ ನಂಬಿಕೆ ನನಗಿದೆ. ನಿಮ್ಮ ನ್ಯಾಯಾಲಯದ ವಿಚಾರಣೆಗಳು, ನೀವು ನಮ್ಮ ಜನರಲ್ಲಿ ಹುಟ್ಟು ಹಾಕಿರುವ ತಲ್ಲಣಗಳಾವೂ ನನ್ನ ಜನರ ಗುರಿ ಮತ್ತು ಹೋರಾಟಗಳನ್ನು ದಿಕ್ಕು ತಪ್ಪಿಸಲಾರವು. ನೀವು ನನ್ನನ್ನು ಜೈಲಿಗೆ ತಳ್ಳಿ ಅಥವಾ ಕೊಂದು ಹಾಕಿ ಆದರೆ ನಮ್ಮಗಳ ವಿರೋಚಿತ ಗೆಲುವನ್ನು ನೀವು ತಡೆಯಲಾರಿರಿ'. ಕೆನ್ ಸಾರೋವಿವಾ ನೈಜೀರಿಯಾದ ಚಿಂತಕ ಮತ್ತು ಹೋರಾಟಗಾರ ತನ್ನನ್ನು ಗಲ್ಲಿಗೆ ಹಾಕುವ ಮುನ್ನ ಬರೆದ ಕೊನೆಯ ಪತ್ರದ ಸಾಲುಗಳಿವು. ನೈಜೀರಿಯಾದ ಮಿಲಿಟರಿ ಆಡಳಿತ ಮತ್ತು ನ್ಯಾಯಾಲಯಗಳು ನೆದರ್ಲ್ಯಾಂಡ್ ಮತ್ತು ಬ್ರಿಟನ್ನಿನ 'ಶೆಲ್' ಎಂಬ ಬಂಡವಾಳಶಾಹಿ ಕಂಪನಿಯ ವಿರುದ್ಧ ಹೋರಾಡಿದ ಕೆನ್ ಸಾರೋವಿವಾನನ್ನು ಗಲ್ಲಿಗೇರಿಸಿತು. ಕೆನ್ ಸಾರೋವಿವಾ ನೈಜೀರಿಯಾದ ಒಗೋನಿ ಜನಾಂಗದಿಂದ ಬಂದ ಅಪರೂಪದ ಚಿಂತಕ ಮತ್ತು ಹೋರಾಟಗಾರ. ಒಗೋನಿ ಬುಡಕಟ್ಟು ಜನಾಂಗ ಬದುಕುವ ಪರಿಸರದಲ್ಲಿ ದೊರೆಯುತ್ತಿದ್ದ ಬೆಲೆಬಾಳುವ ತೈಲ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದ ನೆದರ್ಲ್ಯಾಂಡ್ ಮತ್ತು ಬ್ರಿಟನ್ನಿನ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಎದುರು ಹಾಕಿಕೊಂಡು ತನ್ನ ಜನಗಳನ್ನು ಸಂಘಟಿಸಿ ಸಾರೋವಿವಾ ಹೋರಾಟಕ್ಕಿಳಿದ. ಜಾಗತಿಕ ಮಾರುಕಟ್ಟೆಯಲ್ಲಿ ಬಿಕರಿಯಾಗಿ ಹೋಗಿದ್ದ ನೈಜೀರಿಯಾದ ಆಡಳಿತ ಮತ್ತು ನ್ಯಾಯಾಲಯಗಳು ಸಾರೋವಿವಾನ ಹೋರಾಟವನ್ನು ದೇಶದ್ರೋಹಿ ಚಟುವಟಿಕೆ ಎಂದು ಪರಿಗಣಿಸಿ ಗಲ್ಲಿಗೇರಿಸಿ ಕೊಂದು ಹಾಕಿತು. ಇಟಲಿಯ ಮಾರ್ಕ್ಸ್‌ವಾದಿ ಚಿಂತಕ, ಹೋರಾಟಗಾರ ಆಂಟೋನಿಯಾ ಗ್ರಾಂಮ್ಷಿಗೆ ಇಪ್ಪತ್ತು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಯನ್ನು ಮುಸಲೋನಿ ಆಡಳಿತ ವಿಧಿಸಿತು. ಮುಸಲೋನಿಯನ್ನು ಆರಾಧಿಸುತ್ತಿದ್ದ ನ್ಯಾಯಾಧೀಶ ಗ್ರಾಮ್ಷಿಗೆ ಶಿಕ್ಷೆ ವಿಧಿಸುವಾಗ 'ಇನ್ನೂ ಇಪ್ಪತ್ತು ವರ್ಷ ಈ ಮೆದುಳು ಚಿಂತನೆ ನಡೆಸುವುದನ್ನು ತಡೆಯಬೇಕು' ಎಂಬ ತನ್ನ ಉದ್ದೇಶವನ್ನು ತೀರ್ಪಿನಲ್ಲಿ ಬರೆದಿಟ್ಟ. ಇಪ್ಪತ್ತು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಯನ್ನು ಗ್ರಾಂಮ್ಷಿ ಪೂರೈಸಲಿಲ್ಲ. ಮುಸಲೋನಿಯ ಫ್ಯಾಸಿಸ್ಟ್ ಪಕ್ಷದ ಕೌರ್ಯದಿಂದ ಗ್ರಾಮ್ಷಿ ಜೈಲಿನಲ್ಲಿಯೇ ಸತ್ತು ಹೋದ. ಆದರೆ ಕ್ರೂರ ನ್ಯಾಯಾಲಯಗಳಾಗಲಿ, ಫ್ಯಾಸಿಸ್ಟ್ ಖೂಳರಾಗಲಿ ಗ್ರಾಂಮ್ಷಿಯ ಮೆದುಳನ್ನು ನಾಶ ಮಾಡಲಾಗಲಿಲ್ಲ. ಮೊನ್ನೆ ಇಂತಹದ್ದೇ ಅಸಹನೆಗೆ ಬಲಿಯಾದ ಡಾ. ಕಲಬುರ್ಗಿಯವರು ಹಲವು ವಿಷಯಗಳಲ್ಲಿ ಕೆನ್ ಸಾರೋವಿವಾ ಮತ್ತು ಗ್ರಾಂಮ್ಷಿಯನ್ನು ಹೋಲುತ್ತಾರೆ. ಕರ್ನಾಟಕದ ಮಟ್ಟಿಗೆ ಕಲಬುರ್ಗಿಯವರ ಕೊಲೆ ತಲ್ಲಣಗಳನ್ನು ಹುಟ್ಟಿಸಿದೆ. ದೇಶದೆಲ್ಲೆಡೆ ಹೆಚ್ಚುತ್ತಿರುವ ವಿಚ್ಛಿದ್ರಕಾರಿ ಅಸಹನೆ ನಾಡಿನ ವೈಚಾರಿಕ ಮೆದುಳುಗಳನ್ನು ಬುಲೆಟ್‌ಗಳಿಂದ ನಿಷ್ಕ್ರಿಯಗೊಳಿಸಲು ಹೊರಟಿದೆ. ಜನಾಶಯಗಳ ಎಗ್ಗಿಲ್ಲದ ದಮನ ಮತ್ತು ಕ್ರೂರ ಅಸಹನೆಗಳು ಫ್ಯಾಸಿಸ್ಟ್ ವ್ಯವಸ್ಥೆಯ ಮೂಲಧಾತುಗಳು. ದೇಶ ಮೆಲ್ಲನೆ ಈ ಶಕ್ತಿಗಳ ವಶವಾಗುತ್ತಾ ಹೋಗುತ್ತಿದೆ. ಕಲಬುರ್ಗಿಯಂತಹ ಜನಪರ ಚಿಂತಕರ ಮೆದುಳುಗಳಿಗೆ ಬುಲೆಟ್ ತೂರಿಸಲು ಮುಂದಾಗುತ್ತಿದೆ. ಈ ದೇಶದಲ್ಲಿ ಜನಪರ ಚಿಂತಕರ ಕಗ್ಗೊಲೆ ಇದೇ ಮೊದಲೇನಲ್ಲ, ಈ ದೇಶದ ಧಾರ್ಮಿಕ ಅಸಹನೆ ತನ್ನ ಚರಿತ್ರೆಯುದ್ದಕ್ಕೂ ಅನೇಕರನ್ನು ಹೀಗೆ ಬಲಿ ತೆಗೆದುಕೊಂಡಿದೆ. ಡಾ. ಕಲಬುರ್ಗಿಯವರು ಕನ್ನಡದ ಒಬ್ಬ ಶ್ರೇಷ್ಠ ಸಂಶೋಧಕ ಮಾತ್ರವಾಗಿರಲಿಲ್ಲ, ತಾನು ಬದುಕುತ್ತಿದ್ದ ವರ್ತಮಾನದ ವಿಷಮತೆಯ ಕುರಿತು ಸದಾ ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡು ಅದನ್ನು ಬದಲಿಸುವ ಚಳವಳಿಗಾರರೂ ಆಗಿದ್ದರು. 'ಒಳಗಿನವರಾಗಿ'ದ್ದುಕೊಂಡು ತನ್ನ ಪರಂಪರೆಯ ವಕ್ರತೆಗಳನ್ನು ಖಂಡಿಸುವುದು ಭಾರತದ ಸಂಪ್ರದಾಯಸ್ಥ ಸಮಾಜದಲ್ಲಿ ಸುಲಭದ ಕೆಲಸವೇನಲ್ಲ, ಕಲಬುರ್ಗಿಯವರು ಒಳಗಿದ್ದುಕೊಂಡೇ ತನ್ನ ಸುತ್ತಲ ಒಳಗನ್ನು ಬದಲಿಸಲು ಕಾತರಿಸಿದರು. ಸದಾ ತಲ್ಲಣಗಳಲ್ಲಿಯೇ ಬದುಕಿದ ಅವರು ಬೀದಿಗಿಳಿದು ಪ್ರತಿಭಟಿಸಲಿಲ್ಲ ಎಂಬುದನ್ನು ಬಿಟ್ಟರೆ, ಅವರು ಜೀವಮಾನವಿಡೀ ಬರೆದ ಬರಹದಲ್ಲಿ ಪರಂಪರೆಯ ಜೊತೆ ಭಿನ್ನಮತವಿಟ್ಟುಕೊಂಡೇ ಬಂದರು.

1998ನೇ ಇಸ್ವಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಅನೇಕರಿಗೆ ಒಂದು ಆತಂಕವಿತ್ತು, ಕಲಬುರ್ಗಿ ಅವರು ಕುಲಪತಿಗಳಾಗಿ ಬಂದರೆ, ಕಂಬಾರರು ವಿಶ್ವವಿದ್ಯಾಲಯದಲ್ಲಿ ರೂಪಿಸಿದ್ದ ಜಾತ್ಯತೀತ ಪರಿಸರ ಹಾಗೆಯೇ ಉಳಿಯಲು ಸಾಧ್ಯವಿಲ್ಲ, ಕಲಬುರ್ಗಿಯವರು ಒಂದು ಬಗೆಯ ಅಧ್ಯಯನಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ವಿಶ್ವವಿದ್ಯಾಲಯದಲ್ಲಿದ್ದ ಮುಕ್ತ ಶೈಕ್ಷಣಿಕ ವಾತಾವರಣವನ್ನು ಬದಲಿಸುತ್ತಾರೆ ಎಂಬ ಪೂರ್ವಾಗ್ರಹಗಳು ಹಲವು ಅಧ್ಯಾಪಕರಲ್ಲಿದ್ದವು. ಜೊತೆಗೆ ಕಲಬುರ್ಗಿಯವರು ಅಧಿಕಾರ ವಹಿಸಿಕೊಂಡ ಆರಂಭದಲ್ಲಿ ನಡೆದ ಅನೇಕ ಸೆಮಿನಾರುಗಳಲ್ಲಿ ಈ ಪೂರ್ವಾಗ್ರಹಗಳೇ ಸತ್ಯ ಎನ್ನುವಂತೆ ಅವರು ಕೆಲ ಮಾತುಗಳನ್ನೂ ಆಡಿದರು. ಆದರೆ ಪೂರ್ವಾಗ್ರಹಗಳು ಬಹುಕಾಲ ನಿಲ್ಲಲಿಲ್ಲ, ಹಂತಹಂತವಾಗಿ ಕಲಬುರ್ಗಿಯವರ ಅಂತರಂಗ ನಿಚ್ಚಳವಾಗುತ್ತಾ ಹೋಯಿತು. ಅವರಲ್ಲಿದ್ದ ಅಪ್ಪಟ ಜಾತ್ಯತೀತ ನಿಲುವುಗಳು ನಮಗೆ ಗೋಚರವಾಗತೊಡಗಿದವು. ಕಲಬುರ್ಗಿಯವರು ಜಿಗುಟು ಗುಣ ಮತ್ತು ಜಟಿಲ ಶೈಕ್ಷಣಿಕ ನಿಲುವುಗಳಿಗೆ ಪ್ರಸಿದ್ಧರು ಎಂಬ ನಂಬಿಕೆ ಪ್ರಚಲಿತದಲ್ಲಿತ್ತು, ಆದರೆ ಅವರು ಅತ್ಯಂತ ನಮ್ಯ, ಮುಕ್ತ ಮನಸ್ಸಿನ ಮತ್ತು ಎಲ್ಲವನ್ನೂ ಒಳಗೊಳ್ಳುವ ವ್ಯಕ್ತಿತ್ವದವರಾಗಿದ್ದರು. ಯಾವುದೋ ಒಂದು ಸೆಮಿನಾರಿನಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ ಜುಂಜಪ್ಪನ ಹೆಸರಿನ ಶಬ್ದ ನಿಷ್ಪತ್ತಿಯನ್ನು ಜುಂಜ-ಜುಂಚ-ಚುಂಚ ಎಂದು ಒಡೆದು ಅದರಲ್ಲಿ ಅರ್ಥ ಕಂಡುಕೊಳ್ಳಲು ಪ್ರಯತ್ನಿಸಿದರು. ಹೀಗೆ ಅವರು ಸಂಶೋಧನೆಯಲ್ಲಿ ಕೆಲವು ತೀರ್ಮಾನಗಳಿಗೆ ಬರಲು ಶಬ್ದನಿಷ್ಪತ್ತಿಶಾಸ್ತ್ರದ ಮೊರೆ ಹೋಗುತ್ತಿದ್ದರು. ಆಗತಾನೇ ಕೆಲಸಕ್ಕೆ ಸೇರಿ ಉತ್ಸಾಹದಲ್ಲಿದ್ದ ನಾವು ಕೆಲವರು ಈ ಕ್ರಮವನ್ನು ತುಸು ಖಾರವಾಗಿಯೇ ಪ್ರಶ್ನಿಸಿಬಿಟ್ಟೆವು. ವೇದಿಕೆಯ ಮೇಲಿಯೇ ಕೆರಳಿದ ಕಲಬುರ್ಗಿಯವರು ನಮ್ಮನ್ನು ಜೋರು ಮಾಡಿ ಸುಮ್ಮನಾಗಿಸಿದ್ದರು. ಮರುದಿನ ಬೆಳಗ್ಗೆ ಕಲಬುರ್ಗಿ ಅವರಿಂದ ನಮಗೆ ಬುಲಾವ್. ತುಸು ಹೆದರಿಕೆಯಿಂದಲೇ ಅವರ ಕಚೇರಿ ತಲುಪಿ 'ರೂಢನಾಮಗಳನ್ನು ಶಬ್ದನಿಷ್ಪತ್ತಿಶಾಸ್ತ್ರದಿಂದ ಒಡೆದು ನೋಡಿದಾಗ ಅಲ್ಲಿ ಅರ್ಥಗಳು ಹೊಮ್ಮುವುದು ಕಷ್ಟ' ಎಂಬ ನಮ್ಮ ಅಭಿಪ್ರಾಯಗಳನ್ನು ಅವರಿಗೆ ಮನವರಿಕೆ ಮಾಡಿಕೊಟ್ಟೆವು. ಕಲಬುರ್ಗಿಯವರು ಎಷ್ಟು ಪ್ರಸನ್ನರಾದರೆಂದರೆ ಸರಿಸುಮಾರು ಅರ್ಧ ಗಂಟೆಗಳ ಕಾಲ ನಮ್ಮ ಜೊತೆ ಹರಟಿ, ಶಬ್ದನಿಷ್ಪತ್ತಿಶಾಸ್ತ್ರದ ಉಪಯುಕ್ತತೆ ಮತ್ತು ಅದರ ಸಾಧ್ಯತೆಗಳನ್ನು ನಮಗೆ ವಿವರಿಸಿದ್ದರು. ಜೊತೆಗೆ ಪ್ರೀತಿಯಿಂದ ಚಹ ಕುಡಿಸಿ ಕಳುಹಿಸಿದರು. ಕಲಬುರ್ಗಿಯವರು ಕನ್ನಡ ವಿಶ್ವವಿದ್ಯಾಲಯದಲ್ಲಿದ್ದಷ್ಟು ದಿನ ಕುಲಪತಿಗಳಾಗಿರದೆ ನಮ್ಮಂತಹ ಕಿರಿಯರಿಗೆ ಗುರುಗಳಾಗಿದ್ದರು. ಯಾವ ಮುಲಾಜು ಇಲ್ಲದೆ ನಮ್ಮನ್ನು ಏಕವಚನದಲ್ಲಿಯೇ ಸಂಬೋಧಿಸುತ್ತಿದ್ದರು. ಈ ಏಕವಚನ ಪ್ರಯೋಗದಲ್ಲಿ ಅವರ ಅಹಂ ಮತ್ತು ಗಣ್ಯತೆಗಳಾವೂ ಸೇರುತ್ತಿರಲಿಲ್ಲ, ಅವರಲ್ಲಿದ್ದ ಹಿರಿತನ ಮತ್ತು ಕಿರಿಯರ ಮೇಲಿದ್ದ ಅಪಾರ ಭರವಸೆಗಳು ಅವರಲ್ಲಿ ಬಹುವಚನ ಬಳಸುವ ಕೃತಕತೆಯನ್ನು ಇಲ್ಲವಾಗಿಸಿದ್ದವು. ಅವರು ತೀಕ್ಷ್ಣವಾಗಿ ನೋಡುತ್ತಲೇ, ಕಟುವಾಗಿ ಮಾತನಾಡುತ್ತಲೇ ಅಪಾರ ಪ್ರೀತಿಯನ್ನು ತೋರಿಸುತ್ತಿದ್ದರು. ಕಂಬಾರರು ಮಹತ್ವಾಕಾಂಕ್ಷೆಯಿಂದ ಕಟ್ಟಿದ ವಿಶ್ವವಿದ್ಯಾಲಯದೊಳಗೆ ಕಲಬುರ್ಗಿಯವರು ಒಂದು ಪ್ರಾಂಜಲ ಶೈಕ್ಷಣಿಕ ವಾತಾವರಣವನ್ನು ನಿರ್ಮಾಣ ಮಾಡಿದರು. ಬರೆಯಲು, ಚರ್ಚಿಸಲು ಹಿಂಜರಿಯುತ್ತಿದ್ದ ನನ್ನಂತಹ ಅನೇಕ ಕಿರಿಯರನ್ನು ಹುರಿದುಂಬಿಸಿದರು. ನಮ್ಮಲ್ಲಿಯ ಸಹಜ ಕೀಳರಿಮೆಗಳನ್ನು ಹೋಗಲಾಡಿಸಲು ವಿಶ್ವವಿದ್ಯಾಲಯದಲ್ಲಿನ ತರುಣ ಅಧ್ಯಾಪಕರನ್ನು ಬರೆಯುವಂತೆ ಮಾಡಿದರು. ನಾವು ಬರೆಯುತ್ತಿದ್ದ ಬರಹಗಳನ್ನು ಸ್ವತಃ ತಾವೇ ಓದಿ ತಿದ್ದುತ್ತಿದ್ದರು. ನನ್ನದೊಂದು ಪುಸ್ತಕ ಮುದ್ರಣಕ್ಕೆ ಹೋಗಬೇಕಿತ್ತು, ಅದು ನನ್ನ ಮೊದಲ ಪುಸ್ತಕ ಬೇರೆ. ಎರಡು ಸಲ ಅಕ್ಷರ ದೋಷಗಳನ್ನು ತಿದ್ದಿದ್ದರು ಇನ್ನೂ ದೋಷಗಳು ಉಳಿದಿದ್ದವು. ಕಲಬುರ್ಗಿಯವರ ಬಳಿ ಅಂತಿಮ ಒಪ್ಪಿಗೆಗಾಗಿ ನನ್ನ ಪುಸ್ತಕದ ನೆರಳಚ್ಚು ಪ್ರತಿಯನ್ನು ಕಳುಹಿಸಲಾಗಿತ್ತು, ಅಂದು ಕಲಬುರ್ಗಿಯವರಿಗೆ 102 ಡಿಗ್ರಿ ಜ್ವರ. ಸುಡುವ ಜ್ವರದಲ್ಲೂ ನನ್ನ 200 ಪುಟದ ಪುಸ್ತಕವನ್ನು ಓದಿ ಅಕ್ಷರ ದೋಷಗಳನ್ನು ಸರಿಪಡಿಸಿ 'ತುಂಬಾ ಚೆನ್ನಾಗಿ ಬರೆದಿದ್ದಿ, ಸಂಶೋಧಕನಾದವನು ಸದಾ ತನ್ನ ತಪ್ಪುಗಳನ್ನು ತಿದ್ದಿಕೊಂಡು ಹೋಗುವುದಕ್ಕೆ ಮುಕ್ತನಾಗಿರಬೇಕು' ಎಂದು ಹೇಳಿ ಬೆನ್ನು ತಟ್ಟಿ ಕಳುಹಿಸಿದರು. ಆ ಪುಸ್ತಕಕ್ಕೆ ಜಾನಪದ ಅಕಾಡೆಮಿಯ ಪ್ರಶಸ್ತಿ ಸಿಕ್ಕಾಗ ಮೊದಲು ಕರೆ ಮಾಡಿ ಅಭಿನಂದಿಸಿದ್ದು ಕಲಬುರ್ಗಿಯವರೆ.

ನಾನು ಅವರ ನೇರ ಶಿಷ್ಯನಲ್ಲ, ಸೈದ್ಧಾಂತಿಕವಾಗಿಯೂ ಅವರಿಗಿಂತ ಬೇರೆಯದೇ ನಿಲುವುಗಳನ್ನು ಹೊಂದಿದ್ದವನು. ಅವರಲ್ಲಿದ್ದ ಶಿಸ್ತುಬದ್ಧ ಅಧ್ಯಯನದ ಜಿಗುಟು ವ್ಯಕ್ತಿತ್ವವೂ ನಮ್ಮಂತವರಲ್ಲಿರಲಿಲ್ಲ. ಆದರೆ ಕಲಬುರ್ಗಿಯವರಲ್ಲಿದ್ದ ತಾಯ್ತನ ನಮ್ಮಂತಹ ಅನೇಕರನ್ನು ಅವರ ಶಿಷ್ಯರನ್ನಾಗಿಸಿತ್ತು. ನಾವು ನಂಬಿಕೊಂಡು ಬಂದ ರಾಜಕೀಯ ಸಿದ್ಧಾಂತವನ್ನು ಅವರೆಂದೂ ಪ್ರಶ್ನಿಸಲಿಲ್ಲ, 'ಕನ್ನಡದಲ್ಲಿ ಸಮಾಜವಾದಿಗಳು ಮತ್ತು ಮಾರ್ಕ್ಸ್‌ವಾದಿಗಳು ತುಂಬಾ ಗಟ್ಟಿ ಕೆಲ್ಸಾ ಮಾಡ್ಯಾರ. ಆದರೆ ಸಮಸ್ಯೆ ಅಂದ್ರ ಅವರು ಬಾಪ್ಪಾ ಹಿಡ್ದು ಬೀದಿಗಿಳೀತಾರ' ಎಂದು ಅರ್ಧ ಪ್ರೀತಿ ಮತ್ತು ಅರ್ಧ ಆಕ್ಷೇಪಗಳ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಕಲಬುರ್ಗಿಯವರು ತಮ್ಮ ವಿದ್ಯಾರ್ಥಿದೆಸೆಯಿಂದಲೂ ಆಯ್ದುಕೊಂಡ ಹಾದಿ ಕಠಿಣವಾದದ್ದು. ಪ್ರಾಚೀನ ಪಠ್ಯಗಳ ಸಂಪಾದನೆ ಮತ್ತು ವಿಶ್ಲೇಷಣೆ, ಶಾಸ್ತ್ರಸಾಹಿತ್ಯ ಕುರಿತ ವಿಮರ್ಶೆ, ಸಂಶೋಧನಾಶಾಸ್ತ್ರ ಕುರಿತ ಬರಹಗಳೆಲ್ಲ ಹೆಚ್ಚು ಶ್ರಮ ಬೇಡುವ ಶೈಕ್ಷಣಿಕ ಚಟುವಟಿಕೆಗಳು. ಶಾಸನಗಳ ಹುಡುಕಾಟ, ಅವುಗಳ ಓದುವಿಕೆ, ಆಕರ ಗ್ರಂಥಗಳ ನಿರ್ಮಾಣ ಕಾರ್ಯ ಮತ್ತು ವಿಶ್ವಕೋಶಗಳ ರಚನೆಯ ಕೆಲಸಗಳೆಲ್ಲ ತುಂಬ ಶ್ರಮದಾಯಕ ಕೆಲಸಗಳು. ಕಲಬುರ್ಗಿಯವರಿಗಿದ್ದ ಇನ್ನೊಂದು ಆಸೆ, ಕನ್ನಡದ್ದೇ ಆದ ಸಾಹಿತ್ಯ ಮೀಮಾಂಸೆಯನ್ನು ಬೆಳೆಸುವುದಾಗಿತ್ತು. ಕನ್ನಡ ವಿಶ್ವವಿದ್ಯಾಲಯದಲ್ಲಿ ಅದನ್ನು ಆಗು ಮಾಡಲು ಅವರು ಶ್ರಮಿಸಿದರು. ಕನ್ನಡದ ಭಾಷೆಯೊಳಗೆ ಸ್ವತಂತ್ರ ಜ್ಞಾನ ಧಾರೆಗಳಿವೆ ಎಂಬುದನ್ನು ಬಲವಾಗಿ ಪ್ರತಿಪಾದಿಸಲು ಅವರು ಸದಾ ಹೆಣಗುತ್ತಿದ್ದರು.

ಕಲಬುರ್ಗಿಯವರು ಓರಿಯಂಟಲಿಸ್ಟರನ್ನು ಅನುಕರಿಸಿದರು ಎಂಬ ಟೀಕೆ ಇದೆ. ಆದರೆ ಕಲಬುರ್ಗಿಯವರ ಶೈಕ್ಷಣಿಕ ವಿಧಾನ ಮೇಲ್ನೋಟಕ್ಕೆ ಓರಿಯಂಟಲಿಸ್ಟ್‌ರ ಅಧ್ಯಯನದ ಕ್ರಮದಂತೆ ಕಾಣಬಹುದು. ಆದರೆ ಸೈದ್ಧಾಂತಿಕವಾಗಿ ಕಲಬುರ್ಗಿಯವರು ಓರಿಯಂಟಲಿಸ್ಟರನ್ನು ಮೀರಿದರು. ಧಾರವಾಡ ಸೀಮೆಯ ಇಬ್ಬರು ಬಹುದೊಡ್ಡ ವಿದ್ವಾಂಸರು ಕನ್ನಡ ಸಂಶೋಧನಾ ಕ್ಷೇತ್ರದ ವ್ಯಾಪ್ತಿಯನ್ನು ಹಿಗ್ಗಿಸಿದರು. ಅದು ಒಬ್ಬರು ಶಂಬಾ ಜೋಷಿ, ಇನ್ನೊಬ್ಬರು ಡಾ. ಎಂ ಎಂ ಕಲಬುರ್ಗಿ. ಇಬ್ಬರೂ ಭಿನ್ನ ವ್ಯಕ್ತಿತ್ವದವರಾದರೂ ತುಳಿದ ಹಾದಿ ಮಾತ್ರ ಒಂದೇ. ಇವರಿಬ್ಬರು ನಮ್ಮ ಪರಂಪರೆಯ ಅತ್ಯಂತ ಅಲಕ್ಷಿತ ವಿಷಯಗಳನ್ನು ಮಹತ್ವದ ಚರ್ಚೆಗಳ ಮುಂಚೂಣಿಗೆ ತಂದು ನಿಲ್ಲಿಸಿದರು. ಶಂಬಾ ಯೂರೋಪಿನ ಆಧುನಿಕ ಚಿಂತಕರ ಭಿನ್ನ ಶೈಕ್ಷಣಿಕ ವಿಧಾನಗಳನ್ನು ಅರ್ಥೈಸಿ ತಮ್ಮದೇ ಆದ ವೈಧಾನಿಕತೆಯನ್ನು ರೂಪಿಸಿಕೊಂಡರು. ಕಲಬುರ್ಗಿಯವರು ತಮ್ಮ ಶ್ರಮ ಸಂಸ್ಕೃತಿಯ ಸಮಷ್ಟಿ ಪ್ರಜ್ಞೆಯಲ್ಲಿಯೇ ತನ್ನ ಸಮಕಾಲಿನರಿಗಿಂತ ಭಿನ್ನರಾಗಿ ಬರವಣಿಗೆ ಮಾಡಿದರು. ಕಲಬುರ್ಗಿಯವರನ್ನು ಪರಂಪರೆಗೆ ಅಂಟಿಕೊಂಡ ಬುದ್ಧಿಜೀವಿ ಎಂದು ನೋಡಲಾಗುತ್ತದೆ. ಆದರೆ ಕಲಬುರ್ಗಿ ತಮ್ಮ ಚಿಂತನೆಗಳಿಗೆ ಬಸವಣ್ಣನನ್ನು ಭಿತ್ತಿಯನ್ನಾಗಿಸಿಕೊಂಡ ಕಾರಣಕ್ಕಾಗಿ ಅವರಲ್ಲೊಬ್ಬ ಬಂಡುಕೋರ ಸದಾ ಜಾಗೃತನಾಗಿರುತ್ತಿದ್ದ. ಮಾರ್ಗ ಪುಸ್ತಕ ಮಾಲಿಕೆಯ ಮೊದಲ ಸಂಪುಟ ಪ್ರಕಟವಾದ ಮೇಲೆ ಉಂಟಾದ ವಿವಾದಗಳಿಂದ ಕಲಬು... ಯವರು ವಿಚಲಿತರಾದಂತೆ ಕಾಣುವುದಿಲ್ಲ, ಅನ... ಪ್ರಕಟವಾದ ಅವರ ಬರವಣಿಗೆಯಲ್ಲಿ ಮತ್ತು ಹೇಳಬೇ... ದ್ದನ್ನು ಹೇಳುವಲ್ಲಿ ಎಲ್ಲೂ ಅವರು ಸಂದಿಗ್ಧಕ್ಕೆ ಒಳಗಾದ... ಕಾಣುವುದಿಲ್ಲ, ಪರಂಪರೆಯನ್ನು ಆರಾಧಿಸುತ್ತಲೇ ಅ... ಗುಮಾಸ್ತಿಕೆಯನ್ನು ಮಾಡುತ್ತಿದ್ದ ತನ್ನ ಸಮಕಾಲೀನ... ಕಲಬುರ್ಗಿಯವರು ಉತ್ತರಗಳನ್ನು ನೀಡುತ್ತಲೆ ತ... ಹೇಳಬೇಕಾದದ್ದನ್ನು ಹೇಳೀ ಹೇಳುತ್ತಿದ್ದರು. ಇತ್ತೀ... ಕೊಪ್ಪಳದಲ್ಲಿ ನಡೆದ ದಲಿತ ಸಾಹಿತ್ಯ ಸಮ್ಮೇಳನ... ಅವರು ಮಾಡಿದ ಭಾಷಣ ಸಭಿಕರನ್ನು ದಿಙ್ಮೂಢರನ್ನಾಗಿ... ಅವರು ಅಷ್ಟೊಂದು ಪ್ರಖರವಾಗಿ ವೇದಿಕೆಯ ಮೇ... ಮಾತನಾಡಿದ್ದನ್ನು ನಾನು ಕೇಳಿರಲಿಲ್ಲ, ಭಾರತದ ಜ... ವ್ಯವಸ್ಥೆ ಕ್ರೂರ ಅಸಮಾನತೆ ಮುಂತಾದ ವಿಷಯ... ಕುರಿತು ಅವರು ಅಂದು ಮಾತನಾಡಿದ್ದನ್ನು ನಾನು ಎಂ... ಮರೆಯಲಾರೆ. ಒಂದುವರೆ ದಶಕಗಳಿಂದ ಅವರ ಬ... ಗಳನ್ನು ಓದಿದ್ದಲ್ಲದೆ ವ್ಯಕ್ತಿಯಾಗಿ ಅವರನ್ನು ಗಮನಿಸಿದ್ದ... ಅವರಲ್ಲಿ ಸಾಮಾಜಿಕ ಬದಲಾವಣೆಗೆ ಸದಾ ತಹತಹಿಸು... ಒಬ್ಬ ಆಕ್ಟಿವಿಸ್ಟ್ ಜಾಗೃತನಾಗಿರುತ್ತಿದ್ದ. ಲೇಖಕನೊಬ್ಬ... ಸಮಕಾಲೀನ ಬದುಕಿಗೆ ತೀವ್ರವಾಗಿ ಸ್ಪಂದಿಸಿದಾಗ ಮ... ಈ ಬಗೆಯ ಆಕ್ಟಿವಿಸ್ಟ್ ಧೋರಣೆ ಮೈಗೂಡುತ್ತದೆ. ... ಹೇಳುವ ಮತ್ತು ಅದನ್ನು ನಿಷ್ಠೂರವಾಗಿ ಹೇಳುವ ಕ್ರ... ಪ್ರಖರವಾದಷ್ಟು ಸಮಾಜದ ಮೌಢ್ಯಗಳನ್ನು ತಿದ್ದಬಹು... ಎಂಬ ವಾದಕ್ಕೆ ಕಲಬುರ್ಗಿ ಅಂಟಿಕೊಂಡಿದ್ದರು. ಬಸವ... ಕ್ರಾಂತಿಕಾರಿ ಆಶಯಗಳನ್ನು ಮೈಗೂಡಿಸಿಕೊಂಡೇ ಮಠ... ವಿವಿಧ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಸಾಮಾ... ಬದಲಾವಣೆಗೆ ಮಠಗಳು, ಚರ್ಚುಗಳು, ಸರಕಾರ ಎಲ್ಲ... ಬಳಸಿಕೊಳ್ಳಬೇಕೆಂಬ ಆಶಯ ಅವರಲ್ಲಿ ಗಟ್ಟಿಯಾಗಿ...

ಕಲಬುರ್ಗಿಯವರ ಶೈಕ್ಷಣಿಕ ವಿಧಾನ ಚರಿತ್ರೆಯ... ಪುನರ್ ರಚಿಸುವ ಆಶಯದ್ದಲ್ಲ, ಶಂಬಾ ಅವ... ಹೀಗೆಯೇ ನಾವು ಅರ್ಥೈಸುತ್ತಾ ಬಂದಿದ್ದೇವೆ. ಅ... ಇಬ್ಬರಲ್ಲೂ ಒಂದು ಬಗೆಯ ಚರಿತ್ರೆ ಭಂಜನೆ... ಬಂಡುಕೋರ ಗುಣವಿದೆ. ಇದಕ್ಕೆ ಕಲಬುರ್ಗಿಯ... ಬರವಣಿಗೆ ಮಾಡಲು ಆಯ್ದುಕೊಂಡ ವಿಷಯಗಳು ವ... ಅವುಗಳನ್ನು ವಿಶ್ಲೇಷಿಸಲು ಆಯ್ದುಕೊಂಡ ವಿಧಾನ... ಸಾಕ್ಷ್ಯ ಒದಗಿಸುತ್ತವೆ. ವೀರಗಲ್ಲು ಮಾಸ್ತಿಗಲ್ಲು, ಸತಿ ಪ... ಕೊಡೇಕಲ್ಲು ಪರಂಪರೆ, ತಿಂತಿಣಿ ಮೋನಪ್ಪ ಆದಿಲ್‌ಶ... ಸಾಹಿತ್ಯ ಮುಂತಾದ ಅಲಕ್ಷಿತ ವಿಷಯಗಳ ಕುರಿತು ಅ... ಬರೆಯುವಾಗ ಅಲ್ಲಿ ಚರಿತ್ರೆಯ ಪುನರ್ ರಚನೆಗ... ನಿರ್ಲಕ್ಷಿಸಲ್ಪಟ್ಟ ಸಂಗತಿಗಳ ಮೂಲಕ ಚರಿತ್ರೆಯ... ಮರುರೂಪಿಸುವ ತಹತಹ ಅವರಲ್ಲಿ ಎದ್ದುಕಾಣು... ನಮ್ಮ ಸಾಮಾಜಿಕ ಚರಿತ್ರೆಯಲ್ಲಿ ದಾಖಲಾಗಬೇಕಾದ ಶ್ರ... ಸಮುದಾಯಗಳ ಅಂತಸ್ಥ ಜಗತ್ತನ್ನು ಅನಾವರಣಗೊಳಿ... ಕಲಬುರ್ಗಿ ಹೆಣಗಿದರು. ಕಲಬುರ್ಗಿಯವರ ಇನ್ನೊ... ಮುಖ್ಯವಾದ ಗುಣ ಎಂದರೆ ಅವರು ಎಂ... ಕೋಮುವಾದಿಯಾಗಿರಲಿಲ್ಲ ಎಂಬುದು. ಮಾರ್ಗ ಸಂ... ಮಾಲಿಕೆಯ ಆರಂಭದ ಬರಹಗಳಿಂದ ಇತ್ತೀಚಿನ... ಅವರ ಎಲ್ಲಾ ಬರವಣಿಗೆಯಲ್ಲಿ ಅವರನ್ನು ಕೈಹಿಡಿ... ನಡೆಸಿರುವುದು ಜನತಾಂತ್ರಿಕ, ಜಾತ್ಯತೀತ ಬಸವ ... ಈ ಕಾರಣದಿಂದಾಗಿ ಕಲಬುರ್ಗಿಯವರು ಪರಂಪರೆಯ... ಜನಾಂಗ ದ್ವೇಷಕ್ಕೆ ಬಳಸುವ ಕೋಮುವಾದಿ ವಿದ್ವಾಂಸರಿ... ಭಿನ್ನವಾಗಿಯೇ ಕಾಣುತ್ತಾರೆ. ಕನ್ನಡ ವಿಶ್ವವಿದ್ಯಾಲಯ... ಇದ್ದಷ್ಟು ದಿನ ಇಲ್ಲಿ ನಡೆಯುತ್ತಿದ್ದ ಅಲಕ್ಷಿತ ವಿಷಯ... ಅಧ್ಯಯನಗಳಿಗೆ ಕಲಬುರ್ಗಿಯವರು ಎಂದೂ ಪ್ರೋತ್ಸಾ... ಕೊಡುತ್ತಾ ಬಂದರು. ಜೊತೆಗೆ ನಾವು ನಿರ್ವಹಿಸು... ಹಲವು ಯೋಜನೆಗಳಿಗೆ ಪೂರಕವಾಗಿ ಪ್ರಾಚೀನ ಸಾ... ಮತ್ತು ಶಾಸ್ತ್ರಗ್ರಂಥಗಳ ಉಲ್ಲೇಖಗಳನ್ನು ನೆನಪಿಸಿ ಅವುಗ... ಓದುವಂತೆ ಮಾಡುತ್ತಿದ್ದರು. ಯಾವುದೋ ಶಾಸ... ಉಲ್ಲೇಖಗಳನ್ನು ನೆನಪಿಸಿ ಅದನ್ನು ಗಮನಿಸ... ಹೇಳುತ್ತಿದ್ದರು. ಅವರು ಕುಲಪತಿಯಾಗಿ ವಿಶ್ವವಿದ್ಯಾ... ದಲ್ಲಿದ್ದ ಸಂದರ್ಭದಲ್ಲಿ ನಾವು ಬಹುತೇಕರು ಇ... ಪ್ಲಸ್ ವಯಸ್ಸಿನವರು. ನಮ್ಮನ್ನು ಅವರು ತಮ್ಮ ಪ್ರೀ... ಶಿಷ್ಯರನ್ನಾಗಿಯೇ ಸ್ವೀಕರಿಸಿದ್ದರು. ನಮ್ಮನ್ನು ಬಯ... ತಿದ್ದುತ್ತಾ ತಾವೇ ಹಲವು ಯೋಜನೆಗಳ ಶೀರ್ಷಿಕೆಗ... ನೀಡಿ ಬರೆಯಲು ಪ್ರೇರೇಪಿಸುತ್ತಿದ್ದರು. ಅವರಿಗೆ ಗ... ಪ್ರತಿಗಳೆಂದು ಬರುತ್ತಿದ್ದ ಪುಸ್ತಕಗಳಲ್ಲಿ ನಮ್ಮ ... ವಿಷಯಗಳಿಗೆ ಸಂಬಂಧಿಸಿದ್ದರೆ ಆ ಪುಸ್ತಕಗಳನ್ನು ನ... ತಲುಪಿಸಿ ಓದಲು ಹೇಳುತ್ತಿದ್ದರು. ಅವರು ನಿವೃತ್ತ... ಮೇಲೂ ಹೀಗೆ ನಮಗೆ ಸಂಬಂಧಿಸಿದ ಪುಸ್ತಕಗ... ಕಲಬುರ್ಗಿಯವರು ಯಾರ ಮೂಲಕವಾದರೂ ನ... ಓದಲು ತಲುಪಿಸುತ್ತಿದ್ದರು. ಪ್ರಕಟವಾದ ನಮ್ಮ ಪುಸ್ತಕ... ಓದಿ 'ನೋಡು ಎಪ್ಪತ್ತೈದನೇ ಪುಟದ ಎಂಟನೇ ಸಾ... ಅಕ್ಷರ ದೋಷ ಅದ. ಸರಿಯಾಗಿ ಪ್ರೋಫ್ ನೋ... ಬರಲ್ಲೇನು ನಿನಗ' ಎಂದು ಬೈಸಿಕೊಂಡ ಹ... ಸಂದರ್ಭಗಳಿವೆ. ಯಾವುದೊ ವಿಷಯದ ಕುರಿತು ... ಬರವಣಿಗೆ ಮಾಡಿದರೂ ಕಲಬುರ್ಗಿಯವರು ತಮ್ಮ ಬ...

ಕಲಬುರ್ಗಿಯವರ ಕೊಲೆ ಎಂದರೆ


ಮಾನವೀಯತೆಯ ಕೊಲೆ...

ವಾಕ್‌ಸ್ವಾತಂತ್ರ್ಯದ ಕೊಲೆ...

ಪ್ರಜಾಪ್ರಭುತ್ವದ ಕೊಲೆ...

ನಾಗರೀಕತೆಯ ಕೊಲೆ...

ವೈಚಾರಿಕತೆಯ ಕೊಲೆ.



ಕಲಬುರ್ಗಿಯವರನ್ನು ಕೊಂದಿರಬಹುದು

ಅವರ ವಿಚಾರಗಳನ್ನು ಕೊಲ್ಲಲಾಗದು

...ವದಿಂದ ಹೊಸ ವಿಷಯ ಹೆಕ್ಕಿ ನಮ್ಮ ...ಯುತ್ತಿದ್ದರು. ಹಲವು ಸಲ ಅವರನ್ನು ಭೇಟಿ ಮಾಡಿದಾಗ ...ಸ ವಿಷಯಗಳ ಕುರಿತು ಚರ್ಚಿಸಿ ಆ ವಿಷಯದ ...ತೆಯನ್ನು ಹಿಗ್ಗಿಸುತ್ತಿದ್ದರು. ಎಷ್ಟು ಹಂಚಿದರು ಅವರ ...ಜ್ಞಾನ ಕಣಜ ಖಾಲಿಯಾಗುವಂತದ್ದಾಗಿರಲಿಲ್ಲ. ಯಾವತ್ತೂ ...ಸುತ್ತ ಒಂದು ಬೌದ್ಧಿಕ ಸಮುದಾಯವನ್ನು ಕಟ್ಟುವ ...ವನ್ನು ಕಲಬುರ್ಗಿಯವರು ಮಾಡುತ್ತಲೇ ಇದ್ದರು. ...ನನಗಂತು ಅವರ ಸಂಪರ್ಕ ಮತ್ತು ಸಲಹೆಗಳು ...ಕಾಲಕ್ಕೆ ಲಭಿಸುತ್ತಿದ್ದವು. ಇತ್ತೀಚೆಗೆ ನಾನು ವಿಭಾಗದಿಂದ ...ತಾಂಗಕ್ಕೆ ಉಪಕುಲಸಚಿವನಾಗಿ ಹೋದಾಗ ಒಂದು ...ಕ್ಷ ಅವರ ಫೋನ್ ಕರೆ ಬಂತು 'ಓದಕ್ ಬರಿಯಾಕ್ ...ಯೋ ಅಲ್ಲಿ ಗೌಡ್ಕಿ ಮಾಡಾಕ್ ಬಂದಿಯೋ, ಓದಾದ್ ... ಅಲ್ಲಿ ಗೌಡ್ಕಿ ಮಾಡಾಕ್ ಹತ್ತಿಯೇನ್ ನೀನು. ...ಗಕ್ಕೆ ವಾಪಾಸ್ಸು ಹೋಗು ನೀನು' ಎಂದು ಫೋನ್ ... ಬಿಟ್ಟರು. ನಾನು ಒಂದು ಕ್ಷಣ ಮಂಕಾಗಿ ಕುಳಿತೆ. ಮತ್ತೆ ಅವರದ್ದೇ ಫೋನ್ ಬಂತು 'ಬೇಜಾರಾದೇನು, ... ಓದು ಬರಹ ಮಾಡಾಕ್ ಬಂದಾವ, ಅಲ್ಲಿ ಫೈಲ್ ...ತ್ತ ಕೊತ್ರಾ ನಿನ್ನ ಭವಿಷ್ಯೇನು? ನಿನಗಿಷ್ಟ ಇದ್ರ ಅಲ್ಲಿದ್ದೂ ... ಮಾಡು' ಎಂದು ಸಮಾಧಾನಿಸಿದರು. ಇತ್ತೀಚೆಗೆ ಹೊರತಂದ 'ಬುಡಕಟ್ಟು ಚಿತ್ರ ಸಂಪುಟ' ಪುಸ್ತಕ ...ಡ ತುಂಬಾ ಖುಷಿಯಾಗಿದ್ದರು. 'ತುಂಬಾ ಗಟ್ಟಿ ...ಮಾಡೀರಿ. ಹಿಂಗ ಗಟ್ಟಿ ಕೆಲ್ಸ ಮಾಡಬೇಕು. ಇನ್ನೂ ... ಬರೆಯೊದು ಬಾಳ ಅದ' ಅಂತ ಮೆಚ್ಚುಗೆ ...ಡಿಸಿದ್ದರು. ಕಳೆದ ವರ್ಷ ನನ್ನ ತಂದೆ ತೀರಿಕೊಂಡಾಗ ...ಮಂಕಾಗಿದ್ದ ನನ್ನನ್ನು ಅವರು ಹುರಿದುಂಬಿಸಿದ್ದನ್ನು ... ಎಂದಿಗೂ ಮರೆಯಲಾರೆ. ಯಾರಿಂದಲೋ ವಿಷಯ ... ಅವರು ನನಗೆ ಧೈರ್ಯ ಹೇಳಿದರು. 'ನಿಮ್ಮ ...ಯವರ ಋಣ ತೀರಿಸಬೇಕೆಂದ್ರೆ ನೀನು ಇನ್ನೂ ...ವಾಗಿ ಓದು ಬರಹ ಮಾಡು' ಎಂದು ಪ್ರೇರೇಪಿಸಿದರು. ...ಕವಾಗಿ ಮಾತ್ರವಲ್ಲದೆ ನಮ್ಮ ನಮ್ಮ ವೈಯಕ್ತಿಕ ...ಯುಗಳನ್ನು ಅವರು ತಿಳಿದುಕೊಂಡು ನನ್ನಂತವರಿಗೆ ...ಬುರ್ಗಿಯವರು ಪ್ರೇರಣೆ ನೀಡಿದ್ದಾರೆ.

...ಕಲಬುರ್ಗಿ ಅವರು ಸದಾ ವಿವಾದಾತ್ಮಕ ಹೇಳಿಕೆ ನೀಡಿ ...ಗೆ ಸಿಲುಕುತ್ತಿದ್ದರು' ಎಂದು ಹಲವರು ...ಪ್ರಾಯಿಸುತ್ತಿದ್ದಾರೆ. ಮುಕ್ಕಾಲು ಶತಮಾನ ಕಾಲ ನಿರಂತರ ...ಬರಹ ಮಾಡಿದ, ನಾಡಿನ ಉದ್ದಗಲಕ್ಕೂ ತಿರುಗಾಡಿ ... ಬದುಕನ್ನು ಅರ್ಥೈಸಿಕೊಂಡ ಕಲಬುರ್ಗಿಯವರು ವಾಸ್ತವ ...ಗಳನ್ನು ಎಲ್ಲರ ಮುಂದಿಡುತ್ತಿದ್ದರು. ಆ ಸತ್ಯಗಳನ್ನು ... ಮೂಲಭೂತವಾದಿಗಳು ವಿವಾದಾತ್ಮಕ ಗೊಳಿಸುತ್ತಿದ್ದರು. ...ನ್ನು ಸುಳ್ಳಾಗಿಸುವ, ಸುಳ್ಳುಗಳನ್ನೆಲ್ಲಾ ಸತ್ಯವಾಗಿಸುವ ಗೋಬೆಲ್ಸ್ ...ತಿಯವರು ಕನ್ನಡದ ಪ್ರಮುಖ ಲೇಖಕರನ್ನು ...ಗೊಳಿಸಿದ್ದಾರೆ. ಅದರಲ್ಲೂ ಕೆಲವು ಮಾಧ್ಯಮಗಳು ಹುಟ್ಟು...ವ ಜನಾಭಿಪ್ರಾಯ ಗಳಂತೂ ಈ ದೇಶದಲ್ಲಿ ಫ್ಯಾಸಿಸ್ಟ್...ನ್ನು ಹೊಸಬಗೆ ಯಲ್ಲಿ ರೂಪಿಸುವ ಪ್ರಯತ್ನಗಳಂತೆ ...ತ್ತವೆ. ಕಲಬುರ್ಗಿಯವರ ಮೆದುಳಿಗೆ ಕಾಡತೂಸು ನುಗ್ಗಿಸಿ ... ನಿಷ್ಕ್ರಿಯಗೊಳಿಸಿರಬಹುದು. ಆದರೆ ಕಲಬುರ್ಗಿಯವರು ... ಸಾವಿರಾರು ಶಿಷ್ಯರ ಮೆದುಳುಗಳಲ್ಲಿ ಹಚ್ಚಿದ ಹಣತೆಯನ್ನು ...ೂ ಆರಿಸಲಾರರು. ಅವರಿಂದ ಪ್ರೇರಣೆ ಪಡೆದ ಎಲ್ಲಾ ...ಕರು ಅವರ 'ನಿಜ ಬಸವ ಪ್ರಜ್ಞೆಯನ್ನು ವಿಸ್ತರಿಸಿ ಜನ ...ರಾಟಗಳಿಗೆ ಪ್ರೇರಣೆ ನೀಡಿದರೆ, ಅಲ್ಲೆಲ್ಲಾ ಕಲಬುರ್ಗಿಯವರು ...ರುತ್ತಾರೆ. 'ಬಂದೂಕುಗಳು ಕೊಲ್ಲುವುದು ಭೌತಿಕ ...ವನ್ನು ಮಾತ್ರ, ಪ್ರಖರ ವಿಚಾರಗಳನ್ನಲ್ಲ'.

...ಮಾರ್ಗ ಸಂಪುಟ ಮೂರರಲ್ಲಿ (ಪುಟ 501) ...ಣ್ಣನ 'ಲಿಂಗವಂತರು ತಾವು ಅಂಜಲೇಕೆ' ಎಂಬ ...ವನ್ನು ಕಲಬುರ್ಗಿಯವರು ಹೀಗೆ ವಿಶ್ಲೇಷಿಸಿದ್ದಾರೆ. ...ಣ್ಣನವರದು ಜೋಡು ಜವಾಬ್ದಾರಿಯ ಆಂದೋಲನ. ... ಒಂದು ಕೈಯಿಂದ ಏರಿ ಬರುತ್ತಲಿದ್ದ ಪ್ರತಿಗಾಮಿ ... ತಡೆಯುವುದು. ಇನ್ನೊಂದು ಕೈಯಿಂದ ಉರುಳಿ ...ತ್ತಿದ್ದ ಪತಿತರನ್ನು ಮೇಲೆತ್ತುವುದು, ಅವರಿಗೆ ಧೈರ್ಯ ...ವುದು. 'ಹೀಗಾಗಿ ಲಿಂಗವಂತರು ತಾವು ಅಂಜ...' ಎಂಬ ಸಾರ್ವತ್ರಿಕ ಸಂದೇಶ ರೂಪದ ಈ ವಚನ ... ಅನುಯಾಯಿಗಳಿಗೆ ಧೈರ್ಯ, ಉತ್ಸಾಹ ತುಂಬುವ ...ಕಾಲೀನ ಸಂದೇಶವೂ ಆಗಿದೆ. ಸಾವಿರ ಸಾವಿರ ...ಗಳಿಂದ ಪ್ರಭುವರ್ಗ, ಪುರೋಹಿತವರ್ಗ ...ವಾದವರ ಸಿಂಹ ಸ್ವಪ್ನದಲ್ಲಿ ಸತ್ತು ಬದುಕುತ್ತಲಿದ್ದ ...ಗೆ, ಈ ಪ್ರತಿಗಾಮಿಗಳನ್ನು ಎದುರಿಸಲು, ಅದೂ ...ವಾಗಿ ಎದುರಿಸಲು ಮೊದಲು ಬೇಕಾದುದು ಧೈರ್ಯ, ... ವಿಕಸ. ಅದು ಬಸವಣ್ಣನವರಿಗೆ ಗೊತ್ತು, ...ದರಿಂದಲೇ ಇಂಥ ಮಾತುಗಳನ್ನಾಡಿ ಪರಿಸರವನ್ನು ...ಸಿಕ ಅಣಿ ಮಾಡುತ್ತಾರೆ.'

...ವಚನ ಈ ವಚನ ಕಲಬುರ್ಗಿರವರ ಚಿಂತನೆಯ ... ಪ್ರಕ್ಕೆ ಬಸವಣ್ಣ ಮತ್ತು ಕಲಬುರ್ಗಿ ತರಹದ ... ಭೌತಿಕವಾಗಿ ತಮ್ಮನ್ನು ಇಲ್ಲವಾಗಿಸಿದ ಫ್ಯಾಸಿಸ್ಟರಿಗೆ ...ಕಿರೋಧವನ್ನೊಡ್ಡುವ ಸಮುದಾಯವನ್ನು ...ಲೇ ಇರುತ್ತಾರೆ. ಹಾಗಾಗಿ ತಲ್ಲಣಗೊಂಡಿರುವ ...ರು ...

■ ಡಾ. ಎ.ಎಸ್. ಪ್ರಭಾಕರ,
...ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪೂರ್ವಭಾಪಿಗೆ ಶರಣು..

ಕವಿರಾಜಮಾರ್ಗಕಾರ ಬಣ್ಣಿಸಿದ ಕಾಲದ ಕನ್ನಡ ಜನಪದದಲ್ಲಿ ನ್ಯಾಯಯುತ ಹಕ್ಕು ಪ್ರತಿಪಾದಿಸಿದವರ ಕೈ ಕಡಿಯುವುದು, ಪ್ರತಿಭಟಿಸುವವರ ಹತ್ಯೆಗೈಯುವುದು, ಪ್ರಶ್ನಿಸುವವರ ಮುಖಕ್ಕೆ ಮಸಿ, ಸಗಣಿ ಬಳಿಯುವುದು ಇತ್ತೋ ಇಲ್ಲವೋ, ಆದರೆ ಈಗ ಕನ್ನಡ ನುಡಿಯಂತೇ ಕನ್ನಡ ಜನಪದವೂ ಆತಂಕ, ಅಭದ್ರತೆಯನ್ನೆದುರಿಸುತ್ತಿದೆ. ಕವಿರಾಜಮಾರ್ಗಕಾರನ ಕಾಲ ಕುರಿತು ಅಧ್ಯಯನ ನಡೆಸಿದ ಕನ್ನಡ ದನಿಯೊಂದನ್ನು ಬಲವಂತದ ಮೌನಕ್ಕೆ ದೂಡಲಾಗಿದೆ.

ಹೌದು. 77 ವರ್ಷದ ಎಂ. ಎಂ. ಕಲಬುರ್ಗಿಯವರನ್ನು ಧಾರವಾಡದಲ್ಲಿ ಆಗಸ್ಟ್ 30ರಂದು ಗುಂಡಿಟ್ಟು ಕೊಲ್ಲಲಾಯಿತು. ಹಿಂದೂ-ಲಿಂಗಾಯತ-ವೀರಶೈವ ಧರ್ಮ ಕುರಿತು ಕೆಲವು ಅಪ್ರಿಯ ವಾದಗಳ ಕಟ್ಟಾ ಪ್ರತಿಪಾದಕರಾಗಿದ್ದ; ಬಸವಣ್ಣನ ಕೊಲೆಗಾರರೆಂದು ಮಠ-ಗುರುಗಳನ್ನು ಟೀಕಿಸುತ್ತಿದ್ದ; ಕನ್ನಡ ನುಡಿಯ, ಜನ ಬದುಕಿನ ದೇಸೀ ಆಕರಗಳನ್ನು ಹುಡುಕಿ, ಅರ್ಥೈಸಿ, ವಿಶ್ಲೇಷಣೆಗೆ ಒಡ್ಡುತ್ತಿದ್ದ ಸತ್ಯನಿಷ್ಠ ಸಂಶೋಧಕನ ಬದುಕನ್ನು ಅನುಚಿತ ರೀತಿಯಲ್ಲಿ ಕೊನೆಗೊಳಿಸಲಾಯಿತು. ಗುರುವೇ ಎಂದು ಒಳಬಂದವರೇ ಗುಂಡು ಹಾಕಿ ಹೋದರು. ಇದುವರೆಗೆ ಅಲ್ಲೆಲ್ಲೋ ಸಂಭವಿಸುತ್ತಿದ್ದದ್ದು ಇಂದು ನಮ್ಮಂಗಳದಲ್ಲೇ ಸಂಭವಿಸಿ ಪ್ರಜ್ಞಾವಂತರು ದಿಗ್ಭ್ರಮೆಗೊಂಡರು. ಅವರ ಹತ್ಯೆಯನ್ನು ದೇಶಾದ್ಯಂತ ಸಾಹಿತಿ-ಚಿಂತಕರು ಖಂಡಿಸಿದರು. ಚಂಪಾ, ಕನ್ನಡದ ಆರು ಉದಯೋನ್ಮುಖ ಕವಿಗಳು, ಹಿಂದಿ ಲೇಖಕ ಉದಯಪ್ರಕಾಶ್ ಸೇರಿದಂತೆ ಹಲವರು ತಮ್ಮ ಪ್ರಶಸ್ತಿ ಪಾರಿತೋಷಕಗಳನ್ನು ಹಿಂತಿರುಗಿಸಿದರು. ಅತಿದುಃಖದ, ಅತಿ ಆಕ್ರೋಶದ ಪ್ರತಿಕ್ರಿಯೆಗಳು ಕೇಳಿಬಂದ ಬೆನ್ನಲ್ಲೇ 'ಎಲ್ಲ ಅತಿಯಾಯಿತು, ಸುಮ್ಮನಿರಿ' ಎಂಬ ಧಾಟಿಯ ಅತಿ ನ್ಯೂಟ್ರಲ್ ಪ್ರತಿಕ್ರಿಯೆಗಳೂ ಕೇಳಿಬಂದವು. ಯಾವ ಪುರೋಹಿತಶಾಹಿಯನ್ನು ಕಲಬುರ್ಗಿ ಟೀಕಿಸುತ್ತಿದ್ದರೋ ಅದರ ಮುಂದುವರೆದ ಕೊಂಡಿಗಳಂತಿದ್ದ ಮಠ, ಟ್ರಸ್ಟ್ ಸಂಸ್ಥೆಗಳೊಂದಿಗೆ ಅವರಿಗಿದ್ದ ಸೌಹಾರ್ದ ಸಂಬಂಧ-ಒಡನಾಟವನ್ನು ನೆನೆಸಿಕೊಂಡು ಕೆಲ ಮನಸುಗಳು ಕಸಿವಿಸಿಗೊಂಡವು. ಒಟ್ಟಾರೆ ಅವರವರ ಭಾವ, ಭಕುತಿಗೆ ತಕ್ಕಂತೆ ಅವರನ್ನು ನೆನಪಿಸಿಕೊಂಡರು, ದುಃಖಗೊಂಡರು, ಆಕ್ರೋಶಗೊಂಡರು.

ಆದರೆ ಎಲ್ಲಕ್ಕಿಂತ ವಿಲಕ್ಷಣವಾಗಿ ಕರಾವಳಿ ಮತ್ತಿತರ ಕಡೆಗಳಲ್ಲಿ ಅವರು ಬರೆದ ಒಂದಕ್ಷರವನ್ನೂ ಓದಿರದ ಧರ್ಮಾಂಧರಿಂದ ಸಂಭ್ರಮದ ಪ್ರತಿಕ್ರಿಯೆ ವ್ಯಕ್ತವಾಯಿತು! ಧರ್ಮದ್ರೋಹಿಗೆ ತಕ್ಕ ಶಾಸ್ತಿಯಾಯಿತು ಎಂದು ಜಾಲತಾಣಗಳಲ್ಲಿ ಕಮೆಂಟುಗಳು ಬಂದವು. ಮುಂದಿನ ಸರದಿ ಯಾರದು ಎಂದೂ ಹಿಟ್‌ಲಿಸ್ಟ್ ಬಿಡುಗಡೆ ಮಾಡಲಾಯಿತು. ಅದರ ಆಧಾರದ ಮೇಲೆ ಕೆಲವರ ಬಂಧನ, ಬಿಡುಗಡೆಯೂ ಆಯಿತು.

ಅಂತರ್ಜಾಲದಲ್ಲಿ ಹಿಟ್‌ಲಿಸ್ಟ್?! ನಿಜ. ಇವತ್ತು ಸ್ಥಳೀಯ, ಅಂತಾರಾಷ್ಟ್ರೀಯ ಘಟನೆ ತೀವ್ರಗಾಮಿ ಮನಸುಗಳಲ್ಲಿ ಯಾವ ತೆರನ ಪ್ರತಿಕ್ರಿಯೆ ಹುಟ್ಟುಹಾಕುತ್ತದೆ ಎಂದು ನೋಡಲು ಅಂತರ್ಜಾಲ ಗಮನಿಸಬೇಕು. ಅಂತರ್ಜಾಲವು ಕಲಿತ, ತರುಣ ಪೀಳಿಗೆಯ, ಒಂದು ವರ್ಗದ ಮನಸ್ಥಿತಿಯ ಪ್ರತಿಬಿಂಬವಾಗಿದ್ದು ಶಿಷ್ಟರೆಂದುಕೊಂಡವರ ದುಷ್ಟತನವನ್ನು ಅನಾವರಣಗೊಳಿಸುವ ಮಾಧ್ಯಮವಾಗಿದೆ. ಕೆರಳಿದ ಹಾಗೂ ಅಸಹನೆಯ ಸಮಾಜ ಸೃಷ್ಟಿಸುವಲ್ಲಿ ಮಾಧ್ಯಮ ಮತ್ತು ಅಂತರ್ಜಾಲದ ಮಹತ್ವದ ಪಾತ್ರವಿದೆ. ಭಾರತದಲ್ಲಂತೂ ಅಂತರ್ಜಾಲದ ಕಮೆಂಟಿಗರ ಪಡೆಯೇ ಸೃಷ್ಟಿಯಾಗಿದ್ದು ಮುಕ್ತ ವಿಚಾರಗಳನ್ನು, ಅದರ ಪ್ರತಿಪಾದಕರನ್ನು 'ಬುಜೀ' (ಬುದ್ಧಿಜೀವಿ) ಗಳೆಂದು ಅದು ಮನಬಂದಂತೆ ಹಣಿಯುತ್ತದೆ. ಧರ್ಮ, ದೇವರು, ಜಾತಿ, ದೇಶ, ಭಾಷೆ ಕುರಿತ ಸಣ್ಣ ವಿಮರ್ಶೆ, ಟೀಕೆಯೂ ಸಮಾಜದಲ್ಲಿ ಎಂತೋ ಅಂತೆಯೇ ಜಾಲದಲ್ಲೂ ಅತಿವೇಗದ ತೀವ್ರ ಪ್ರತಿಕ್ರಿಯೆ ಹುಟ್ಟುಹಾಕುತ್ತಿದೆ. ಅಂತರ್ಜಾಲಿಗರ ಉಗ್ರ ಗುಂಪು ಒಂದು ಆರೋಗ್ಯಕರ ಚರ್ಚೆ ನಡೆಯುವುದೇ ಸಾಧ್ಯವಾಗದಂತೆ ಮಾಡುತ್ತ ಬೀದಿಹೋರಾಟದಷ್ಟೆ ಭರಾಟೆಯಿಂದ ಜಾಲಿಗರ ಕಾಳಗ ನಡೆಸುತ್ತದೆ.

ಇವತ್ತು ಎಲ್ಲ ದೇಶ, ಧರ್ಮಗಳಲ್ಲೂ ಈ ಉನ್ಮಾದದ ಮನಸ್ಥಿತಿ ಇದೆ. ಇದು ಇದ್ದಕ್ಕಿದ್ದಂತೆ ಸೃಷ್ಟಿಯಾದದ್ದಲ್ಲ, ಅದಕ್ಕೆ ಪ್ರಸಕ್ತ ರಾಜಕೀಯ ಹುಟ್ಟುಹಾಕುವ ಸಾಮಾಜಿಕ ಹಾಗೂ ಹುಸಿ ಧಾರ್ಮಿಕತೆಯ ವಾತಾವರಣ ಕಾರಣವಾಗಿದೆ. ಹಿಂಸೆಯನ್ನು ವೈಭವೀಕರಿಸುವ, ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಅದು ಸೃಷ್ಟಿಸುತ್ತದೆ. ಇದು ಕಲಬುರ್ಗಿ ಹಂತಕರನ್ನಷ್ಟೇ ಅಲ್ಲ; ಪೆರುಮಾಳ್ ಮುರುಗನ್, ಶಿರೀನ್ ದಳವಿ, ಬಿನಾಯಕ್ ಸೇನ್, ತೀಸ್ತಾ, ಸಂಜೀವ ಭಟ್ ಮುಂತಾದ ಎಷ್ಟೋ ಸಂವೇದನಾಶೀಲರ ಕೊಲೆಗಾರರನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಸೃಷ್ಟಿಸಿದೆ. ಒಟ್ಟಾರೆ ಹೇಳುವುದಾದರೆ ಕಲಬುರ್ಗಿಯವರ ಹತ್ಯೆಗೆ ಕಾರಣ ಮತ್ತು ಸುಳುಹುಗಳು ಅಂತರ್ಜಾಲದಲ್ಲೇ ದೊರೆಯುತ್ತವೆ.

ಈ ಹತ್ಯೆ ಮತ್ತದರ ಕುರಿತು ನಡೆಯುತ್ತಿರುವ ಚರ್ಚೆಗಳ ಹಿನ್ನೆಲೆಯಲ್ಲಿ ಕೆಲ ಅಂಶಗಳನ್ನು ಗಮನಿಸಬಹುದು:


- ಕಲಬುರ್ಗಿ ಅವರ ಹತ್ಯೆ ಇಂಥವರಿಂದಲೇ ಆಯಿತೆನ್ನಲು ಇನ್ನೂ ಯಾವ ಸುಳುಹೂ ದೊರೆತಿಲ್ಲ. ಆದರೆ ಇದು ವಿಚಾರ ವಿರೋಧಿಗಳ ಕೃತ್ಯ ಎನ್ನುವುದು ಓಪನ್ ಸೀಕ್ರೆಟ್. ಕಲಬುರ್ಗಿಯವರ ಸಮಕಾಲೀನರೂ, ಸಹವರ್ತಿಗಳೂ ಆಗಿದ್ದ, ಅವರಂತೇ ಮಠ-ಪೀಠ ವ್ಯವಸ್ಥೆಗಳನ್ನು ಟೀಕಿಸುತ್ತಿದ್ದ ಲಿಂಗಣ್ಣ ಸತ್ಯಂಪೇಟೆ ಅನುಮಾನಾಸ್ಪದವಾಗಿ ಕೊಲೆಯಾಗಿದ್ದರು. ಕಲಬುರ್ಗಿಯವರಿಗೂ ಪ್ರಾಣ ಬೆದರಿಕೆಯ ಕರೆಗಳು ಬಂದು ಕೆಲವು ದಿನ ಪೊಲೀಸ್ ರಕ್ಷಣೆ ಒದಗಿಸಲಾಗಿತ್ತು. ಪೊಲೀಸ್ ರಕ್ಷಣೆ ಬೇಡವೆಂದು ಅವರೇ ನಿರಾಕರಿಸಿದ ಮೇಲೆ ಹತ್ಯೆ ಸಂಭವಿಸಿದೆ. ಅದು ಮೂಲಭೂತವಾದಿಗಳಿಂದಲೇ ಆದದ್ದು ಎಂದುಕೊಳ್ಳುವುದಾದರೆ ಅವರು ಬಹಳ ಸಾಫ್ಟ್ ಟಾರ್ಗೆಟ್ ಆಗಿದ್ದರು. ಅವರಿಗಿಂತ ಖಂಡತುಂಡ ಮಾತುಗಳಲ್ಲಿ ಯಾವುದೇ ಅನುಮಾನ, ಭಯವಿರದೆ ಮೂಲಭೂತವಾದದ ಎಲ್ಲ ಒಳಮಗ್ಗುಲು, ಆಯಾಮಗಳನ್ನು ಬರಹ-ಪುಸ್ತಕ ರೂಪದಲ್ಲಿ ಹೊರಹಾಕುವ ಹತ್ತಾರು ಚಿಂತಕರು, ಹೋರಾಟಗಾರರು ಕನ್ನಡದಲ್ಲಿದ್ದಾರೆ. ಆದರೂ ಅವರನ್ನೇ ಏಕೆ ಆಯ್ದುಕೊಳ್ಳಲಾಯಿತು? ಇದು ಅಪರಾಧ ಸಂಹಿತೆಯ ಒಳಸೂಕ್ಷ್ಮಗಳಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಯಾವಾಗಲೂ ವ್ಯವಸ್ಥೆಗೆ ಒಳಗಿದ್ದು ವಿರುದ್ಧ ಮಾತನಾಡುವ 'ಕ್ರಿಟಿಕಲ್ ಇನ್‌ಸೈಡರ್ಸ್' ಮೇಲೆ ಹೆಚ್ಚು ಸಿಟ್ಟಿರುತ್ತದೆ. ಉದಾಹರಣೆಗೆ ನಾನು ಹಿಂದೂ ಎಂದು ಅದರ ಒಳಹುಳುಕುಗಳ ಕುರಿತು ಹೇಳುವ ಗಾಂಧಿ ಹಿಂದೂ ಉಗ್ರಗಾಮಿಗಳಿಂದ ಕೊಲ್ಲಲ್ಪಡುತ್ತಾರೆ. ಹಂತಕ ವ್ಯವಸ್ಥೆ ಉಳಿದವರನ್ನು ಭಯಗೊಳಿಸುವ ಸಲುವಾಗಿ ಇಂಥ ಸಾಫ್ಟ್ ಟಾರ್ಗೆಟ್‌ಗಳನ್ನೇ ಆಯ್ದುಕೊಳ್ಳುತ್ತದೆ.


- ಇವತ್ತು ಕಾಲ ನಾವು ತಿಳಿದಷ್ಟು ಅಮಾಯಕವಾಗಿಲ್ಲ. ಮೂಲಭೂತವಾದದ ಹುನ್ನಾರಗಳಿಗೆ ಕವಿ, ಚಿಂತಕರ ಅಂತರಂಗದ ಮಾತು, ಸ್ಪಷ್ಟತೆ, ನಿರ್ಭಯ ಸ್ವತಂತ್ರ ಪ್ರವೃತ್ತಿಗಳೆಲ್ಲ ಬಲಿಯಾಗುತ್ತಿರುವ ಸೂಚನೆ ಕಾಣತೊಡಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ಹಿರಿಕಿರಿಯರೆನ್ನದೆ ನಾವೆಲ್ಲ ಮಾತನಾಡುತ್ತೇವೆ. ಆದರೆ ಯಾವ ಮೂಲಸ್ರೋತವಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆಯೊ ಅದರ ಸಾಂಸ್ಕೃತಿಕ ಮುಖವಾಡ ಕಿತ್ತೆಸೆದು ನೋಡಲು, ಅದರ ನಾನಾವೇಷಗಳನ್ನು ಗುರುತಿಸಲು, ಸಂತಾನ ಅರಿಯಲು ನಾವು ವಿಫಲರಾಗಿದ್ದೇವೆ. ಕಲಬುರ್ಗಿಯವರಂಥ ಹಿರಿಯ ಚಿಂತಕ, ಸಾಹಿತಿಗಳೂ ಇದರಿಂದ ಹೊರತಲ್ಲ. ಕೆಲ ಚಿಂತಕರು ಸಂಘಟಕರ ಥಳಕುಬಳುಕು, ಶಿಸ್ತು, ಸಿರಿಗಳಿಗೆ ಮಾರುಹೋಗಿ ಜನವಿದ್ದಲ್ಲೆಲ್ಲ ಜಾತ್ರೆ ಎಂದುಕೊಂಡು ಹೋಗುತ್ತಿದ್ದಾರೆ. ಆದರೆ ಸಿರಿ ಪ್ರದರ್ಶನದ ಜಾತ್ರೆಯಲ್ಲಿ ನಮ್ಮ ಮನೆದೇವರಾದ ಕಲ್ಲುದೈವಗಳಿರುವುದಿಲ್ಲ; ಬರಿ ಉತ್ಸವ ಮೂರ್ತಿಗಳೇ ಇರುತ್ತವೆ. ಅಷ್ಟೇ ಅಲ್ಲ, ಹಂಗಿನರಮನೆಯು ತನ್ನಲ್ಲಿ ಬಂದುಹೋದವರ ಹೆಸರನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುವುದೂ ಚಿಂತಕರಿಗೆ ತಿಳಿಯದೇ ಹೋಗಿದೆ. ಈ ಹತ್ಯೆಯ ನಂತರವಾದರೂ ಮೂಲಭೂತವಾದಿ ಪಕ್ಷ-ಸಂಘಗಳೊಂದಿಗೆ ಸಂಬಂಧವಿರುವ ಯಾವುದೇ ಸಭೆಸೆಮಿನಾರುಗಳಲ್ಲಿ ಭಾಗವಹಿಸುವ ಕುರಿತು ನಾವು ಮರುಯೋಚಿಸಬೇಕಿದೆ.

- ಕಲಬುರ್ಗಿ ಹತ್ಯೆ ಖಂಡಿಸಿ ರಾಜಧಾನಿಯಲ್ಲಿ ಹಾಗೂ ಧಾರವಾಡ-ಉತ್ತರ ಕರ್ನಾಟಕದಲ್ಲಿ ಪ್ರತಿಭಟನೆ, ಖಂಡನೆ ವ್ಯಕ್ತವಾಗುತ್ತಿದೆ. ಧಾರವಾಡ ಕೇಂದ್ರಿತ ಆಗುಹೋಗುಗಳು ತನಿಖಾ ವ್ಯವಸ್ಥೆ ಚುರುಕಾಗುವಂತೆ ಒತ್ತಡ ಸೃಷ್ಟಿಸುತ್ತಿವೆ. ಕಲಬುರ್ಗಿಯವರೊಡನೆ ನಿತ್ಯ ಒಡನಾಡಿದವರು ಸದ್ಯದ ಆಘಾತ ಹಾಗೂ ನಾಳೆಯ ಜವಾಬ್ದಾರಿಗಳೆರಡರ ಸಮತೋಲ ಕಾಯ್ದುಕೊಳ್ಳುತ್ತ ಪ್ರತಿನಿತ್ಯ ಒಟ್ಟಾಗಿ ಚರ್ಚಿಸುತ್ತ ಜಾಗೃತರಾಗಿ, ಒಗ್ಗಟ್ಟಾಗಿರಬೇಕಾದ ಅವಶ್ಯಕತೆ ಕುರಿತು ಸ್ಪಷ್ಟವಾಗ ತೊಡಗಿದ್ದಾರೆ. ಹತ್ಯೆ ವಿರೋಧಿ ಸಮಿತಿ ರಚನೆಯಾಗಿ ನ್ಯಾಯದ ಆಗ್ರಹಕ್ಕೆ ಹೋರಾಟದ ಸ್ವರೂಪ ನೀಡುತ್ತಿದೆ.


ಇದಕ್ಕಿಂತ ಭಿನ್ನವಾಗಿ ಗುಟ್ಟಾಗಿ ಚಿಟ್ಟಿ ತೊಟ್ಟ ಚಿಂತಕರ ಹಡೆ ಪ್ರಪಂಚದ ಬೇರಾವುದೇ ದೇಶದಲ್ಲಿಲ್ಲದಷ್ಟು ಅಭಿವ್ಯಕ್ತಿ ಸ್ವಾತಂತ್ರ್ಯ ಭಾರತದಲ್ಲಿದೆ; ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಎನ್ನುವುದೆಲ್ಲ ಬುದ್ಧಿಜೀವಿಗಳ ಅನಗತ್ಯ ಬೊಗಳೆ ಎಂದು ...

▶▶15





ಕತ್ತಲೆಯ ಕೊನರು



ಕತೆ

"ಹೆಸರು?"

"ಶಾಂತಬಾಲ ಕ್ನೂಲ."

"ಗಂಡನ ಹೆಸರು?"

ಶಾಂತಬಾಲ ಮಾತನಾಡಲಿಲ್ಲ, ಆದರೆ ಅವಳೆದುರು ಕುಳಿತ ವ್ಯಕ್ತಿ ಅವಳು ಹಾಗೆ ಸುಮ್ಮನೆ ಇರಲು ಬಿಡಲಿಲ್ಲ. "ಮಾತಾಡು. ಸುಮ್ಮನೆ ಏಕಿದ್ದೀ. ಹೇಳು. ಇದು ಸರ್ಕಾರಿ ಕೆಲ್ಸ. ಕಾನೂನುಕಟ್ಟಳೆ ಪಾಲಿಸಬೇಕು. ಏನು ನಿನ್ನ ಪತಿಯ ಹೆಸರು?

"ಹರಿಧನ್ ಕ್ನೂಲ."

"ಜೋರಾಗಿ ಹೇಳು. ಸ್ಪಷ್ಟವಾಗಿ ಹೇಳು."

ಶಾಂತಬಾಲ ಈಗ ಕತ್ತೆತ್ತಿ ಎದುರು ಕುಳಿತವನ ಕಣ್ಣುಗಳಲ್ಲಿ ಕಣ್ಣಿಟ್ಟು ದಿಟ್ಟಿಸಿ "ಹರಿಧನ್ ಕ್ನೂಲ" ಎಂದಳು.

"ವಿಳಾಸ?"

ಈ ವೇಳೆಗೆ ಶಾಂತಬಾಲಳಿಗೆ ಈ ಮಂದಿ ಏನೇನು ಪ್ರಶ್ನಿಸುವರೆಂದು ಅರ್ಥವಾಗಿತ್ತು, ಪ್ರಾರಂಭಕ್ಕೆ ಅಳುವುದೊಂದೆ ಅವಳಿಗಿದ್ದದ್ದು, ಎಷ್ಟೊಂದು ಮಂದಿ, ದಿಗ್ಭ್ರಮೆಗೊಳಿಸುವ ಎಂತೆಂತಹ ಪ್ರಶ್ನೆ ಅವರು ಕೇಳುತ್ತಾ ಇದ್ದದ್ದು. ಅವರು ಕೇಳಿದ ಪ್ರಶ್ನೆಗಳಲ್ಲಿ ಅರ್ಧದಷ್ಟು ಅವಳಿಗೆ ಅರ್ಥವೇ ಆಗಲಿಲ್ಲ. ಹೀಗಾಗಿ, ಅವಳು ಅತ್ತಿದ್ದೇ ಅತ್ತಿದ್ದು. ಆದರೆ ಅವಳು ಅಷ್ಟು ಬಿಟ್ಟು ಇನ್ನೇನು ತಾನೇ ಮಾಡಲು ಸಾಧ್ಯ?

ಒಂದು ಸಂಜೆ ಅವಳ ಅಪ್ಪ ಅವಳ ಮದುವೆ ನಿಶ್ಚಯಿಸಿಕೊಂಡು ಮನೆಗೆ ಬಂದ. ಆಗ ಅವಳ ತಾಯಿ "ಅಲ್ಲಾ, ಅವಳಿನ್ನೂ ಬಾಲೆ, ಅವಳನ್ನು ಅವಳ ತಂದೆಗೆ ಸಮಾನನಾಗಿರೋ ವಿಧುರನಿಗೆ ಕೊಡಲೊಪ್ಪಿದ್ದೀರಲ್ಲಾ ನ್ಯಾಯವೆ?" ಎಂದು ಪ್ರಶ್ನಿಸುತ್ತಿರುವಾಗ ಅವಳ ಅಪ್ಪ ತೆಳ್ಳನೆಯ ಪಟ್‌ಪಟೆ ಟವಲೊಂದರಿಂದ ಕೈಕಾಲು ಒರಸಿಕೊಳ್ಳುತ್ತಿದ್ದವನು ಅರ್ಧಕ್ಕೆ ನಿಲ್ಲಿಸಿ "ಅವನೇ ವಧು ತೆರ ಕೊಡುತ್ತೇವೆಂದು ಆಣೆ ಮಾಡವ್ನೆ. ಗೊತ್ತಾ? ಚಿನ್ನದ ಬಳೆ, ಕತ್ತಿನ ಸರ ಎಲ್ಲಾ ಕೊಡ್ತಾನೆ ಹೆಣ್ಣಿಗೆ. ವರದಕ್ಷಿಣೆ ತೆತ್ತು ಪ್ರಾಯದ ಗಂಡು ತರೋ ಶಕ್ತಿ ನನಗೆಲ್ಲಿದೆ?"

ಆಮೇಲೆ ಅವಳ ಹೃದಯದ ಬಡಿತ ನಿಲ್ಲುವ ಮುನ್ನ ಬಿದಿರಿನ ತಡಿಕೆಯ ಆ ಕಡೆ ತಾಂಬೂಲ ವರ್ಣದ ಎಲೆಗಳಿಗೆ ಸುಪಾರಿ ಚೂರು ಹಾಕಿ ಸುತ್ತುತ್ತ ಕುಳಿತಿದ್ದ ಅವಳಿಗೆ ಪುನಃ ಅವಳಮ್ಮ ಹೇಳುವ ಮಾತಿನ ದನಿ ಕೇಳಿಸಿತು. "ಅವನು ಬಹು ದೂರದ ಊರಿನವನು. ಯಾರಿಗೆ ಗೊತ್ತು, ನಾವು ಅವಳನ್ನು ಮತ್ತೊಮ್ಮೆ ನೋಡ್ತಿವ್ರೋ, ಇಲ್ವೋ, ರೈಲಿನಲ್ಲಾದ್ರೂ ಎಷ್ಟು ಸಲ ಅಂತ ಹೋಗಾಕೆ ಆಯ್ತದೆ? ಹೇಗಿದ್ದಾಳೆ ಅಲ್ಲಿ ಅಂತ ನಮಗೆ ಗೊತ್ತಾಗೊಲ್ಲ. ಅಲ್ಲದೆ ಅವಳಿನ್ನೂ ಎಳೆ ಕಂದ."

ಪುನಃ ಅವಳ ಅಪ್ಪ ಒರಟೊರಟಾಗಿ ಬುಸುಗುಡುತ್ತ "ಆಯ್ತು, ಅವಳು ಮನೇಲೇ ಕೂತ್ಕೊಳ್ಳಿ ಬಿಡು, ನಿನ್ನ ಮುದ್ದು ಮಗಳಿಗೆ ರಾಜಕುಮಾರ ಬರ್ತಾನೆ ಅನ್ನೋ ಆಸೆ ಇಟ್ಕೊಂಡಿದ್ದೀಯಾ?"

"ಹಾಗಲ್ಲ, ಹಾಗಲ್ಲ, ಅದಲ್ಲ ನನ್ನ ಮಾತಿನ ಅರ್ಥ: ನಮಗಿರೋಳು ಒಬ್ಬಳೇ ಮಗಳು, ನನಗೆ ಅವಳನ್ನು ಬಿಟ್ಟಿರೋಕೆ ಆಗಲ್ಲ. ಜೊತೆಗೆ ನಮ್ಮ ಶಾಂತ ತುಂಬಾ ಒಳ್ಳೆ ಹುಡ್ಗಿ. ಅವಳು ಆ ವಿಧುರನ ಕೂಡ ಏಗಲಾರಳು. ಆ ವಯಸ್ಸಾದೋನ ಸಂಗಡ ಅವಳಾದರೂ ಹೇಗೆ ನೀಚ್‌ತ್ತಾಳೆ? ಎಲ್ಲ ವಿಧಿಲಿಖಿತ. ವ್ಯಥೆ ಪಟ್ಟು ಏನು ಉಪಯೋಗ?"

"ದಿಟ, ನೀನಾಗಲಿ, ನಾನಾಗಲಿ, ಏನನ್ನು ಬದಲಿಸಲು ಆಗೊಲ್ಲ" ಎಂದ ಅವಳ ಅಪ್ಪನ ಮಾತು ಈಗ ಮೆತ್ತಗಾಗಿತ್ತು ಕೋಪ ಹಾರಿತ್ತು.

"ನಾನೇನು ಅವನ್ನೆಲ್ಲ ಯೋಚ್ನೆ ಮಾಡಿಲ್ಲ ಅಂತ ಅಂದುಕ್ಕೊಂಡೆಯಾ? ಆದರೆ ನಾನೇನು ಮಾಡಲಿ, ನಿನಗೆ ಗೊತ್ತಲ್ಲ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅಂತ. ಅವರನ್ನು ಶಾಶ್ವತವಾಗಿ ಮನೇಲಿ ಇಟ್ಕೋಳ್ಳೊಕ್ಯಾಗಲ್ಲ, ನೆನಪಿದೆಯಾ ನಿನಗೆ ನಮ್ಮಮ್ಮ ಸದಾ ನಿನ್ನ ಮಗಳನ್ನು ಮದುವೆ ಮಾಡಿಕೊಡೋದು ಸಾವಿಗೆ ದೂಡೋದು ಎರಡೂ ಒಂದೇ ಅಂತ ಹೇಳ್ತಿದ್ದ ಮಾತು, ಅವಾಗಿನ್ನೂ ನಮ್ಮ ಶಾಂತ ಮಗು..."

ಅಳುವುದೊಂದನ್ನು ಬಿಟ್ಟು ಮತ್ತೀನ್ನೇನನ್ನೂ ಮಾಡುತ್ತಿರಲಿಲ್ಲ ಶಾಂತ. ಸೆರಗಿನಲ್ಲಿ ಮುಖ ಮುಚ್ಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಮದುವೆಯಾದ ಮೇಲೆ, ತನಗೆ ವರನೆಂದು ತನ್ನ ಪಾಲಕರು ಆಯ್ಕೆ ಮಾಡಿದವನು ಒಂದು ಬಗೆಯ ಸಾವೇ ಎಂದು ಅದನ್ನು ಅಪ್ಪುವ ಅನಿವಾರ್ಯತೆ ತನ್ನದೆಂದುಕೊಂಡಳು, ಅವಳು ಅವನನ್ನು ಪ್ರಥಮ ಸಲ ನೋಡಿದಾಗ. ಆಮೇಲೆ ಹರಿವ ಕಣ್ಣೀರನ್ನು ಒರಸಿಕೊಳ್ಳಲು ಅವಳ ಎಡಗೈ ಸೀರೆಯ ಸೆಲ್ಲುವಿನಲ್ಲಿ ಶಾಶ್ವತ ಆಶ್ರಯವನ್ನು ಪಡೆಯಿತು. ಪ್ರಾರಂಭದ ಆ ಮೊದಲ ದಿನ, ಆ ಮೊದಲ ತಿಂಗಳು ವ್ಯಥೆಯನ್ನು ಅನುಭವಿಸಿದಳು. ಆಮೇಲೆ ವರುಷಗಳು ಉರುಳಿದಂತೆ ಮಕ್ಕಳೂ ಆದವು, ಹದಿಮೂರು ವರುಷಗಳಲ್ಲಿ ಒಂಬತ್ತು ಮಕ್ಕಳು ಸಾಲುಸಾಲಾಗಿ, ಅವುಗಳಲ್ಲಿ ಐದು ಮಸಣ ಸೇರಿ ನಾಲ್ಕು ಮಾತ್ರ ಉಳಿದವು. ಪ್ರಸ್ಥದ ಪ್ರಥಮ ರಾತ್ರಿಯ ಪಲ್ಲಂಗದ ಮೇಲೆ ಭಯದಿಂದ ಹೆಚ್ಚು ಕಡಿಮೆ ಸತ್ತೇಹೋಗಿದ್ದಳು. ಆ ಬಳಿಕದ ನೋವು, ಹಾಸಿಗೆ ಮೇಲಿನ ಹೊದಿಕೆ ಮೇಲಾದ ರಕ್ತದ ಕಲೆ ನೋಡಿ ರೋದಿಸುತ್ತ "ನನ್ನನ್ನು ಬಿಟ್ಟು ಬಿಡಿ, ನಿಮ್ಮ ದಮ್ಮಯ್ಯ" ಎಂದು ಗೋಗರೆದಳು ಅವನೊಡನೆ.

ಆದರೆ ಹರಿಧನ್ ಕ್ನೂಲ ಅವಳ ಮಾತಿಗೆ ಸೊಪ್ಪು ಹಾಕಲಿಲ್ಲ. ಅವಳ ಕೆನ್ನೆಗೆ ಭಾರಿಸಿ ಕೈಗಳನ್ನು ಬಿಗಿಯಾಗಿ ನುಲುಚಿದ, ಅವಳು ಅಯ್ಯೋ, ಅಮ್ಮಾ ಎನ್ನುವತನಕ. ಚಿನ್ನದ ಬಳೆಗಳಿಂದ ಶೋಭಿಸುತ್ತಿದ್ದ ಆ ಸುಂದರ ಬಾಹುಗಳನ್ನು ಅವನು ಖರೀದಿಸಿದ್ದ. ಅವಳ ಮೊದಲ ಶಿಶು ಹೊರಬಂದಾಗ್ಯೆ ಅವಳ ಹದಿಮೂರು ವರ್ಷದ ದೇಹ ಎರಡು ತುಂಡಾದಂತೆ ತೋಚಿತು, ಅವನ ಮೇಲೆ ಅನುರಾಗ ಎಳ್ಳಷ್ಟೂ ಇಲ್ಲವಾಯಿತು. ಅವನೆಡೆ ಕಣ್ಣೆತ್ತಿಯೂ ನೋಡಲು ಅವಳಿಗೆ ಸಹ್ಯವೆನಿಸಲಿಲ್ಲ, ಅವಳ ಆತ್ಮ ಭಯ ಹಾಗೂ ನಾಚಿಕೆಯಿಂದ ದಾಸಾನುದಾಸಳಂತೆ ವರ್ತಿಸಲಾರಂಭಿಸಿತು. ಏಕೆ ನನ್ನ ಹೆತ್ತವರು ನನ್ನನ್ನು ಈ ನರಕಕ್ಕೆ ದೂಡಿದರು ಎಂದೆಲ್ಲ ಪ್ರಶ್ನಿಸಿಕೊಂಡಳು ತನ್ನನ್ನು ತಾನೇ, ತನ್ನ ಪೋಷಕರಿಗೆ ಇದು ನಿಜವಾಗಿಯೂ ಹೀಗೆಯೇ ಎಂಬ ವಾಸ್ತವ ಸತ್ಯ ಗೊತ್ತಿದ್ದರೂ ಎಂದೆಲ್ಲ ಚಿಂತಿಸಿದಳು. ಅವಳನ್ನು ಅವಳ ಹೊಸ ಮನೆಯಲ್ಲಿ ಕಾಪಾಡಲು ಬೇರೆ ಯಾರೂ ಇರಲಿಲ್ಲ, ಅತ್ತೆ ಇಲ್ಲ, ನಾದಿನಿ ಇಲ್ಲ, ಮೈದುನ ಇಲ್ಲ, ತಿರುಗಿ ನೋಡಲು...! ಅವಳ ಗಂಡನ ಮೊದಲ ಪತ್ನಿ ಎರಡೆರಡು ಬಾರಿ ಮನೆ ತೊರೆದು ಓಡಿಹೋಗಿದ್ದಳೆಂದು ಗುಸು, ಗುಸು ಮಾತು ಕೇಳಿಬಂದು ಕೊನೆಗೆ ಆಕೆ ಇಹಲೋಕದಿಂದಲೇ ಮರೆಯಾದಳೆಂಬ ಗುಟ್ಟು ರಟ್ಟಾಯಿತು ಶಾಂತಬಾಲ ನೀರು ತರಲು ಹೋದಾಗ.

"ಆ ಕೊಣಪನನ್ನು ಪಾಪ ಈ ಚೋಕರಿ ಹೇಗೆ ತಾನೆ ತೃಪ್ತಿಪಡಿಸ್ಯಾಳು? ಅವಳ ಅಮ್ಮನಾದರೂ ಇದನ್ನು ಹೇಗೆ ಸಹಿಸಿದಳು? ಈ ಮೃಗದ ಕೈಗೆ ಇವಳನ್ನಿತ್ತು?" ಆದರೆ ಈ ಮಾತುಗಳೊಂದನ್ನು ಯಾರೂ ನೇರವಾಗಿ ಅವಳೊಂದಿಗೆ ಆಡಲಿಲ್ಲ, ಅವಳ ಪ್ರಥಮ ಶಿಶು ನಾಲ್ಕು ತಿಂಗಳು ಬದುಕಿತ್ತು, ಅದು ಸತ್ತು ಎರಡು ತಿಂಗಳಾದ ಮೇಲೆ ನಾನೀಗ ಪುನಃ ಗರ್ಭಿಣಿ ಎಂದು ಅವಳಿಗೆ ಅರಿವಾಯಿತು. ಬಾವಿಗೆ ಬಿದ್ದೋ, ದನದ ಕೊಟ್ಟಿಗೆಯಲ್ಲಿ ನೇಣು ಹಾಕಿಕೊಂಡೋ ಸಾಯೋಣ ಅಂತೆಲ್ಲ ಯೋಚಿಸಿದಳು. ಅವಳ ಹಲವು ರಾತ್ರಿಗಳು ದನದ ಕೊಟ್ಟಿಗೆಯಲ್ಲಿ ಉರುಳಿ ಹೋದವು. ಅವಳ ಮೊದಲ ಗಂಡು ಶಿಶು ಜನಿಸಿದ ತದನಂತರದ ದಿನಗಳಲ್ಲಿ ಅವಳ ಪತಿಯ ಖೋಲಿಗೆ ಮತ್ತೋರ್ವ ಹೆಣ್ಣು ಅಡಿ ಇಟ್ಟದ್ದನ್ನು ಕಣ್ಣಾರೆ ಕಂಡಳು. ಮತ್ತೊಂದು ಮಗು ಹೆರಿಗೆಯಾದ ಮೇಲೂ ಅದೇ ಹೆಣ್ಣು ಕಂಡಳು. ಅವಳ ಗಾಯಗಳು ಇನ್ನೂ ಹಸಿಯಾಗಿಯೇ ಇದ್ದು, ನೋವು ಕೂಡ ಹಾಗೇ ಇತ್ತು. ಕತ್ತಲೆಯಲ್ಲಿ ಸರಸರ ಹೆಜ್ಜೆ ಹಾಕುತ್ತ ಒಳಬಂದು ತನ್ನ ಬೆನ್ನ ಹಿಂದೆ ಚಿಲಕ ಹಾಕುತ್ತಿದ್ದ ಆಕೆ ಪುನಃ ತುಸು ಸಮಯದ ಬಳಿಕ ಹೊರಬಂದು ಕತ್ತಲೆಯಲ್ಲಿ ಮರೆಯಾಗುತ್ತಿದ್ದಳು. ಅಂತಹ ರಾತ್ರಿಗಳಲ್ಲಿ ಶಾಂತಳ ಗಂಡ ಪತ್ನಿಯನ್ನು ಮನೆಯಿಂದ ಹೊರದಬ್ಬುತ್ತಿದ್ದ. ಮಗನನ್ನು ಜೊತೆಗಿಟ್ಟುಕೊಂಡು ದನದ ಕೊಟ್ಟಿಗೆಯಲ್ಲಿ ರಾತ್ರಿ ಕಳೆಯುತ್ತಿದ್ದಳು, ಜಾನುವಾರುಗಳ ಉಸಿರಿನೊಂದಿಗೆ ನೆಮ್ಮದಿ ಕಾಣುತ್ತಿದ್ದಳು. ಈ ರಾತ್ರಿ ದನಗಳು ನನ್ನನ್ನು ಒದ್ದು ಸಾಯಿಸಿದರೆ ಒಳ್ಳೆಯದೇ ಈ ಗಂಡನೆಂಬ ಮೃಗದ ಬಳಿಗೆ ಮತ್ತೆ ಮರಳುವುದಕ್ಕಿಂತ ಎಂದೆಲ್ಲ ಯೋಚಿಸಿದ್ದೂ ಉಂಟು ಅವಳು ಒಂದೆರಡು ಸಲ.

ಆದರೆ ಈ ತೆರನ ಆಲೋಚನೆಗಳೆಲ್ಲ ಬಂದದ್ದು ಅವಳ ಮದುವೆಯ ಪ್ರಾರಂಭದ ಕೆಲವರುಷಗಳಲ್ಲಿ ಮಾತ್ರ. ಆಮೇಲೆ ಅವಳು ದಿನನಿತ್ಯದ ಈ ರೋಸಿಗೆ ಹೊಂದಿಕೊಂಡು ಬಿಟ್ಟಿದ್ದಳು. ಇದೇ ನನ್ನ ಜೀವನ ಅಂತ ಅವಳಿಗೆ ನಿಶ್ಚಿತವಾಯಿತು, ಹೀಗಾಗಿ ಬಳಿಕ ಯೋಚಿಸುವುದನ್ನೂ ಬಿಟ್ಟುಬಿಟ್ಟಳು. ಪತಿಯ ಮಂಚದ ಮೇಲಿನ ಯಮಯಾತನೆ ಅವಳ ಮನಸನ್ನು ಮರಗಟ್ಟಿಸಿಬಿಟ್ಟಿತ್ತು, ಸಂವೇದನೆ ಮರೆಯಾಗಿತ್ತು, ಹೀಗಾಗಿ ಅವಳಿನ್ನೂ ಯಾವುದಕ್ಕೂ ಅಂಜದ, ಹೇಸದ ವ್ಯಕ್ತಿಯಾಗಿ ಉಳಿದುಬಿಟ್ಟಿದ್ದಳು. ಅವಳ ಪತಿ ಕೋಪದಿಂದ ಕೃದ್ಧನಾಗಿ, ಅನ್ನದ ಮಡಿಕೆಯನ್ನು ಕಾಲಿನಿಂದ ಒದ್ದರೂ ಅಥವಾ ದನಗಳನ್ನು ಕಟ್ಟುವ ವರ್ಜೆ ಹಗ್ಗದಿಂದ ವರಾಂಡದ ಕಂಬಕ್ಕೆ ಕಟ್ಟಿ ಭಾರಿಸಿದರೂ ಭಯವೆಂಬುದು ಇರಲಿಲ್ಲ ಅವಳಿಗೆ. ಅವಳ ಸಂಪದ್ಭರಿತ ಬಸಿರು ಅವನಿಗೆ ಮಕ್ಕಳ ಫಲ ನೀಡಿತು, ಅವಳೂ ಹೆರಿಗೆಗಳ ಮೂಲಕ ಚೈತನ್ಯ ಕಂಡುಕೊಂಡಳು, ಅಂತೆಯೆ ತನ್ನ ಶಿಶುಗಳ ಸಾವು ತಂದ ನೋವಿನ ಮೂಲಕವೂ, ಗರ್ಭಸ್ಥ ಶಿಶುಗಳ ಭಾರದಿಂದಲೂ ಅವಳ ದೇಹ ಭಾರವಾಯಿತು, ವೊಲೆಯುಡಿಸುತ್ತಾ ಅಥವಾ ಗರ್ಭದಲ್ಲಿ ಬೆಳೆವ ಅಜಾತಮಗುವಿನ ಭಾರದಿಂದ ದೇಹ ಇನ್ನೂ ವಜ್ಜೆ ಎನಿಸಿತ್ತು ಅನ್ನ ಬೇಯಿಸುವಾಗ, ಬಸಿಯುವಾಗ, ದನದ ಕೊಟ್ಟಿಗೆ ಸ್ವಚ್ಛ ಮಾಡುವಾಗ, ತೊಡೆ ಹಾಗೂ ವಪೆ ನೋವಿನಿಂದ ಸೆಟೆದು ನಿಂತವು.

ಇಪ್ಪತ್ತೈದು ವಸಂತಗಳನ್ನು ಕಳೆಯುವುದರೊಳಗೆ ಶಾಂತಬಾಲ ಜೀವಮಾನ ಪೂರೈಸಿದಂತೆ ಕಂಡುಬಂದಳು. ಈ ವೇಳೆಗೆ ತನ್ನ ನೆರೆಹೊರೆಯವರೊಂದಿಗೆ ಒಂದೆರಡು ಮಾತುಕತೆಗಳನ್ನು ಆಡಿದ್ದಳಾದರೂ, ಅದನ್ನು ಅವರೊಂದಿಗೆ ಮುಂದುವರಿಸಿಕೊಂಡು ಹೋಗಲು ಅವಳಿಗೆ ಪುರುಸೊತ್ತು ಅಷ್ಟಾಗಿ ಇರಲಿಲ್ಲ. ಈಗವಳು ನೀರು ತರಲೂ ಹೋಗುತ್ತಿರಲಿಲ್ಲ. ಅವಳ ಜೇಷ್ಠಪುತ್ರಿ ಜಾಮಿನಿ ಈಗ ಅದರ ಹೊಣೆ ಹೊತ್ತಿದ್ದಳು. ಅಪರೂಪಕ್ಕೊಂಬಂತೆ ಹರಟೆ ಹೊಡೆಯಲು ಒಬ್ಬಿಬ್ಬರು ಅವಳ ಬಳಿ ಬರುತ್ತಿದ್ದರು. ಆಗಷ್ಟೇ ಅವಳ ಬಾಯಿ ತೆರೆಯುತ್ತಿದ್ದದ್ದು ಮುಕ್ತವಾಗಿ. ರಾತ್ರಿಯ ಕತ್ತಲೆಯಲ್ಲಿ ಗುಟ್ಟಾಗಿ ಮನೆಯೊಳಹೊಕ್ಕು ಹರಿಧನ್ ಖೋಲಿಯೊಳಗೆ ಅಡಿ ಇಡುತ್ತಿದ್ದ ರೋಹಿಣಿಯ ಆ ಹಿಂದಿನ ದಿನಗಳು ಇಂದು ಗತಕಾಲಕ್ಕೆ ಸರಿದಿದ್ದವು. ರೋಹಿಣಿ ಈಗ ಹಗಲಿನಲ್ಲಿಯೇ ಅವಳ ಮನೆಗೆ ಬರಲಾರಂಭಿಸಿದಳು. ಈಗವಳು ಹರಿಧನ್ ಮನೆಯಲ್ಲಿ ಇಲ್ಲದಿರುವಾಗಲೂ ಬರಲಾರಂಭಿಸಿದಳು. ಶಾಂತಳ ಜೊತೆ ತನ್ನ ದುಃಖದುಮ್ಮಾನಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದಳು.

ರೋಹಿಣಿಗೆ ಕುಟುಂಬವ್ಯಾವುದೂ ಇರಲಿಲ್ಲ, ತನಗೆ ಮದುವೆ ಎಂದು ಆಯಿತೆಂದು ಸಹ ಅರಿಯದ ಮುಗ್ಧೆ ರೋಹಿಣಿ. ಅವಳ ಪ್ರಾಯಸ್ಥ ಪತಿ ಹಾವು ಕಡಿತದಿಂದ ಸತ್ತಾಗ ಅವಳ ವಯಸ್ಸು ಹದಿನೈದು. ಗಂಡ ಸತ್ತ ನಂತರವೂ ಪತಿಯ ಮನೆಯಲ್ಲೇ ಉಳಿದಳು. ಇಡೀ ದಿನ ಹಗಲು ಹೊಲಗದ್ದೆಯಲ್ಲಿ ದುಡಿದು ರಾತ್ರಿ ಮರದಕೊರಡಿನಂತೆ ಬಿದ್ದಿರುತ್ತಿದ್ದಳು. ಆದರೆ ಒಂದು ರಾತ್ರಿ, ಅವಳಿಗಾಗ ಹದಿನಾರರ ವಯಸ್ಸು, ಅವಳ ಹಿರಿಯ ಮೈದುನ ಅವಳು ಸರಿಹೊತ್ತಿನಲ್ಲಿ ಮೂತ್ರವಿಸರ್ಜನೆಗೆಂದು ಎದ್ದಾಗ ಹೊಂಚು ಹಾಕಿ ಕುಳಿತಿದ್ದುದನ್ನು ಕಂಡಳು. ಆತ ಕೊಟ್ಟಿಗೆಯ ಗೋಡೆಗೆ ಅವಳನ್ನು ಒತ್ತರಿಸಿ ನಿಲ್ಲಿಸಿ ನಿನ್ನ ಅನುಪಮ ಸೌಂದರ್ಯಕ್ಕೆ ನಾನು ಮಾರುಹೋಗಿರುವೆ. ನಿನ್ನ ಮೇಲಿಂದ ಆರೆಕ್ಷಣವೂ ನನ್ ಕಣ್ ಕೀಳಲಾಗುತ್ತಿಲ್ಲವೆಂದು ಗೋಗರೆದ. ಅಲ್ಲದೆ ಈ ವಿಷಯ ಹೊರಗೆ ಬಾಯಿ ಬಿಟ್ಟರೆ ಮನೆಯಿಂದ ಹೊರದಬ್ಬುವೆನೆಂದೆಲ್ಲ ಬೆದರಿಸಿದ. ರೋಹಿಣಿ ಭಯವಿಹ್ವಲಳಾದಳು. ಆದರೆ ಅವನ ಮುನ್ನಡೆಯನ್ನು ತಿರಸ್ಕರಿಸದಾದಳು. ಅವಳಲ್ಲೂ ಆಸೆ ಅಂಕುರಿಸಿತ್ತು, ಈ

ಕಳ್ಳಾಟ ಹಲವು ದಿನಗಳವರೆಗೆ ಮುಂದುವರಿಯಿತು
ನಿದ್ರೆಗೆ ಜಾರಿದ ಒಡನೆ ಅವಳು ಪ್ರತಿ
ಬಾರಲಾರಂಭಿಸಿದಳು. ಆದರೆ, ಯಾವಾಗ ಗರ್ಭಿಣಿ ಅ
ಆಗ ಮೈದುನ ಅವಳನ್ನು ನಿರ್ದಾಕ್ಷಿಣ್ಯವಾಗಿ ಮನೆ
ಹೊರದಬ್ಬಿದ. ಅವಳಿಗೆ ದಾರಿ ತೋಚದಾ
ಅನ್ಯಮಾರ್ಗವಿಲ್ಲದೆ ಅತ್ತೆ ಹಾಗೂ ಮೈದುನನ
ಬಿದ್ದಳು. ಅವನೀಗ "ಹೇ!! ಸೂಳೆ, ತೊ
ಮನೆಯಿಂದ. ಬೀದೀಲಿ ಬಿದ್ದು ಸಾಯಿ" ಎಂದು ಬ
ಒದ್ದ ಬುಸುಗುಡುತ್ತಾ ನಿಸ್ಸಂದಾಗಿ ನಮ್ಮ ಮ
ಮರ್ಯಾದೆ ಬೀದಿ ಪಾಲಾಯ್ತೆಂದ. ಇಷ್ಟೆಲ್ಲ ರಾದ್ಧಾಂತವಾ
ಅಂತೂ ಅತ್ತೆ ಸೊಸೆಯನ್ನು ಅವರ ಜಮೀನಿನ
ಮೂಲೆಯಲ್ಲಿ ಗುಡಿಸಲು ಹಾಕಿಕೊಂಡು ಇರಲು ಅ
ಇತ್ತಳು ತನ್ನ ಮನೆಯಲ್ಲಿ ಇರಗೊಡದೆ ಹೋ
ಅವಳ ಅತ್ತೆಗೆ ಆ ಜಮೀನು ಅವಳ ತಂದೆ
ಬಳುವಳಿಯಾಗಿ ಬಂದಿತ್ತು, ರೋಹಿಣಿ ನಾಯಿಂದನ
ಸಹಾಯದಿಂದ ಮೈಯಿಳಿಸಿಕೊಂಡು ಗುಡಿಸಲಿಗೆ ಬ
ಅವಳ ಅತ್ತೆ ಸೊಸೆಗೆ ಒಂದು ಗಡಿಗೆ ಸ
ಕಳುಹಿಸಿಕೊಟ್ಟಳು. ರೋಹಿಣಿಗೆ ಮೈಯಲ್ಲಿ ಕಸುವು
ಮೇಲೆ ಕೊಟ್ಟೆಪಾಡಿಗೆ ದುಡಿಮೆಗೆ ಇಳಿದಳು.
ಅವಳೆಂದೂ ತನ್ನ ಪತಿಯ ಮನೆಯ ಹೊ
ತುಳಿಯಲಿಲ್ಲ, ಆದರೆ ಅದೇ ಮನೆಯ ಹೊರ
ಎಲ್ಲ ಕೆಲಸಗಳನ್ನು ಅಂದರೆ ಹುಲ್ಲು ಕೊಯ್ಯು
ಕೊಟ್ಟಿಗೆ ಕಸ ತೆಗೆಯುವುದು, ನೀರು ತುಂಬು
ಬಟ್ಟೆ ಬರೆ ಹೊಗೆಯುವುದು, ಇತ್ಯಾದಿ ಮಾ
ಬಂದಳು. ಇಷ್ಟೆಲ್ಲ ಆದರೂ ಅವಳ ತಲೆಯ
ಸೂರು ಕಿತ್ತುಕೊಂಡ ಮೈದುನ, ತಾನು ಗೃಹಸ್ಥ
ಮುನ್ನ, ತನ್ನ ತಾಯಿಯ ಸಾವಿನ ಮುನ್ನ ರೋಹಿಣಿ
ಬೀದಿಗೆ ತಳ್ಳಿದ.

ಈಗ ಹಳ್ಳಿ ಮಂದಿಯ ಆಸೆ-ಆಕಾಂಕ್ಷೆಗ
ರೋಹಿಣಿ ಪ್ರತಿಕ್ರಿಯಿಸಿದಳು. ಅವಳಿಗೆ ಕೈತುಂಬ ಕೆಲ
ಗರ್ಭಿಣಿಯರಿಗೆ, ಹಸುಗೂಸುಗಳಿಗೆ, ಅವಳ
ಹಾರೈಕೆಯದಾಗಿತ್ತು, ಕರೆದಲ್ಲಿಗೆ ಹಾಜರಾಗುತ್ತಿದ್ದ
ಹಳ್ಳಿಯ ಗರ್ಭಿಣಿ, ಹಸು ಕಂದಮ್ಮಗಳ
ಎನಿಸಿಕೊಂಡಳು. ಅಲ್ಲದೆ ಅವಳಿಗೆ ಬೇರೆ ಕೆಲಸಕಾರ್ಯ
ಆಸಕ್ತಿ ಇತ್ತು. ಹೀಗಾಗಿ ಪ್ರತಿರಾತ್ರಿ ಕತ
ಕರಗಿಬಿಡುತ್ತಿದ್ದಳು ತನ್ನಲ್ಲಿನ ಕಾಮನೆಗಳನ್ನು ತಣಿಸಿಕೊ
ಜಗತ್ತು ಅವಳನ್ನು ಕಡೆಗಣಿಸಿತ್ತು. ಹೀಗಾಗಿ ಜಗತ್ತಿಗೆ
ಕ್ಯಾರೆ ಅನ್ನಬೇಕು ಅದು ಏನಂದರು?

ಆದರೆ ಹರಿಧನ್ ಕ್ನೂಲನ ಪ್ರಾಯದ ಪತ್ನಿಯ
ಮಮತೆ ಉಕ್ಕಿತು. ತನ್ನ ಅಜಾತ ಮಗು ಬಾಳಿ ಬ
ಶಾಂತಳಂತೆಯೇ ಇರುತ್ತಿತ್ತೆಂದು ನೆನಸಿಕೆ
ತನ್ಮಯಳಾದಳು. ತಾನು ಶಾಂತಳ ವಯಸ್ಸಿ
ಬದುಕಿರುವೆನೆ ಎಂದೆಲ್ಲ ಯೋಚಿಸಲಾರಂಭಿಸಿದಳು.
ಇರಬಹುದು. ಶಾಂತಳ ಮುಖ ದಿಟ್ಟಿಸುತ್ತಿದ್ದಂತೆ,
ದಪ್ಪ ತುರುಬಿನ ಗಂಟನ್ನು, ಎದ್ದು ಕಾಣುವ ಅವಳ
ಮೂಳೆಗಳನ್ನು ಅವಳ ಅಗಲವಾದ ಕಣ್ಣುಗಳ
ಸೌಂದರ್ಯವನ್ನು ವೀಕ್ಷಿಸುತ್ತಿದ್ದಂತೆ ತನ್ನ ಗಂಟ
ಗಂಟೊಂದು ಸಿಕ್ಕಿಹಾಕಿಕೊಂಡಂತೆನಿಸಿತ್ತು. ಹರಿ
ಪ್ರತಿರಾತ್ರಿಯ ಕಟ್ಟಪ್ಪಣೆಯನ್ನು ಈ ಪ್ರಾಯದ
ಹೇಗೆ ನಿಭಾಯಿಸುವಳೆಂದು ನೆನಸಿ ಹಿಮ್ಮೆಟ್ಟಿದಳು.
ಜನ ಕರ್ತವ್ಯವೆಂದು ಕರೆದಿದ್ದು, ಇದೇ ಆದರ
ಸ್ತ್ರೀತ್ವದ ಶ್ರೇಷ್ಠ ಸಾರ್ಥಕತೆ ಎಂದೆಲ್ಲ ಕರೆದದ್ದು.
ಮುಂದೆ ಮಂದಿಯ ಈ ತರಹದ ಧೋರಣೆ
ರೋಹಿಣಿ ಮಣೆ ಹಾಕಲಿಲ್ಲ.

ಆದರೆ ಶಾಂತ ಎಂದೂ ತನ್ನ ಬಗ್ಗೆ ಯೋಚಿಸಿ
ಈಗವಳು ತನ್ನ ಹೆಣ್ಮಕ್ಕಳ ಬಗ್ಗೆ ಚಿಂತೆಗೀಡಾದಳು.
ಮಗನ ಬಗ್ಗೆ ತಕರಾರು ಏನೂ ಇರಲಿಲ್ಲ, ಅವ
ಪ್ರಪಂಚದಲ್ಲಿ ಬದುಕುವ ದಾರಿ ಕಂಡುಕೊಳ್ಳು
ಅವಳಿಗೆ ಗೊತ್ತಿತ್ತು, ಅವರಪ್ಪ ಆ ಕಡೆ ಗಮನ ಹ
ಹಾಗೂ ಅವನಿಗೆ ದಾರಿಯೂ ಇತ್ತು, ಆದರೆ
ಮತ್ತು ಕಾಮಿನಿಯರ ಬಗೆಗೆ? ಅವರ ಮದುವೆ ಆ
ದಿಟ, ಎಲ್ಲಿ? ಇಲ್ಲಿಂದ ಎಷ್ಟು ದೂರಕ್ಕೆ? ಅವರು
ಅವರ ಅಮ್ಮನಂತೆಯೇ ತವರುಮನೆಯಿಂದ ಬಹು
ಹೋಗಬೇಕೆ? ಈವರೆಗೆ, ಇಪ್ಪತ್ತನಾಲ್ಕು ವರು
ಅವಳು ತವರುಮನೆ ಮುಖ ನೋಡಿದ್ದು ಒಂದೇ
ಸಲ, ಅದೂ ಅವಳ ಅಪ್ಪ ಸತ್ತಾಗ! ಅದೂ
ಎರಡು ದಿನ ಮಾತ್ರ. ಶಾಂತ ಅಪ್ಪನ ಸಂತಾಪ ಸೂಚ
ಬೇಗ ಮುಗಿಸದಿದ್ದರೆ ಯಾರು ಅವಳ ಮಕ್ಕಳಿಗೆ,
ಬೇಯಿಸಿ ಹಾಕುತ್ತಾರೆ? ಅವಳ ಗಂಡನ ಇಷ್ಟಾನಿ
ಯಾರು ಪೂರೈಸುತ್ತಾರೆ? ಆದರೆ ಶಾಂತ ತನ್ನ ಹೆ
ಶಾಲೆಗೆ ಹಾಕಲು ನಿರ್ಧರಿಸಿ ಮನೆದೇವರ ಹು
ಕಾಸು ಕೂಡಿಡುತ್ತಾ ಬಂದಳು. ಕೊನೆಪಕ್ಷ ತನ್ನ
ತನ್ನ ಅಮ್ಮನಿಗಾದರೂ ಪತ್ರ ಬರೆಯುವಂತಾದರೆ
ಆಶಿಸಿದಳು. ಈಗ ಅವಳೂರಲ್ಲಿ ಒಂದು ಪ್ರೈಮ
ಇತ್ತು, ಇಲ್ಲಿಗೆ ನಗರದಿಂದ ಓರ್ವ ಶಿಕ್ಷಕ
ಬಂದುಹೋಗುತ್ತಿದ್ದ ನಿತ್ಯ. ಈಗವಳು ಈ ವಿಷ
ಅವರ ಅಪ್ಪನಿಂದ ಗುಟ್ಟಾಗಿರಿಸಲು ಜಾಗೃತಳಿ

ಅದು ಶಾಲೆಗೆ ಹೋಗುವುದನ್ನು ಇಚ್ಛಿಸುತ್ತಿರಲಿಲ್ಲ, ಹೊದರಲ್ಲಾದರೂ. ಬಳಿಕ ಮಕ್ಕಳು ಶಾಲೆಗೆ ವ ವಿಷಯ ಗೊತ್ತಾದರೂ ಪ್ರಾಯಶಃ ಅವನು ಶಾಲೆ ಬಿಡಿಸಲಾರನೆಂದುಕೊಂಡಳು.


ದು ದಿನ ದಿಢೀರನೆ ಹರಿಧನ್ ಶಾಂತಳಿಗಿಂತಲೂ ದವನೋರ್ವ ನೊಡಗೂಡಿ ಮನೆಗೆ ಬಂದ. ರೂ ಅಂಕಣದಲ್ಲಿ ಕೂತು ಮಾತುಕತೆಯಲ್ಲಿ ರು. ಹರಿಧನ್ ಅವನನ್ನು ಪ್ರಸನ್ನಗೊಳಿಸಲು ಆದರಣೆಯನ್ನು ತೋರಿದ. ಅತಿಥಿಗೆ ತಿನ್ನಲು ೂ ಕೊಡೆಂದು ಶಾಂತಳಿಗೆ ಹೇಳಿದ, ಅತಿಥಿ ದು ಹೊರಹೋದ ಮೇಲೆ ಕಳೆಹೊತ್ತ ದಿಗೆ ಒಳಬಂದ ಹರಿಧನ್ ಪತ್ನಿಗೆ

ಮಿನಿ ಮದುವೆ ಮಾಡಲು ನಿರ್ಧರಿಸಿ ದು ವರ ಗೊತ್ತು ಮಾಡಿರುವೆ."

ದು?"

ಮೆದುಳಿನೊಳಗಿನ ಪ್ರಪಂಚ ತತ್ತರಿಸಿ ತಾಯಿತು, ರಕ್ತ ಕಣ್ಣುಗಳಿಗೆ ಹರಿದಂತಾಯಿತು ಮಾತು ಕೇಳಿ. ಜಾಮಿನಿಗೆ ಇನ್ನೂ ಹನ್ನೊಂದು ಬಿರಲಿಲ್ಲ.

ಷ್ಟು ಹೊಲ-ಮನೆ ಇದೆ, ಗೊತ್ತಾ, ಯಾವ ವೂ ಆಜ್ಜಿಯರಿಗೆಂದು ಉಳಿತಾಯ ಮಾಡೊಲ್ಲ, ಹ್ಮಚಾರಿಯಾಗಿರಲು ನಿಶ್ಚಯಿಸಿದ್ದ. ಆದರೆ ನಾನು ರ್ಮಾನ ಬದಲಿಸಿದೆ. ಮಕ್ಕಳಿಲ್ಲದೆ ಇದ್ದ ಮೇಲೆ ದು ಆಸ್ತಿ ಇಟ್ಟುಕೊಂಡು ಉಪಯೋಗವಾದರೂ ಯಸ್ಸಾದ ಮೇಲೆ ಅದೆಲ್ಲ ನಾಯಿ ಪಾಲಾಗುತ್ತದೆ ಲೆ, ಅವನು ನಿನ್ನನ್ನು ನೋಡಿದ ಮೇಲೆ, ನಮ್ಮ ಸಹ ನಿನ್ನಂತೆಯೇ ರೂಪವತಿ ಎಂದು ಭಾವಿಸಿ ವೆಗೆ ಒಪ್ಪಿದ್ದಾನೆ..."



ಮಿನಿ ಅವನ ಪತ್ನಿ ಎಂದು ಅವಳು ಅವನಿಗೆ ಹಡೆದು ಅವನ ಆಸ್ತಿಪಾಸ್ತಿಗೆ ವಾರಸುದಾರಳಾಗು ಹರಿಧನ್ ಆಗಲೇ ನಿರ್ಧರಿಸಿಯಾಗಿತ್ತು! ಆಮೇಲೆ 'ಇನ್ನೂ ಮಗು...' ಶಾಂತಳ ಪತಿ ಈ ವಿಷಯ ಮಾತು ಆಡುತ್ತಲೇ ಇದ್ದ, ಆದರೆ ಅವನ ದನ್ನು ಶಾಂತ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಮದುವೆ ಸಾಧ್ಯವಿಲ್ಲ" ದನಿಯಲ್ಲಿ ಸ್ಪಷ್ಟತೆ ಇತ್ತು. ಹರಿಧನ್ ಹೆಂಡತಿ ಮುಖ ನೋಡಿದ. ಅವರ ಜೀವನದ ಇಷ್ಟು ವರ್ಷಗಳಲ್ಲಿ ಅವನೆಂದು ಷ್ಟು ಕಡ್ಡಿ ತುಂಡರಿಸಿದಂತೆ ಮಾತನಾಡಿದ್ದನ್ನು

ಏನು ಕೊರತೆ ಕಂಡೆ ಅವನಲ್ಲಿ?"

ಜಾಮಿನಿ ಇನ್ನೂ ಎಳೆಬಾಲೆ. ಮದುವೆಗೆ ವ ಹೆಣ್ಣು, ಜಾಮಿನಿ-ಕಾಮಿನಿ ಇಬ್ಬರನ್ನು ನಾನು ಓದಿಸುವೆ, ವಿದ್ಯೆ ಕಲಿಸುವೆ."

ಮಾತುಗಳನ್ನಾಲಿ‌ೕ, ಹೀಗೆಲ್ಲ ಮಾತನಾಡುತ್ತೇ ಅಥವಾ ಇದೇ ಮಾತುಗಳನ್ನು ಒಂದಾದ ದರೂ ಈ ಪರಿ ಧೈರ್ಯ ವಹಿಸಿ ಪತಿ ಎದುರು ಸುವೆನೆಂದಾಗಲೀ ಶಾಂತಳಿಗೆ ಅನಿಸಿರಲಿಲ್ಲ. ಅವಳ ಮುಖ ದಿಟ್ಟಿಸಿದ, ಕ್ಷಣ ಹೊತ್ತು ನೋಡಿದ್ದವನೆ ಸೀದಾ ದನದ ಕೊಟ್ಟಿಗೆ ಹೊಕ್ಕ, ಮಲಗುವ ಕೊಠಡಿಯೊಳಗೆ ಹೋದಳು. ಳಗೆ ಬಂದ ಅವನು ಅವಳ ಬೆನ್ನಿಂದಿನಿಂದ ದು "ಓ! ಹೋ! ಓಗಾ..? ದಾರಿಗೆ ಒಡೆ, ಕಲ್ಸುತ್ತೀಯಾ? ಹೇ ಸೂಳೆ! ಏನು, ದು ಕಲಿದಿರುವೆ, ನನಗೇ ಎದುರುತ್ತರ

ಕೊಡುವೆಯಾ? ಇಗೋ ತಗೋ... ಅದೇಗೆ ಸ್ಕೂಲಿಗೆ ಕಳಿಸ್ತೀಯಾ ನಾನೂ ನೋಡುವೆ" ಎನ್ನುತ್ತಾ ಈಗಾಗಲೇ ಮಖಾಡೆ ಬಿದ್ದಿದ್ದ ಶಾಂತಳ ಮೈಮೇಲೆ ಬಾಸುಂಡೆಗಳೇಳುವಂತೆ ವರ್ಜಿ ಹಗ್ಗದಿಂದ ರಪರಪನೆ ಭಾರಿಸಿದ. ಹಗ್ಗ ಹಿಡಿದ ಅವನ ಕೈಗಳು ಸೋಲುವವರೆಗೂ ಎಡಬಿಡದೆ ಭಾರಿಸಿದ. ಬಳಿಕ ಹಗ್ಗ ಎಸೆದು ಕೊಠಡಿಯಿಂದ ಹೊರಬಂದವನು ಕ್ಷಣಹೊತ್ತು ಬಾಗಿಲಲ್ಲಿ ನಿಂತು ಪತ್ನಿಯನ್ನುದ್ದೇಶಿಸಿ,

"ಹೇ! ಸೂಳೆ! ಕೇಳಿಸಿಕೋ ಚೆನ್ನಾಗಿ, ನಾನೀಗ ಜಾಮಿನಿ ಒಬ್ಬಳನ್ನೇ ಅಲ್ಲ ಕಾಮಿನಿನೂ ಮದುವೆ ಮಾಡಿಕೊಡುವೆ. ಸ್ಕೂಲಿಗೆ ಸೇರಿಸುವ ನಿನ್ನ ಆಸೆ ಮರೆತುಬಿಡು! ಕೇಳಿಸ್ತೇನೆ?"

ತದನಂತರ ಶಾಂತಳಿಗೆ ತನ್ನ ಮಂಡೆಯೊಳಗೆ ಇದು ಯಾವಾಗ ಹೊಕ್ಕಿತೆಂದು ನೆನಪಿಗೆ ಬರಲಿಲ್ಲ, ತಲೆಶೂಲೆ ಬಂದು ಎರಡು ಹೋಳಾದಂತೆನಿಸಿತು. ಆ ರಾತ್ರಿ ಕೊಡಲಿ ಕೈಗೆತ್ತಿಕೊಂಡಳು. ಅದು ಅವಳ ದಿನನಿತ್ಯದ ಸುಪರಿಚಿತ ಆಯುಧ. ಸೌದೆ ಸೀಳಲು ಬಳಸುತ್ತಿದ್ದ ಅದು ಹಲವು ವರುಷಗಳಿಂದ ಅವಳ ಒಡನಾಡಿ. ಈಗವಳು ಅದನ್ನು ಮೇಲೆತ್ತಿ ಒಂದೇ ಒಂದು ಏಟು, ಬಲವಾದ ಹೊಡೆತ, ಮಲಗಿದ್ದ ಗಂಡನ ತಲೆಯ ಮೇಲಿಂದ ಕೆಳಗಿಳಿದ ಅದು ಪುನಃ ಮತ್ತೊಂದು, ಅಷ್ಟೇ ಬಲವಾದ ಪೆಟ್ಟನ್ನು ಅವನ ಎದೆಯ ಮೇಲೆ ಬೀಸಿತು. ಈ ಕೃತ್ಯ ಈ ಕರ್ತವ್ಯ ಮುಗಿದ ಬಳಿಕವೇ ಅವಳ ಮಂಡೆಯಲ್ಲಿ ಭುಗಿಲೆದ್ದ ರೋಷಾವೇಷದ ಚಂಡಮಾರುತ ತಣ್ಣಗಾಗಿದ್ದು. ಶಾಂತ ಸೀದಾ ಕೊಳದೊಳಗೋಗಿ ಒಂದು ಮುಳುಗು ಹಾಕಿ ಹೊರಬಂದು ಬಟ್ಟೆ ಬದಲಿಸಿದಳು. ಹೊಸ ಸೀರೆ ಉಟ್ಟಳು. ಬಳಿಕ ನಿದ್ರೆಯಲ್ಲಿದ್ದ ಮಕ್ಕಳನ್ನು ಎಬ್ಬಿಸಿ, ದಿಗ್ಭ್ರಮೆಗೊಂಡ ಮಕ್ಕಳ ಮುಷ್ಟಿಯೊಳಕ್ಕೆ ತನ್ನ ಚಿನ್ನದ ಸರ-ಬಳೆಗಳನ್ನು ತುರುಕಿ "ನಾನೆಲ್ಲೋ ಒಂದು ಕಡೆ ಹೋಗಿ ಬರುವೆ. ನೀವು ಜೊತೆಗೆ ಚೋಟು, ರೋಹಿಣಿ ಮಾಷಿ ಮನೆಗೆ ಈಗಲೇ ಓಡಿ... ಓಡಿ, ಅವಳ ಕೈಗೆ ಈ ಒಡವೆಗಳನ್ನೆಲ್ಲ ಕೊಡಿ. ನಮ್ಮನ್ನು ಶಾಲೆಗೆ ಸೇರಿಸು ಅಂತ ಹೇಳಿ. ನಾನು ಹಿಂದಿರುಗಿ ಬರೋವರೆಗೂ ಅವಳ ಹತ್ತಿರಾನೇ ಇರಿ. ನಾನು ಬರೋವರ್ಗ್ಗೂ... ಒಳ್ಳೆಯವರಾಗಿರಿ... ಹೂಂ..."

ಎಂದ ಶಾಂತ ತನ್ನ ಹೊಟ್ಟೆಗೆ ಕೊಡಲಿ ಒತ್ತಿ ಹಿಡಿದು ಆ ಕಾರ್ಗತ್ತಲೆಯಲ್ಲಿ ಒಬ್ಬಳೆ ಹೊರಟಳು. ಹೀಗೆ ದಾರಿ ಸವೆಸಿದ ಅವಳು ಮರುದಿನ ಮಧ್ಯಾಹ್ನದಷ್ಹೊತ್ತಿಗೆ ಏಳು ಮೈಲಿಗಳ ದೂರದ ದಾರಿ ಸವೆಸಿ ಪೊಲೀಸ್ ಠಾಣೆಗೆ ಬಂದು ತಲುಪಿದ್ದಳು. ಪೊಲೀಸ್ ಅಧಿಕಾರಿಯ ಟೇಬಲ್ ಮೇಲೆ ಕೊಡಲಿಯನ್ನು ಜಾಗ್ರತೆಯಿಂದ ಇಡುತ್ತಾ "ನೋಡಿ ಸೋಮಿ, ನನ್ನ ಪತಿಯನ್ನು ಇದರಿಂದ ಖೂನಿ ಮಾಡಿರುವೆ. ತಾವೀಗ ಏನು ಮಾಡಬೇಕೋ ಮಾಡಿ."

"ವಿಳಾಸ?"

ತನ್ನ ಎದುರಿಗಿದ್ದ ವ್ಯಕ್ತಿಯನ್ನು ದಿಟ್ಟಿಸಿ ನೋಡಿದಳು. ಅವನು ತನ್ನ ಪಕ್ಕದಲ್ಲಿ ಕುಳಿತಿದ್ದ ಜೈಲರ್‌ನಿಗೆ ಬೊಟ್ಟು ಮಾಡುತ್ತಾ "ಫೋರಾಪಾರಾ, ಮೋದಿನಿಪುರ್" ಎಂದ.

ರೋಹಿಣಿ ಗೆಳತಿಯನ್ನು ಭೇಟಿ ಮಾಡಲು ಒಂದು ದಿನ ನ್ಯಾಯಾಲಯಕ್ಕೆ ಬಂದವಳು "ನೀನೇಕೆ ಆ ರಾತ್ರಿ ನನ್ನ ಮನೆಗೆ ಬರಲಿಲ್ಲ? ಇಬ್ಬರೂ ಕೂಡಿ ಆ ಸೂಳೆಮಗನನ್ನು ಹೂತು ಹಾಕಿಬಿಡಬಹುದಿತ್ತು, ಯಾರಿಗೂ ಗೊತ್ತಾಗುತ್ತಿರಲಿಲ್ಲ" ಎಂದಳು ಮನಬಿಚ್ಚಿ ಅಳುತ್ತ. ಆದರೆ ಶಾಂತ "ಇಲ್ಲ, ಇಲ್ಲ, ನನ್ನಿಂದ ಸಾಧ್ಯವಿರಲಿಲ್ಲ. ಅದು ಪಾಪ ಅಲ್ವಾ ದೇವರ ಶಿಶು ಮನುಷ್ಯನನ್ನು ಕೊಲ್ಲುವುದು? ನನಗೆ ತಕ್ಕನಾದ ಪ್ರಾಯಶ್ಚಿತ ಆಗಬೇಕು" ಎನ್ನುತ್ತ ತಲೆ ಆಡಿಸಿದಳು.

ಬಳಿಕ ಆಕೆ ಉಗುಳು ನುಂಗುತ್ತಾ "ದೀದಿ, ನನ್ನ ಮಕ್ಕಳ ಗತಿ..."

ಆದರೆ ರೋಹಿಣಿ ಪೊಲೀಸರಿಗೆ ಐದು ರೂ.ಗಳ ಲಂಚ ಕೊಟ್ಟು ಖರೀದಿಸಿದ್ದ ಸಮಯ ಮುಗಿಯುತ್ತ ಬಂದಿತ್ತು. "ಬಾ, ಬಾ ಮೇಲಧಿಕಾರಿಗಳು ನೋಡ್ತಾರೆ..." ಎಂದು ಪೇದೆ ಒತ್ತಾಯಿಸಿದ.

"ಅವರ ಬಗ್ಗೆ ಚಿಂತೆ ಬಿಡು. ನಾನು ನೋಡಿಕೊಳ್ತೀನಿ ಚೆನ್ನಾಗೇ" ಎಂದ ಅವಳ ಮಾತಿನ ಧ್ವನಿ ಹಿಂದಿನಿಂದ ಅವಳ ಕಿವಿಯ ಮೇಲೆ ಬಿದ್ದಿತು.

ನಿಯಮಾವಳಿಗಳೆಲ್ಲ ಮುಗಿದ ಮೇಲೆ ಟೇಬಲ್ ಬಳಿ ಕುಳಿತಿದ್ದ ಜೈಲರ್ ಅವಳಿಗೆ "ನೋಡಮ್ಮ ನಿನ್ನ ಗಂಡನ ಕೊಲೆ ಕೇಸಿನಲ್ಲಿ ನಿನಗೆ ಇಪ್ಪತ್ತು ವರುಷ ಶಿಕ್ಷೆ ಆಗಿದೆ. ಶಿಕ್ಷೆಯ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಲು ಸರ್ಕಾರ ನಿನಗೆ ವಕೀಲರ ನೆರವು ನೀಡುತ್ತದೆ. ಅಪೀಲು ಹೋಗುವ ಇರಾದೆ ಇದ್ದರೆ ಹೇಳು" ಎಂದು ಕೇಳಿದ.

ಶಾಂತಳ ಪಕ್ಕ ನಿಂತಿದ್ದ ಶ್ವೇತದಾರಿ ವ್ಯವಸ್ಥಾಪಕಿ "ಬಾ" ಎಂದ ದನಿ ಕೇಳಿಸಿತು.

ಕೆಲವೇ ನಿಮಿಷಗಳ ಬಳಿಕ ಬಿಹ್ರಾಂಪುರ ಜೈಲಿನ ಸ್ತ್ರೀಯರ ವಾರ್ಡಿನ ಬಾಗಿಲು ಅವಳ ಹಿಂದೆ 'ದಢ್' ಎಂದು ಮುಚ್ಚಿದ ಶಬ್ದ ಕೇಳಿಸಿತು.

ಮೂಲ : ಇಂಡಿಯನ್ ಲಿಟರೇಚರ್-2005

ಬೆಂಗಾಳಿ ಮೂಲ: ಜೋಯಾ ಮಿತ್ರ

■ *ಕನ್ನಡಕ್ಕೆ: ಸೊಂದಲಗೆರೆ ಲಕ್ಷ್ಮೀಪತಿ*

13 ◀◀ ಪೂರ್ವಭಾಷಿಗೆ ಶರಣು..

ಅನುಭವವಾಗಿ ನಿಜವಿರಬಹುದು. ಯಾಕೆಂದರೆ ವ್ಯವಸ್ಥೆಯ/ಧರ್ಮ-ಜಾತಿಯ ಪರವಾಗಿ ನೀವಿರುವುದಾದರೆ ಭಾರತದಲ್ಲಿ ಹೇರಳ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಆದರೆ ಯಥಾಸ್ಥಿತಿಯನ್ನು ಒಪ್ಪದೆ ಹೊಸವಿಚಾರ ಪ್ರತಿಪಾದಿಸುವವರಿಗಷ್ಟೆ ಆ ಸ್ವಾತಂತ್ರ್ಯದ ಇತಿಮಿತಿಗಳೇನೆಂದು ಸ್ಪಷ್ಟವಾಗಿ ಅರಿವಾಗುತ್ತಿದೆ.

• ಯಾವುದೇ ಸರ್ಕಾರವಿರಲಿ, ಎಂಥ ಗಹನ ಅಪರಾಧವೇ ಇರಲಿ, ಅದು ಪ್ರಭಾವೀ ಧರ್ಮ/ಜಾತಿ/ಪಕ್ಷದ ವ್ಯಕ್ತಿಗೆ ಸಂಬಂಧಿಸಿದ್ದಾದರೆ ಹೇಗೆ ಮುಚ್ಚಿ ಹೋಗುತ್ತಿದೆಯೆಂದು ನಾವು ನೋಡುತ್ತಿದ್ದೇವೆ. ಯಾವುದೇ ಜಾತಿಯ, ಪಂಥದ ಸ್ವಾಮಿಯಲ್ಲದ ನಿತ್ಯಾನಂದನನ್ನೇನೋ ಹಿಡಿದು ಹಾಕಿದರು. ಆದರೆ ಸ್ವಾಮಿಯೊಬ್ಬ ತಮ್ಮನ್ನು ಅತ್ಯಾಚಾರ ಮಾಡಿದ್ದಾನೆ ಎಂದು ಆ ಕುಲದ ಹೆಣ್ಮಕ್ಕಳು ಪದೇಪದೇ ದೂರು ಕೊಟ್ಟರೂ ವ್ಯವಸ್ಥೆಯೇ ಭೇದಿಸಲಾಗದ ಕೋಟೆ ಕಟ್ಟಿ ಆತನನ್ನು ರಕ್ಷಿಸುತ್ತಿದೆ.

ನಮ್ಮ ತನಿಖಾ ತಂಡದ ನಾಯಿಗಳಾದರೋ ವಾಸನೆ ಮೂಸುತ್ತ ಮೂಸುತ್ತ ಒಂದು ಸರ್ಕಲಿನಲ್ಲೋ, ಬಸ್‌ಸ್ಟ್ಯಾಂಡ್-ರೈಲ್ವೆ ಸ್ಪೇಷನಿನಲ್ಲೊ ನಿಂತುಬಿಡುತ್ತವೆ. ಅಲ್ಲಿಂದ ಮುಂದೆ ವಿಶಾಲ ಬಯಲೂ, ಅದರ ತುಂಬ ಗವಿ-ಬಿಲ-ಗುಹೆಗಳೂ ಇದ್ದು ಅಲ್ಲಿ ಸಾಕ್ಷಿಯೆಂಬ ಇರುವೆಯನ್ನು ಹುಡುಕುವುದೇ ಕಷ್ಟವಾಗಿದೆ. ಗುಂಡು ಹಾರಿಸಿದ ಶಾರ್ಪ್ ಶೂಟರುಗಳ ಸುಳಿವು ದೊರೆತೀತು. ಅವರಿಗೆ ಕಾಸು ಕೊಟ್ಟ ರೌಡಿಯ ಸುಳಿವು ದೊರೆತೀತು. ಆದರೆ ಆ ರೌಡಿಯನ್ನು ಸಾಕಿಕೊಂಡ ಅಪ್ಪಅಮ್ಮಗಳ ಬಗೆಗೆ ಯಾವ ಸಾಕ್ಷಿಯೂ ದೊರೆಯುವುದಿಲ್ಲ, ದೊರೆತರೂ ಕ್ರಮ ಕೈಗೊಳ್ಳುವುದು ಸಾಧ್ಯವಾಗುತ್ತಿಲ್ಲ. ಪ್ರಭಾವೀ ವ್ಯಕ್ತಿಯವರೆಗೆ ಬಂದುನಿಂತು ತನಿಖೆ 'ಇಲ್ಲಿಗೇ ಕತೆ ಮುಗಿಯಿತು' ಎಂದು ಅಪೂರ್ಣಗೊಳ್ಳುವುದೇ ಜಾಸ್ತಿಯಾಗಿದೆ. ಲಿಂಗಣ್ಣ ಸತ್ಯಂಪೇಟೆ ಅವರ ಶವ ಚರಂಡಿಯಲ್ಲಿ ಅರೆನಗ್ನಾವಸ್ಥೆಯಲ್ಲಿ ಪತ್ತೆಯಾಗಿ; ನರೇಂದ್ರ ಧಾಬೋಲ್ಕರ್, ಪನ್ಸಾರೆ ಹತ್ಯೆಯಾಗಿ ವರ್ಷಗಳೇ ಉರುಳಿದರೂ ಹಂತಕರ ಸುಳಿವು ಸಿಗದಿರುವುದು ನಮ್ಮ ಕಣ್ಣೆದುರಿಗಿದೆ.

ಹೀಗಿರುತ್ತ ಹತ್ಯೆ ಖಂಡಿಸಿ ಹಂತಕರನ್ನು ಹಿಡಿಯುವಂತೆ ಸರ್ಕಾರವನ್ನು ಒತ್ತಾಯಿಸುವುದು; ಹಲವೆಡೆ ಬರಹಗಾರರು, ಚಿಂತಕರು ಸಭೆ ನಡೆಸಿ, ತಮಗೆ ದೊರಕಿದ ಪ್ರಶಸ್ತಿ ಸಮ್ಮಾನಗಳನ್ನು ನಿರಾಕರಿಸಿರುವುದು ಮುಂತಾದ ಸಾಂಕೇತಿಕ ಹಾಗೂ ಸೃಜನಶೀಲ ಕ್ರಮಗಳೆಲ್ಲ ತನಿಖೆ ಚುರುಕುಗೊಳ್ಳುವಂತೆ ಒತ್ತಡ ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ಬಹುಪಾಲು ಅಪರಾಧ ತನಿಖೆಗಳೆಲ್ಲ ನಾನಾ ಕಾರಣಗಳಿಗಾಗಿ ಹಳ್ಳ ಹಿಡಿಯುತ್ತಿರುವಾಗ ಜಡಭರತ ವ್ಯವಸ್ಥೆಯ ಮೇಲೆ ಒತ್ತಡ ತರುವ ಸಲುವಾಗಿ ನಿರಂತರ ಹೋರಾಟ, ನ್ಯಾಯ ದೊರೆಯುವವರೆಗೆ ಹೋರಾಟ ಅಗತ್ಯವಾಗಿದೆ. ಎಂದೇ ಕಲಬುರ್ಗಿಯವರ ಹತ್ಯೆಯ ಸಂದರ್ಭದಲ್ಲಿ ಹಿರಿಕಿರಿಯರು ಭಿನ್ನಭೇದ ಮರೆತು ಒಟ್ಟಾಗಿ ಸೆ. 14ರಂದು ಧಾರವಾಡದಲ್ಲಿ ಬೃಹತ್ ರ‍್ಯಾಲಿ ಮತ್ತು ಸಮಾವೇಶದಲ್ಲಿ ಒಗ್ಗೂಡಿದರು. ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಸಮಾನ ಮನಸ್ಕರ ಜೊತೆಗೆ ಸ್ಥಳೀಯ ವಿದ್ಯಾರ್ಥಿಗಳೂ ಸಾವಿರಾರು ಸಂಖ್ಯೆಯಲ್ಲಿ ಸೇರಿ ಹಂತಕರನ್ನು ಗುರುತಿಸುವಂತೆ; ಹಂತಕ ವ್ಯವಸ್ಥೆಯ ಬೇರುಗಳನ್ನು ಬುಡಮಟ್ಟ ಕಿತ್ತುಹಾಕುವಂತೆ ಒತ್ತಾಯಿಸಿದರು. ವಿಚಾರಕ್ಕೆ ವಿಚಾರ ಉತ್ತರವಾಗಬೇಕೇ ವಿನಹ ಹತ್ಯೆಯಲ್ಲ; ಹತ್ಯೆ ಹೇಡಿಗಳ ಕೆಲಸ ಎಂಬ ಅಭಿಪ್ರಾಯ ಕೇಳಿಬಂತು. ಒಟ್ಟಾರೆ ಕೋಮುವಾದವನ್ನೂ, ಅದು ಸೃಷ್ಟಿಸುವ ಅಸಹನೆಯನ್ನೂ ತೊಡೆಯಲು ಕಲಬುರ್ಗಿ ಹತ್ಯೆಯನ್ನು ಮುಂದಿಟ್ಟುಕೊಂಡು ಶ್ರಮಿಸಬೇಕು; ಎಳೆಯ ಮನಸುಗಳಲ್ಲಿ ಆರೋಗ್ಯಕರ ಧಾರ್ಮಿಕತೆ ಬೆಳೆಸಬೇಕು; ಜಿಲ್ಲಾ ಕೇಂದ್ರಗಳಲ್ಲೂ ಸರಣಿ ಹೋರಾಟಗಳಾಗಬೇಕು ಎಂದು ನಿರ್ಧರಿಸಲಾಯಿತು.

ಜೀವಮಾನವಿಡೀ ಕಲಬುರ್ಗಿಯವರು ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದರು. ಅವರ ಮರಣವೂ ಜಾಗೃತ ಗುಂಪೊಂದು ಕ್ರಿಯಾಶೀಲವಾಗುವಂತೆ ಮಾಡಿರುವುದು 'ಶರಣರ ಗುಣವನ್ನು ಮರಣದಲ್ಲಿ ಕಾಣು' ಎಂಬ ಮಾತು ನಿಜಗೊಳ್ಳುವಂತೆ ಮಾಡಿದೆ. ಕಲಬುರಗಿಯವರನ್ನು ಮೌನವಾಗಿಸಿರುವೆವೆಂದು ಯಾರೂ ಬೀಗದಿರಲಿ, ಇದುವರೆಗೆ ಬಾಯಿಗೆ ಬೀಗ ಹಾಕಿಕೊಂಡವರ ನಾಲಿಗೆಗಳಲ್ಲೂ ಕಲಬುರ್ಗಿ ನುಡಿಯತೊಡಗಿದ್ದಾರೆ!

******

ಮನುಷ್ಯ ದೇಹ ಅಮರವಲ್ಲ, ಅವನ ಚೇತನ ಕಾಲದ ಸರಪಳಿಯಲ್ಲಿ ಭಾಷೆಯ ಒಂದು ಕೊಂಡಿ. ಒಬ್ಬ ಬರಹಗಾರನ ಸಾವು ಕೇವಲ ಒಂದು ಮಾನವ ಜೀವದ ಇಲ್ಲವಾಗುವಿಕೆಯಲ್ಲ, ಅದು ಒಂದು ಭಾಷೆಯ ಒಂದು ಸಂವೇದನೆಯ ಸಾವು. ಬರಹಗಾರನೆಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ, ದೇಹವಲ್ಲ, ಆತ ಅವನಂತೆ ಯೋಚಿಸುವ ಒಂದು ಸಮುದಾಯದ, ಒಂದು ತಲೆಮಾರಿನ ಪ್ರತಿನಿಧಿ. ಬರವಣಿಗೆ ಎಂದರೆ ಆಡದವರ ಮಾತು, ಕಾಣದವರ ಕಣ್ಣು. ವಾಲ್ಮೀಕಿ ರಾಮನ ಕುರಿತು ಹೇಳುವಂತೆ ಬರಹಗಾರ 'ಪೂರ್ವಭಾಷಿ'. ಎದುರಿರುವವರು ಆಡಲಾರದ, ಅನುಭವಿಸಲಾರದ ಸಂಕಟಗಳಿಗೆ ಮಾತಿನ ರೂಪ ಕೊಟ್ಟು ಅವರಿಗಿಂತ ಮೊದಲೇ ಆಡುವವ. ಅದರಲ್ಲೂ ಸಂಶೋಧಕನ ಸ್ಥಾನ ಕವಿಗಿಂತ, ಬರಹಗಾರನಿಗಿಂತ ವಿಭಿನ್ನ ಹಾಗೂ ವಿಶಿಷ್ಟ. ಸತ್ಯನಿಷ್ಠುರಿಯಾಗಿ ಚರಿತ್ರೆ ತಿಳಿಯಬೇಕಾದ, ತಿಳಿಸಬೇಕಾದ ಜವಾಬ್ದಾರಿ ಸಂಶೋಧಕರ ಹೆಗಲ ಮೇಲಿರುತ್ತದೆ. ಎಂದೇ ದಿಟ್ಟವಾಗಿ, ವಿಶಿಷ್ಟವಾಗಿ ಚರಿತ್ರೆಯ ಮೂಲ ಆಕರಗಳನ್ನೇ ಶೋಧಿಸುತ್ತ ನಡೆದಿದ್ದ; ನಾನೆಂದೂ ನೋಡಿರದ, ಮಾತನಾಡಿರದ, ಕಲಬುರ್ಗಿಯವರ ಸಾವು ಒಳಗೊಂದು ತಂತಿ ಕಡಿದ ಅನುಭವ ಹುಟ್ಟಿಸುತ್ತಿದೆ.

ಅಳಿವಿರದ ಚೇತನವೇ, ಇಡುವ ಹೆಜ್ಜೆಗಳಲಿಷ್ಟು ಸತ್ಯದ ಕಸುವು ತುಂಬು, ನಮಸ್ಕಾರ..

■ ಡಾ.ಎಚ್.ಎಸ್.ಅನುಪಮಾ

ಪಟೇಲ್ ಗದ್ದಲ

09 ◀◀

ಮಾತುಗಳು ಈ ವಾದವನ್ನು ಪುಷ್ಟೀಕರಿಸುತ್ತವೆ. (ವಿವರಗಳಿಗೆ ಬಾಕ್ಸ್ ನೋಡಿ)

ಒಳಮರ್ಮ ಏನಿರಬಹುದು?

ಈ ಎಲ್ಲ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮತ್ತೊಂದು ರೀತಿಯ ವಿಶ್ಲೇಷಣೆಯೂ ಚಾಲ್ತಿಯಲ್ಲಿದೆ. ನಿರಂಕುಶ ಪ್ರವೃತ್ತಿಯ ಮೋದಿಯನ್ನು ಅಂಕೆಗೆ ಒಳಪಡಿಸಲು ಆರೆಸ್ಸೆಸ್ ಉರುಳಿಸಿದ ದಾಳವೇ ಪಟೇಲ್ ಜಾತಿಯ ಪ್ರತಿಭಟನೆ ಎಂಬುದೇ ಈ ವಿಶ್ಲೇಷಣೆ. ಸನ್ನಿವೇಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ವಾದದಲ್ಲಿ ಸತ್ಯಾಂಶವಿದೆ ಎಂಬುದು ಗೋಚರಿಸುತ್ತದೆ. ಕಳೆದ ವಾರ ಆರೆಸ್ಸೆಸ್ ಸಭೆಗೆ ಪ್ರಧಾನಿ ಮೋದಿ ಮತ್ತು ಇತರ ಪ್ರಮುಖ ಮಂತ್ರಿಗಳು ಹಾಜರಾಗಿ, ವರದಿ ಒಪ್ಪಿಸಿ ಬುದ್ಧಿವಾದ ಕೇಳಿಬಂದಿದ್ದು ಈ ವಾದಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತದೆ.

ಇತ್ತ ಈ ಹಾರ್ದಿಕ್ ಪಟೇಲ್ ದೆಹಲಿಯಲ್ಲಿ ಗುಜ್ಜರ್, ಜಾಟ್, ಕುರ್ಮಿ ಜಾತಿಯ ಮುಖಂಡರನ್ನು ಭೇಟಿಯಾಗಿ ಜಂಟಿ ಸಭೆಗಳನ್ನು ನಡೆಸಿದ್ದಾನೆ. ಮೋದಿಯನ್ನು ಬಹಿರಂಗವಾಗಿಯೇ ಟೀಕಿಸುತ್ತಿರುವ ವಿಎಚ್‌ಪಿ ಧುರೀಣ ಪ್ರವೀಣ್ ತೊಗಾಡಿಯಾ ಮತ್ತು ಮಾಜಿ ಮಂತ್ರಿ ಗೋರ್ದನ್ ಝಡಾಫಿಯ ಈ ಹೋರಾಟಕ್ಕೆ ಬೆಂಬಲ ಘೋಷಿಸಿದ್ದಾರೆ. ಇನ್ನೊಂದು ಕುತೂಹಲಕರ ಸಂಗತಿಯೆಂದರೆ ಹಾರ್ದಿಕ್ ಪಟೇಲ್ ಮಾಜಿ ಮುಖ್ಯಮಂತ್ರಿ ಕೇಶುಭಾಯಿ ಪಟೇಲರನ್ನು ಭೇಟಿಯಾಗಿ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡ ಸುದ್ದಿಗಳು ಪ್ರಕಟವಾಗಿವೆ. ಬಿಜೆಪಿಯ ಹಿರಿಯ ನಾಯಕನಾಗಿದ್ದ ಕೇಶುಭಾಯ್ ಪಟೇಲ್‌ರನ್ನು 2001ರಲ್ಲಿ ಪದಚ್ಯುತಗೊಳಿಸಿ ಮೋದಿ ಮುಖ್ಯಮಂತ್ರಿ ಗಾದಿಗೇರಿದ್ದು ಎಂಬುದನ್ನು ನಾವು ಮರೆಯುವಂತಿಲ್ಲ.

ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಕೈಗೊಂಡ ದಂಡಿ ಗ್ರಾಮದಿಂದ 'ದಂಡಿ ಸತ್ಯಾಗ್ರಹ' ನಡೆಸುವುದಾಗಿ ಹಾರ್ದಿಕ್ ಘೋಷಿಸಿದ್ದ. ಆದರೆ ಗುಜರಾತ್ ಸರ್ಕಾರ್ ಅನುಮತಿ ನಿರಾಕರಿಸಿತು. ಈ ಮಧ್ಯೆ ಪ್ರಧಾನಿ ಕಾರ್ಯಾಲಯ ಚುರುಕಾಗಿ ಕೆಲಸ ಮಾಡಿದ ಪರಿಣಾಮವಾಗಿ ಪಟೇಲ್ ಸಮುದಾಯಕ್ಕೆ ಸೇರಿದ ಗುಜರಾತ್‌ನ ಒಬ್ಬರು ಹಿರಿಯ ಪೊಲೀಸ್ ಅಧಿಕಾರಿ ಮತ್ತು ಒಬ್ಬ ವಜ್ರದ ವ್ಯಾಪಾರಿ ರಂಗಕ್ಕಿಳಿದಿದ್ದಾರೆ. ಇವರೊಂದಿಗೆ ಸೌರಭ್ ಪಟೇಲ್ ಎಂಬ ಸಚಿವರೂ ಸೇರಿಕೊಂಡಿದ್ದಾರೆ. ಕೊನೆಗೆ ಹಾರ್ದಿಕ್ ಮತ್ತಿತರ ಮುಖಂಡರೊಂದಿಗೆ ಸಿಎಂ ಆನಂದಿಬೆನ್ ಸಭೆ ನಡೆಸಿ ಸದ್ಯಕ್ಕೆ ರಾಜೀ ಒಪ್ಪಂದಕ್ಕೆ ಬಂದಿದ್ದಾರೆ.


ಸದ್ಯಕ್ಕೆ ದಂಡಿ ಸತ್ಯಾಗ್ರಹವನ್ನು ಕೈಬಿಟ್ಟಿರುವುದಾಗಿ ಹಾರ್ದಿಕ್ ಘೋಷಿಸಿದ್ದಾನೆ. ದಂಡಿಯ ಸುತ್ತಮುತ್ತ ಹಿಂದುಳಿದ ಕೋಲಿ ಜಾತಿಯ ಪ್ರಾಬಲ್ಯವಿರುವುದರಿಂದ ಗಂಭೀರ ಸಂಘರ್ಷವಾಗುವ ಸಾಧ್ಯತೆ ಇತ್ತೆಂದೂ, ಅದನ್ನು ತಪ್ಪಿಸಲಿಕ್ಕಾಗಿಯೇ ದಂಡಿ ಕಾರ್ಯಕ್ರಮವನ್ನು ರದ್ದು ಮಾಡಿದ್ದಾರೆಂದೂ ಕೆಲವರ ಅಭಿಪ್ರಾಯ.

ಹಲವು ಸಂಕೀರ್ಣತೆಗಳಿಂದ ಕೂಡಿರುವ ಈ ವಿದ್ಯಮಾನ ಸರ್ವಾಧಿಕಾರಿ ಮೋದಿಗೆ ಒಂದು ಕಠಿಣ ಸವಾಲು ಆಗಿರುವುದಂತೂ ನಿಜ. ಅತ್ತ ಗುಜರಾತ್‌ನಲ್ಲಿ ಹಾರ್ದಿಕ್ ಹಿಂದಿಯಲ್ಲಿ ಭಾಷಣ ಮಾಡಿ ಸವಾಲೆಸೆಯುತ್ತಿದ್ದರೆ, ಇತ್ತ ದೆಹಲಿಯಿಂದ ಮೋದಿ ಪಟೇಲರನ್ನು ಉದ್ದೇಶಿಸಿ ಗುಜರಾತಿಯಲ್ಲಿ ಭಾಷಣ ಮಾಡಿದ್ದಾರೆ. ಶಾಂತಿ ಮಂತ್ರ ಜಪಿಸಿದ್ದಾರೆ. 'ಗಾಂಧೀಜಿ ಹುಟ್ಟಿದ ನಾಡು ಎಂಬುದನ್ನು ನೆನಪಿಸಿದ್ದಾರೆ. 2002ರಲ್ಲಿ ಇಂಥ ಒಂದೇ ಒಂದು ಮಾತನ್ನೂ ಆಡದ ಈ ಮನುಷ್ಯರೂಪಿ ಜೀವಿಗೆ ಇಂದು ಗಾಂಧೀಜಿ ನೆನಪಾಗಿದೆ.

ಈ ನಾಟಕೀಯ ವಿದ್ಯಮಾನ ಯಾವರೀತಿಯಲ್ಲಿ ಕೊನೆಯಾಗುತ್ತದೆ ಎಂಬುದನ್ನು ಈಗಲೇ ಊಹಿಸುವುದು ಕಷ್ಟಸಾಧ್ಯ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ


ನಮೋ ನಮಃ... ವಿಶ್ವಗುರು ಭಾರತ.





■ ಗಿರೀಶ್ ತಾಳಿಕಟ್ಟೆ

ವ್ಯಾಟ್ಸಪ್ ಸಂದೇಶ: ಇಲ್ಲಿಯವರೆಗೂ ಹಿಂದೂ ದೇವತೆಗಳ ಚಿತ್ರವನ್ನು ತಮ್ಮ ದೇಶದ ಒಳಗೆ ತೆಗೆದುಕೊಂಡು ಹೋಗಲು ನಿಷೇಧಿಸುತ್ತಿದ್ದ ದುಬಾಯಿ ರಾಜಮನೆತನದ ಸರಕಾರ ಇಂದು ನಮೋ ಭೇಟಿಯ ನಂತರ ಹಿಂದೂ ದೇವಾಲಯವನ್ನು ಕಟ್ಟಲು ಜಾಗ ಕೊಡಲೊಪ್ಪಿರುವ ನಿರ್ಧಾರ ನೋಡಿದರೆ ನಿಜಕ್ಕೂ ಈ ಮೋದಿ ಅಸಾಧ್ಯವನ್ನು ಸಾಧಿಸಬಲ್ಲ ಮಹಾನ್ ನಾಯಕ ಅಂತ ಸಾಬೀತಾಗಿದೆ..

ಸತ್ಯಾಂಶ: ತನ್ನ 'ರೊಟೀನು' ಅಭ್ಯಾಸದಂತೆ (ಮೋದಿ ಪ್ರಧಾನಿಯಾಗಿ ಆಯ್ಕೆಯಾದಂದಿನಿಂದ ಇಲ್ಲಿಯವರೆಗೆ 26 ಬಾರಿ ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಸರಾಸರಿ ತಿಂಗಳಿಗೆ ಒಂದು ಪ್ರವಾಸದಂತೆ ತಾವು ಅಧಿಕಾರ ವಹಿಸಿಕೊಂಡ ಈ 485 ದಿನಗಳಲ್ಲಿ 68 ದಿನಗಳನ್ನು ವಿದೇಶಿ ನೆಲದಲ್ಲೇ ಕಳೆದಿದ್ದಾರೆ) ಇತ್ತೀಚೆಗೆ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಭೇಟಿ ನೀಡಿದ್ದು, ಅದೇ ವೇಳೆಯಲ್ಲಿ ಅಲ್ಲಿನ ಅಬುದಾಬಿ ಪ್ರಾಂತೀಯ ದೊರೆ (ಸಂದೇಶದಲ್ಲಿ ಉಲ್ಲೇಖಿಸಿರುವಂತೆ ದುಬೈ ಪ್ರಾಂತೀಯ ದೊರೆ ಅಲ್ಲ - ಯುನೈಟೆಡ್ ಅರಬ್ ಎಮಿರೇಟ್ಸ್ ಎಂಬುದು ಏಳು ಪ್ರಾಂತ್ಯಗಳ ಒಂದು ಒಕ್ಕೂಟ) ಹಿಂದೂ ದೇವಾಲಯ ನಿರ್ಮಿಸಲು ಅಬುದಾಬಿಯಲ್ಲಿ ಜಾಗ ನೀಡಲು ಒಪ್ಪಿಗೆ ಸೂಚಿಸಿದ್ದನ್ನು ಒಳಗೊಂಡಂತೆ ಹುಟ್ಟಿಕೊಂಡ ಘರಾಕು ಸಂದೇಶ ಇದು.


ದುಬೈನಲ್ಲಿರುವ ಶಿವ-ಕೃಷ್ಣ ಜೋಡಿ ಮಂದಿರ


ದುಬೈ ಶಿವ-ಕೃಷ್ಣ ಜೋಡಿ ಮಂದಿರದಲ್ಲಿ ಶಿರಡಿ ಸಾಯಿಬಾಬಾನ ಆರ


ದುಬೈ ಮಂದಿರದ ಮುಂದೆ ದೇವರುಗಳ ಫೋಟೋಗಳ ಮಾರಾಟ


ದುಬೈನಲ್ಲಿರುವ ಸಿಖ್‌ರ ಗುರುದ್ವಾರ

ಒಂದು ಸುಳ್ಳು ಮತ್ತು ಒಂದು ಅನಗತ್ಯ ಉತ್ಪ್ರೇಕ್ಷೆಯೇ ಈ ಸಂದೇಶದ ಜೀವಾಳ. ಮೊದಲು ಸುಳ್ಳಿನ ವಿಚಾರಕ್ಕೆ ಬರುವುದಾದರೆ, ಮೋದಿಗೂ ಮುನ್ನ ಮುಸ್ಲಿಂ ಪ್ರಾಬಲ್ಯದ ಅರಬ್ ರಾಷ್ಟ್ರಗಳು ಹಿಂದೂ ದೇವತೆಗಳ ವಿಚಾರದಲ್ಲಿ ಅಸ್ಪೃಶ್ಯತೆ ಕಾಯ್ದುಕೊಂಡು ಬಂದಿದ್ದವು, ಆದರೆ ಮೋದಿ ಅದನ್ನು ಹೋಗಲಾಡಿಸಿ ಮಂದಿರ ನಿರ್ಮಿಸುತ್ತಿದ್ದಾರೆ ಎನ್ನುವುದನ್ನು ಜನರ ಮನಸ್ಸಿಗೆ ಇಳಿಸುವ ಉದ್ದೇಶ ಈ ಸಂದೇಶದ್ದು. ಅದಕ್ಕೋಸ್ಕರ 'ಹಿಂದೂ ದೇವರ ಫೋಟೊಗಳನ್ನು ಒಯ್ಯಲು ಕೂಡಾ ಅನುಮತಿ ಇರಲಿಲ್ಲ' ಎಂಬ ತಥಾಕಥಿತ ಸುಳ್ಳು ಪೋಣಿಸಲಾಗಿದೆ. ಸತ್ಯ ಸಂಗತಿಯೇನೆಂದರೆ ಅಂತಹ ಯಾವ ನಿರ್ಬಂಧವೂ ಇರಲಿಲ್ಲ. ಇಸ್ಲಾಂ ಧರ್ಮದ ಪ್ರಕಾರ ಮೂರ್ತಿ ಪೂಜೆ ನಿಷಿದ್ಧವಾಗಿರುವುದರಿಂದ ಸಾರ್ವಜನಿಕವಾಗಿ ಮೂರ್ತಿ ಪೂಜೆಗೆ ಅವಕಾಶವಿರಲಿಲ್ಲವೇ ಹೊರತು ತಮ್ಮತಮ್ಮ ಮನೆಗಳಲ್ಲಿ ದೇವರುಗಳ ಫೋಟೊ ಇಟ್ಟುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಅಲ್ಲಿಲ್ಲ. ಅಸಲಿಗೆ ಆ ದೇಶದ ಕಮರ್ಷಿಯಲ್ ರಾಜಧಾನಿ ಎಂದು ಕರೆಸಿಕೊಳ್ಳುವ ದುಬೈನಲ್ಲೇ ಎರಡು ಹಿಂದೂ ದೇವಾಲಯಗಳು ಮತ್ತು ಒಂದು ಸಿಖ್ ಗುರುದ್ವಾರವಿದೆ!

ದುಬೈನ ಬುರ್ ಪ್ರದೇಶದಲ್ಲಿರುವ ಶಿವ ಮತ್ತು ಕೃಷ್ಣ ಜೋಡಿ ಮಂದಿರಗಳು 1958ರಲ್ಲೇ ನಿರ್ಮಾಣಗೊಂಡು ಇವತ್ತಿಗೂ ಭಾರತೀಯ ಮತ್ತು ನೇಪಾಳ ಮೂಲದ ಭಕ್ತರಿಂದ ಆರಾಧಿಸಲ್ಪಡುತ್ತಿವೆ. ಶಿವ ಮತ್ತು ಕೃಷ್ಣರಲ್ಲದೆ ಶಿರಡಿ ಸಾಯಿಬಾಬಾನ ಮೂರ್ತಿ ಆರಾಧನೆಯೂ ಇಲ್ಲಿ ನಡೆಯುತ್ತಿದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ ಭಾರತೀಯ ರಾಯಭಾರ ಕಚೇರಿ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದೆ. ದೇವಸ್ಥಾನದ ತುಂಬಾ ದೇವರ ಫೋಟೊಗಳಿವೆ. ಈ ದೇವಸ್ಥಾನದ ಆಸುಪಾಸಿನಲ್ಲಿ, ನಮ್ಮ ಇಂಡಿಯಾದಲ್ಲಿ ಇರುವಂತೆಯೇ, ದೇವರ ಫೋಟೊಗಳು ಮತ್ತು ಪುಸ್ತಕಗಳನ್ನು ಮಾರಾಟ ಮಾಡುವ ಅಂಗಡಿಗಳ ಸಾಲೇ ಇದೆ. ಹಾಗಿದ್ದಾಗ ಎಮಿರೇಟ್ಸ್ ಕಂಟ್ರಿಯಲ್ಲಿ ಹಿಂದೂ ದೇವರ ಫೋಟೊಗಳಿಗೆ ನಿಷಿದ್ಧವಿದೆ ಎಂಬುದೇ ಹಸೀ ಸುಳ್ಳು. 2012ರವರೆಗು ಈ ಜೋಡಿ ದೇವಾಲಯಗಳ ಮೇಲಿನ ಮಹಡಿಯಲ್ಲೆ ಸಿಖ್‌ರ ಪವಿತ್ರ ಆರಾಧನ ಸ್ಥಳ ಗುರುದ್ವಾರ ಇತ್ತು, ಆದರೆ ದುಬೈ ದೊರೆಗಳ ಸರ್ಕಾರ ಸಿಖ್ ಭಕ್ತರ ಮನವಿಗೆ ಓಗೊಟ್ಟು ಅದಕ್ಕೆಂದೇ ಪ್ರತ್ಯೇಕ ಜಾಗ ಹೊಂದಲು ಅನುಮತಿ ನೀಡಿದ ನಂತರ ಅದೀಗ ದುಬೈನ ಜಬೆಲ್ ಅಲಿ ಪ್ರದೇಶಕ್ಕೆ ಸ್ಥಳಾಂತರಗೊಂಡಿದೆ.

ಅಂದಹಾಗೆ, ದುಬೈನಲ್ಲಿ ಮಾತ್ರವಲ್ಲ ಮುಸ್ಲಿಂ ಪ್ರಾಬಲ್ಯದ ಇತರೆ ಅರಬ್ ದೇಶಗಳಲ್ಲೂ ಹಿಂದೂ ದೇವಾಲಯಗಳಿಗೆ ಬರವಿಲ್ಲ. ಯೆಮೆನ್‌ನಲ್ಲಿ 1862ರಲ್ಲೇ ನಿರ್ಮಿಸಲ್ಪಟ್ಟ ತ್ರಿಕಮಾರೈಜಿ ಹವೇಲಿ ಮಂದಿರದ ಹೊರತಾಗಿ ಹನುಮಾನ್ ದೇವಾಲಯ, ಶ್ರೀ ರಾಮಚಂದರ್‌ಜಿ ದೇವಾಲಯ, ಹಿಂಗ್‌ರಾಜ್ ಮಾತಾಜಿ ಮಂದಿರ, ಶ್ರೀ ಶಂಕರ-ಹನುಮಾನ್ ದೇವಾಲಯಗಳಿವೆ. ಅದೇರೀತಿ ಇರಾನ್‌ನಲ್ಲಿ 1890ರಲ್ಲಿ ನಿರ್ಮಿಸಲ್ಪಟ್ಟ ಹಿಂದೂ ದೇವಾಲಯವಿದ್ದರೆ, ಒಮನ್‌ನ ಮಸ್ಕಟ್ ನಗರದಲ್ಲಿ ಒಂದು ಶತಮಾನದಷ್ಟು ಹಳೆಯದಾದ ಶಿವಮಂದಿರ, ಕೃಷ್ಣನ ದೇವಾಲಯಗಳಿವೆ. ಬಹ್ರೇನ್‌ನ ಮನಾಮಾ ನಗರದಲ್ಲಿ ಇಸ್ಕಾನ್‌ನ ಕೃಷ್ಣ ಮಂದಿರವಲ್ಲದೆ ಕೇರಳದಲ್ಲಿ ಆರಾಧಿಸಲ್ಪಡುವ ಗುರುವಾಯೂರಪ್ಪನ ದೇವಸ್ಥಾನವಿದೆ. ಈ ಎಲ್ಲಾ ದೇವಸ್ಥಾನಗಳನ್ನು ನಿರ್ಮಿಸಲು, ಅಲ್ಲಿ ನೆಲೆಸಿರುವ ಭಾರತೀಯ ಮೂಲದ ಭಕ್ತ ಸಮೂಹದ ಕೋರಿಕೆಯ ಮೇರೆಗೆ ಅಲ್ಲಿನ ಮುಸ್ಲಿಂ ಸರ್ಕಾರಗಳೇ ಅನುಮತಿ ನೀಡಿವೆ. ಹೀಗಿರುವಾಗ ಅರಬ್ ದೇಶಗಳು ಹಿಂದೂ ದೇವರ ಫೋಟೊಗಳನ್ನು ನಿಷೇಧಿಸಲು ಹೇಗೆ ಸಾಧ್ಯ.

ಯುನೈಟೆಡ್ ಅರಬ್ ಕಂಟ್ರಿಯಲ್ಲಿ ಹಿಂದೂ ದೇವರುಗಳ ಫೋಟೊ ನಿಷಿದ್ಧವಾಗಿರಲಿಲ್ಲ ಎನ್ನುವುದಕ್ಕೆ ಮತ್ತೂ ಒಂದು ಪುರಾವೆಯಿದೆ. ಅಬುದಾಬಿ ದೊರೆ ದೇವಾಲಯಕ್ಕೆ ಜಾಗ ನೀಡುವ ಘೋಷಣೆ ಪ್ರಕಟಿಸಿದಾಗ ಅಲ್ಲಿನ 'ದಿ ನೇಷನಲ್' ಸುದ್ದಿ ಮಾಧ್ಯಮ ಅಲ್ಲಿ ವಾಸವಿರುವ ಭಾರತೀಯ ನಾಗರಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿತ್ತು. ಆಗ ಪ್ರತಿಕ್ರಿಯಿಸಿದ್ದ 47 ವರ್ಷಗಳಿಂದ ಯುಎಇಯಲ್ಲೆ ನೆಲೆಸಿರುವ ಅಬುದಾಬಿಯ ಅಜಂತಾ ಜ್ಯುವೆಲ್ಲರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ತುಷಾರ್ ಪಟ್ನಿ 'ಇಷ್ಟು ದಿನ ಭಕ್ತಿ ಸಮರ್ಪಿಸಬೇಕೆಂದರೆ ದೂರದ ದುಬೈನ ದೇವಾಲಯಗಳಿಗೆ ಹೋಗಿಬರಬೇಕಿತ್ತು. ಅದರ ಹೊರತು ನಾವೆಲ್ಲ ನಮ್ಮನಮ್ಮ ಮನೆಗಳಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ ಇಟ್ಟುಕೊಂಡಿರುವ ಅವರವರ ದೇವರ ಫೋಟೊಗಳಿಗೆ ಪೂಜೆ ಮಾಡಬೇಕಿತ್ತು. ಈಗ ಅಬುದಾಬಿಯಲ್ಲೆ ದೇವಾಲಯ ನಿರ್ಮಾಣವಾಗುತ್ತಿರೋದು ಖುಷಿ ತಂದಿದೆ' ಎಂದಿದ್ದ. ಅಲ್ಲಿಗೆ ಭಾರತೀಯ ಮೂಲದ ಹಿಂದೂ ಧರ್ಮೀಯರ ಮನೆಯಲ್ಲಿ ದೇವರ ಫೋಟೊಗಳು ಇದ್ದವು ಎಂಬುದು ಖಾತ್ರಿಯಾಗುತ್ತದೆ.


ಇಲ್ಲಿ ಮತ್ತೊಂದು ಪ್ರಮುಖ ಸಂಗತಿಯೂ ಇದೆ. ಏನೆಂದರೆ 2013ರ ಜುಲೈನಲ್ಲೇ (ನರೇಂದ್ರ ಮೋದಿ ಭಾರತದ ಪ್ರಧಾನಿಯಾಗುವುದಕ್ಕೂ ಒಂದು ವರ್ಷ ಮೊದಲು) ಅಬುದಾಬಿಯ ಒಬ್ಬ ಸಿರಿವಂತ ಮುಸ್ಲಿಂ ಶೇಖ್ ವ್ಯಾಪಾರಿ 'ಸ್ವಾಮಿ ನಾರಾಯಣ' ಹಿಂದೂ ದೇವಾಲಯ ನಿರ್ಮಿಸಲು ತನ್ನ ಸ್ವಂತ ಜಾಗವನ್ನು ದಾನ ಮಾಡಿದ್ದಾಗಿ 'ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ (2013, ಜುಲೈ 9ರ ಸಂಚಿಕೆ, `Arab donates land for swaminarayan temple in UAE' ಎಂಬ ಶೀರ್ಷಿಕೆ) ವರದಿ ಮಾಡಿತ್ತು. ಆ ವರದಿಯ ಪ್ರಕಾರ ಭಾರತದ 'ಬೊಚಸ್‌ವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿ ನಾರಾಯಣ ಸಂಸ್ಥೆ' (ಬಿ.ಎ.ಪಿ.ಎಸ್) ಆ ಜಾಗವನ್ನು ದಾನವಾಗಿ ಪಡೆದಿದ್ದು, ಆ ದೇಶದ ಸರ್ಕಾರದಿಂದ ಆಡಳಿತಾತ್ಮಕ ನಿರಪೇಕ್ಷಣೆ ದೊರೆಯುತ್ತಿದ್ದಂತೆ ದೇವಸ್ಥಾನ ನಿರ್ಮಾಣ ಆರಂಭವಾಗಲಿದ್ದು ಮೂರ್ತಿ ಪೂಜೆಗೆ ನಿಷೇಧವಿರುವುದರಿಂದ ದೇವರ ಫೋಟೊ ಪ್ರತಿಷ್ಠಾಪಿಸಲು ಆ ಸಂಸ್ಥೆ ನಿರ್ಧರಿಸಿತ್ತು.

ಅಬುದಾಬಿಯ ಪ್ರಾಂತೀಯ ದೊರೆ ಮೊಹ್ಮದ ಝಯ್ಯದ್ ಅಲ್ ನೆಹ್ಯಾನ್, ಈಗ ನೀಡಲು ಉದ್ದೇ ಜಾಗ, ಮುಸ್ಲಿಂ ವ್ಯಾಪಾರಿ ದಾನ ಮಾಡಲು ಅದೇ ಜಾಗ ಎಂಬ ಮಾತುಗಳು ಕೇಳಿಬರುತ್ತಿದ್ದು ಸ್ಪಷ್ಟವಾಗಬೇಕಿದೆ. ಮುಸ್ಲಿಂ ಕಾನೂನುಗಳು ಜಾರಿಯ ಅರಬ್ ಎಮಿರೇಟ್ಸ್‌ನಲ್ಲಿ ಇಂತಹದೊಂದು ದಾನ ವೈಯಕ್ತಿಕ ನಿರ್ಧಾರಕ್ಕಿಂತ, ರಾಜತಾಂತ್ರಿಕ ಅನುಮ ದೊರಕಬೇಕಾಗಿರುವುದರಿಂದ, ಆ ಆಡಳಿತಾತ್ಮಕ ಪ್ರ ಪೂರ್ಣಗೊಳ್ಳಲು ಇಷ್ಟು ಕಾಲಾವಕಾಶ ತೆಗೆದುಕೊ 34 ವರ್ಷಗಳ ನಂತರ ಭಾರತ ಪ್ರಧಾನಿಯೊಬ್ಬರು ದೇಶಕ್ಕೆ ಭೇಟಿ ನೀಡುತ್ತಿರುವಂತಹ ಸಂದರ್ಭದ ಮಹತ್ವದ ಘೋಷಣೆ ಹೊರಡಿಸಲು ಅಲ್ಲಿನ ದೊರೆ ಕಾದಿರಬಹುದು. ಇದರಲ್ಲಿ ಮೋದಿಯ ವ ಘನತೆಯನ್ನು ಥಳುಕು ಹಾಕುವಂತಹ ಸಾಧ್ಯತೆ ಕಮ್ಮಿ.

ಹಾಗೊಮ್ಮೆ ಮೋದಿಯ ಪ್ರಭಾವಕ್ಕೆ ಹಿಂದೂ ದೇವಾಲಯದ ಜಾಗವನ್ನು ಮೋದಿಗೆ ಉ ರೂಪದಲ್ಲಿ (ನರೇಂದ್ರ ಮೋದಿಯ ಹಿಂದೂತ್ವ ಪ್ರತೀಕವಾಗಿ) ಅಬುದಾಬಿ ದೊರೆ ನೀಡಿದ್ದು ನಿಜವೆ ಆಗ ಜಾತ್ಯತೀತತೆಯ ನೆಲೆಗಟ್ಟಿನ ಮೇಲೆ ದ ಕಟ್ಟಿಕೊಂಡ ಭಾರತೀಯರೆಲ್ಲರು ತಲೆತಗ್ಗಿಸಬೇಕ ಏಕೆಂದರೆ, ಸೌಹಾರ್ದತೆ-ಸಹಬಾಳ್ವೆಗಳನ್ನೇ ತನ್ನ ಹೆಮ್ಮೆಯೆಂದು ಇಷ್ಟುದಿನ ಬೀಗಿಕೊಳ್ಳುತ್ತಿದ್ದ ಇಂಡಿಯಾವನ್ನು ಇಡೀ ವಿಶ್ವ, ಮೋದಿಯ ಧರ್ಮಾಧಾರಿತ ರಾಷ್ಟ್ರವನ್ನಾಗಿ ಕಾಣಲು ಶುರು ಎಂಬುದು ಅದರರ್ಥ. ಅದರ ಪರಿಣಾಮ ಪಾಲಿಗೆ ಒಳ್ಳೆಯದಂತೂ ಆಗಲಿಕ್ಕಿಲ್ಲ. ನಮ್ಮ ಸಂಘಟಿತ ಸಂಯೋಜನೆಯನ್ನು ಧ್ವಂಸ ಮಾಡಿ, ಅಸ್ಥಿರಗೊಳಿಸಲು ವಿದೇಶಿ ಶಕ್ತಿಗಳಿಗೆ ನಾವೆ ಮಾಡಿಕೊಟ್ಟಂತಾಗುತ್ತದೆ. ಅಷ್ಟಕ್ಕೂ ಧರ್ಮದ ನ ಮೇಲೆ ದೇಶನಿರ್ಮಾಣ ಮಾಡಿಕೊಂಡ ಪಾಕಿಸ್ತಾ ಹಲವು ರಾಷ್ಟ್ರಗಳು ಈಗ ಎಂತಹ ಸಂಕಷ್ಟ ಎಂಬ ನಿದರ್ಶನಗಳು ಕಣ್ಣಮುಂದೆಯೇ ಇವೆ ಜಾತ್ಯತೀತತೆ ಮತ್ತು ಬಹುಧರ್ಮೀಯ ಸಹಿಷ್ಣುತೆ ಜಗತ್ತು ನಮ್ಮನ್ನು ಗೌರವಿಸುತ್ತೊ, ಆ ಕಾ ವ್ಯತಿರಿಕ್ತವಾಗಿ ತಮ್ಮ ಜನಪ್ರತಿನಿಧಿಗಳು ಜಾಗತಿಕ ಗುರುತಿಸಲ್ಪಡುವುದು ಆರೋಗ್ಯಕರವಲ್ಲ.

ಈಗ ಸಂದೇಶದಲ್ಲಿರುವ ಅನಗತ್ಯ ಉತ್ಪ್ರೇಕ್ಷೆಯ ಬರೋಣ. ಮೋದಿ ಅಸಾಧ್ಯವಾದುದೇನನ್ನೊ 'ಮಹಾನ್' ಅಂತ ಅಕ್ಷರೀಕರಿಸ ಲಾಗಿದೆ. ▶


ಮುಸ್ಲಿಂ ತಲೆಧಿರಿಸನ್ನು ನಿರಾಕರಿಸುತ್ತಿರುವ ಮೋದಿ


ಅರಬ್ ದೇಶದ ಗ್ರ್ಯಾಂಡ್ ಮಸೀದಿಯಲ್ಲಿ ಮೋ

ಯೋಗೇಶ್ ಮಾಸ್ಟರ್

ಸುಗಾಣದ ಹೂರಣ

ಆರ್ಥಿಕತೆಗೆ ಧರ್ಮಾಧಾರ

ಶ್ರೀಮನ್ ಮಹಾವಿಷ್ಣುವು ರಾಮ, ಕೃಷ್ಣ ...ಮ, ಮತ್ಸ್ಯ ವರಾಹ ಇತ್ಯಾದಿ ...ಗಳನ್ನೆಲ್ಲಾ ಎತ್ತಿದ್ದನ್ನು ಪುರಾಣಗಳಲ್ಲಿ ...ಂತೆ ಇನ್ನೊಂದು ಪರಿಕಲ್ಪನೆ ಜನಸಾಮಾನ್ಯರಲ್ಲಿ ...ಬಂದವು. ಆದೇಂದರೆ ದೈವಾಂಶ ಸಂಭೂತ. ...ದೈವಾಂಶ ಸಂಭೂತದಿಂದ ಹುಟ್ಟಿದರೆಂದರೆ ...ಕ್ಷಾತ್ ದೇವರಲ್ಲ, ಆದರೆ ದೇವರ ...ೋ ಅಂಶದಿಂದ ಹುಟ್ಟಿದ್ದಾರೆ ಎಂದು. ...ಕೋಪದಿಂದಲೋ, ಬೆವರಿನಿಂದಲೋ, ...ದಲೋ, ಕಾರುಣ್ಯದಿಂದಲೋ, ...ದಲೋ, ಕಡೆಯ ಪಕ್ಷ ಅನುಗ್ರಹ ...- ಹೀಗೇ ದೈವೀಸಂಬಂಧದಿಂದ ...ವರಿಗೆ ದೈವಾಂಶ ಸಂಭೂತರೆಂದು ...ರೆ. ಯಾರೋ ಒಬ್ಬರು ದೇವರ ...ದಿಂದ ಹುಟ್ಟಿದರು ಎಂದರೆ ಯಾರೂ ...ಕೊಳ್ಳುವುದಿಲ್ಲ. ಆದರೆ ತಾನು ಯಾವುದೋ ದೇವರ ಅವತಾರ ಅಥವಾ ಪುನರ್ಜನ್ಮ ...ಅಲ್ಲಿ ವಿಶೇಷವಾದಂತಹ ಭಕ್ತರೂ ...ಳ್ಳುತ್ತಾರೆ ಮತ್ತು ವಿರೋಧಿಗಳೂ ...ಳ್ಳುತ್ತಾರೆ.


...ರೀತಿ ನಮ್ಮ ಗುಂಗುರು ಕೂದಲಿನ ...ಯ ಸತ್ಯ ಸಾಯಿಬಾಬಾ ತಾನು ಶಿರಡಿ ... ಪುನರ್ಜನ್ಮವೆಂದೋ ಅಥವಾ ...ವೆಂದೋ ಘೋಷಿಸಿಕೊಂಡ ನೆನಪು. ಅದಕ್ಕೆ ...ಭಕ್ತಾದಿಗಳು ಹೆಚ್ಚಾದಂತೆ, ಇವರನ್ನು ಕಂಡರೆ ...ರಡಿ ಸಾಯಿಬಾಬಾನ ಭಕ್ತರು ಕೇಸು ...ಳಿಗೆಲ್ಲಾ ಎಳೆದು ತಮ್ಮ ವಿರೋಧವನ್ನು ...ದರು.

...ಸಾಯಿಪ್ರಕಾಶ್‌ರವರ ಅವಾಂತರ

... ಸಾಯಿಪ್ರಕಾಶ್ ಎಂಬ ಕನ್ನಡ ಚಲನಚಿತ್ರ ...ಕರು ಪುಟ್ಟಪರ್ತಿ ಬಾಬಾನ ಭಕ್ತರು. ...ಕ ಮತ್ತು ಸಂಬಂಧಗಳ ಭಾವ ತೀವ್ರತೆಯ ...ಮದ ಸಿನಿಮಾಗಳನ್ನು ಮಾಡುವುದರಲ್ಲಿ

ದೈವಾಂಶಸಂಭೂತರು ಕೆಲವು ಸೂಚನೆಗಳನ್ನು ತೋರಬೇಕು. ಗೋಡೆಯಾಚೆ ಇರುವುದನ್ನು ಕಾಣಬೇಕು. ಒಂದೇ ಸಮಯದಲ್ಲಿ ಎರಡು ಕಡೆ ಅಥವಾ ಹೆಚ್ಚಿನ ಕಡೆ ಇರಬೇಕು. ಬಾಯ್ಬಿಟ್ಟು ತಿಳಿಸದೇ ಇದ್ದರೂ ಮನಸ್ಸಿನಲ್ಲಿರುವ ವಿಷಯಗಳನ್ನು ಹೇಳಬೇಕು. ಭೌತಿಕವಾಗಿ ಇರದೆಯೇ ದೂರದಲ್ಲಿರುವವರಿಗೆ ಸಹಾಯ ಮಾಡಬೇಕು. ಬೆಂಕಿ ಸುಡಬಾರದು, ನೀರಲ್ಲಿ ಮುಳುಗಬಾರದು, ಬೇಕೆಂದರೆ ಕಾಣಿಸಿಕೊಳ್ಳಬೇಕು, ನೋಡಿದರೂ ಕಾಣಿಸಿಕೊಳ್ಳಬಾರದು; ಹೀಗೆ ಹಲವು ಸಾಕ್ಷ್ಯಗಳನ್ನು ತೋರಬೇಕು.

ಜೂದಾಸನ ಭ್ರಮೆ



ಯೇಸುಕ್ರಿಸ್ತನಿಂದಲೂ ಇದೇ ರೀತಿಯ ಪವಾಡಗಳನ್ನು ಬಯಸಿದ್ದ ಜೂದಾಸ ತನ್ನ ಗುರುವು ತನ್ನ ಪವಾಡದಿಂದ ತನ್ನ ತಾನು ಉಳಿಸಿಕೊಳ್ಳುತ್ತಾನೆ ಎಂದು ಭ್ರಮಿಸಿ ಹಿಡಿದುಕೊಡುವ ಕೆಲಸ ಮಾಡಿದನೆಂದು ಹೇಳುತ್ತಾರೆ. ತಾನೇನೋ ಹೇಳಿದರೆ ಇವರೇನೋ ಅಂದುಕೊಳ್ಳುತ್ತಾರೆ, ತಾನೆತ್ತಲೋ ಒಯ್ಯ ಬಯಸಿದರೆ ಇವರೇನೋ ಬಯಸುತ್ತಾರೆ; ಮೌಢ್ಯ ಮತ್ತು ಅಜ್ಞಾನದ ಈ ಮೂರ್ಖಶಿಷ್ಯ ಮತ್ತು ಇತರ ಅನುಯಾಯಿಗಳಿಂದ ಬೇಸತ್ತು ಕ್ರಿಸ್ತ ಪುರೋಹಿತರು ರೂಪಿಸಿದ ಸಂಚಿನಲ್ಲಿ ತಾನು ಬಲಿಯಾಗಲು ಒಪ್ಪಿಬಿಟ್ಟ. ತನ್ನನ್ನು ತಾನು ಸಲ್ಲದ ಶಿಕ್ಷೆಯನ್ನು ಹತಾಶನಾಗಿ ಸ್ವೀಕರಿಸಿಬಿಟ್ಟ. ಇದೊಂದು ರೀತಿಯ ಆತ್ಮಹತ್ಯೆಯೆಂದೇ ಕೆಲವೊಮ್ಮೆ ಅನಿಸುತ್ತದೆ. ಕ್ರಿಸ್ತನಿಗೂ ಅವನ ಪರಮಪಿತ ಸರಿಯಾಗಿ ಕೈಕೊಟ್ಟ. ತನ್ನ ಸಂಕಟದ ಬಟ್ಟಲನ್ನು ದೂರ ಮಾಡು ಎಂದು ಕೇಳುವ ಕ್ರಿಸ್ತ ಹಾಗೆಯೇ ಸರಿ ಬಿಡು, ನಿನ್ನ ಇಚ್ಛೆಯಂತೆಯೇ ಆಗಲಿ ಎಂದೂ ಹೇಳಿದ. ಶಿಲುಬೆಯ ಮೇಲೆ ಸಾಯುವಾಗ ಯಾಕಪ್ಪಾ ನನ್ನ ಕೈಬಿಟ್ಟೆ ಎಂದು ನೊಂದು ಕೇಳಿಕೊಂಡ. ಕ್ರಿಸ್ತನ ಕ್ರೂರ ಸಾವಿಗೆ ಧಾರ್ಮಿಕ ಕಾರಣಗಳನ್ನು ಮುಂದಿಟ್ಟುಕೊಂಡು ಮಾಡಿದಂತಹ ಪುರೋಹಿತಶ ಸಂಚು ಸಾಮಾಜಿಕ ಕಳಂಕವಾದರೆ, ಪುರೋಹಿತರ ಅಂಕೆಯಲ್ಲಿರುವ ಜನರ ಮೌಢ್ಯವೂ ಕೂಡ ಇನ್ನೊಂದು ಕಾರಣ. ಹಾಗೆಯೇ

ಭಾವಾವೇಶದ ಪ್ರಾರ್ಥನಾ ಸಭೆಗಳು

ಕೆಲವು ಮೂರ್ಖಾತಿಮೂರ್ಖ ಪಾದ್ರಿಗಳು ಅಥವಾ ಪಾಸ್ಟರ್‌ಗಳು ಅದನ್ನೇ ನಿಜವೆಂಬಂತೆ ಪ್ರಾರ್ಥನಾ ಸಭೆಗಳಲ್ಲಿ ಗಟ್ಟಿದನಿಯಲ್ಲಿ ಗರ್ಜಿಸುತ್ತಾ ಬಡಪಾಯಿ ಭಕ್ತರ ಮೇಲೆ ಹೇರುವ ಪ್ರಯತ್ನಗಳನ್ನು ಮಾಡುತ್ತಾರೆ. ಅಲ್ಲೊಂದು ರೀತಿಯ ಸಾಮೂಹಿಕ ಸಮ್ಮೋಹನ ಉಂಟುಮಾಡಲು ಯತ್ನಿಸುತ್ತಾರೆ. ಭಾವಾವೇಶಕ್ಕೆ ಒಳಗಾಗಿ ಕೆಲವರು ಮೂರ್ಛಿತರಾಗುವುದು, ತಿಕ್ಕಲುತಿಕ್ಕಲಂತಾಡುವುದು, ಕೂಗಾಡುವುದು ಇತ್ಯಾದಿಗಳೆಲ್ಲಾ ನಡೆಯುವುದುಂಟು. ಅಂಗವೈಕಲ್ಯವನ್ನೋ ಅಥವಾ ಮನೋವೈಕಲ್ಯವನ್ನೋ ಅಲ್ಲೇ ಪ್ರಾರ್ಥನೆಯಲ್ಲಿ ಸರಿಪಡಿಸುವಂತಹ ನಾಟಕಗಳೂ ನಡೆಯುವುದುಂಟು. ಈ ಬಗೆಯ ವಿಚಿತ್ರ, ಪೈಶಾಚಿಕ ಭಾಷೆಯ ಬಡಬಡಿಸುವಿಕೆ ಯಂತಿರುವ, ಆವೇಶಭರಿತ ಪ್ರಾರ್ಥನಾ ಸಭೆಗಳು ಕೆಲವು ಪ್ರಾಟೆಸ್ಟೆಂಟ್‌ನ ಕವಲು ಪಂಗಡಗಳಲ್ಲಿ ಅತಿಹೆಚ್ಚು.


2001ರ ಡಿಸೆಂಬರ್ 30ರ ಸಂಜೆ ನಾನೂ ಮತ್ತು ನನ್ನ ಸ್ನೇಹಿತರು ಬೇಗೂರಿನ ಒಳಗೆ ಗುಡ್ಡಗಳ ನಿರ್ಮಾನುಷ್ಯ ಪ್ರದೇಶದಲ್ಲಿ ಅಡ್ಡಾಡುತ್ತಿದ್ದಾಗ ಪ್ರಾರ್ಥನೆಯಲ್ಲಿ ನಿರತನಾಗಿದ್ದ ಪ್ರವೀಣ್ ಎಂಬ ಕ್ರೈಸ್ತ ಸಾಫ್ಟ್‌ವೇರ್ ಇಂಜಿನಿಯರ್ ಪರಿಚಿತನಾದ. ಹಾಗೆಯೇ ಸ್ನೇಹಿತನಾದ. ಎಂದಿನಂತೆ ಬೈಬಲ್ಲಿನಲ್ಲಿ ನಮಗಿರುವ ಆಸಕ್ತಿಯನ್ನು ಕಂಡು ನಮ್ಮನ್ನು ಕೋರಮಂಗಲದ ಕ್ರೈಸ್ತರ ಸಮುದಾಯದ ಒಂದು ಪ್ರಾರ್ಥನಾ ಕೂಟಕ್ಕೆ ಪರಿಚಯಿಸಿದ. ತೀರ ಹೊಸಬರಾದ ನಮ್ಮನ್ನು ಬಾಲ್ಯ ಸ್ನೇಹಿತರಂತೆ ಉಪಚರಿಸಿದ ಅವರ ಮುಕ್ತ ಮನಸ್ಸಿಗೆ ನಾನು ಮಾರುಹೋದೆ. ಅವರ ಸ್ನೇಹವನ್ನು ನನ್ನ ಸ್ನೇಹಿತರು ಮತ್ತು ಶಿಷ್ಯರೊಂದಿಗೆ ಮುಕ್ತಕಂಠದಿಂದ ಹೊಗಳುತ್ತಲಿದ್ದೆ. ಅವರು ನಮ್ಮ ಮನೆಗೂ ಬಂದು ಪ್ರಾರ್ಥನೆ ಸಲ್ಲಿಸುವ ಇಚ್ಛೆ ವ್ಯಕ್ತಪಡಿಸಿದ್ದರು. ಪ್ರಾರ್ಥನೆ ಮತ್ತು ಧ್ಯಾನಗಳಲ್ಲಿ ಆಸಕ್ತಿಯಿರುವ ನಾನು ಅವರು ಬರುವ ಮುನ್ನವೇ ಬಾಗಿಲು ತೆರೆದಿದ್ದೆ. ಬಂದವರು ಬರಿಯ ಪ್ರಾರ್ಥನೆ ಮಾಡದೇ ನಮ್ಮ ಮೆದುಳಿಗೆ

ನೋಡುತ್ತಾ ಎಂದಿಗೂ ಗಂಭೀರವಾಗಿ ವಾಸ್ತವ ಜೀವನದಲ್ಲಿ ಪರಿಗಣಿಸದ ನಮ್ಮನ್ನೇ ಕೊಂಚಕಾಲ ಅಧೀರರಾಗುವಂತೆ ಮಾಡಿದ ಈ ಜನ ತೀರಾ ಸಾಮಾನ್ಯ ಅಥವಾ ಬಡ ಮನುಷ್ಯರನ್ನು ಹೇಗೆ ಕಾಡಬಹುದು ಎಂದು ನೆನೆದೇ ನಮ್ಮ ಸಾಮಾಜಿಕ ಪತನಗಳ ಬಗ್ಗೆ ಗಂಭೀರವಾಗಿ ಹೆದರಿದೆವು.

ಇಂತಹ ಸಾಂಸ್ಕೃತಿಕ ಮತ್ತು ಸಾಮಾಜಿಕ ಆತಂಕಕ್ಕೆ ಮತ್ತಷ್ಟು ಇಂಬು ಕೊಟ್ಟಿದ್ದು ಹೊಸೂರು ರಸ್ತೆಯ, ಹೊಸರೋಡಿನಲ್ಲಿರುವ ಆರ್ಕ್ ಇನ್ಸ್‌ಟಿಟ್ಯೂಟ್‌ನ ಚರ್ಚ್‌ನಲ್ಲಿ ನಡೆಯುತ್ತಿದ್ದ ಮತಾಂತರಗಳು! ನಾನು ಎಸ್‌ಎಫ್‌ಎಸ್ ಶಾಲೆಯಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾಗ, ನನ್ನ ಸಹೋದ್ಯೋಗಿ ಶ್ರೀಮತಿ ನಳಿನಾ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಹಿಂಡುಹಿಂಡಾಗಿ ನಡೆಯುತ್ತಿದ್ದ ಸಾಮೂಹಿಕ ಮತಾಂತರದಲ್ಲಿದ್ದಂತಹ ಜನರನ್ನು ನೋಡಿ ನನಗೆ ತೀರಾ ನೋವಾಯಿತು. ಸಾಲದಿಂದ, ಕಾಯಿಲೆಗಳಿಂದ, ವಿಫಲ ಸಂಬಂಧಗಳಿಂದ ನರಳುತ್ತಿರು ವವರು, ಮಾನಸಿಕವಾಗಿ, ಸಾಮಾಜಿಕವಾಗಿ ಬಹಳಷ್ಟು ಅಶಕ್ತರಾದವರು, ಆರ್ಥಿಕವಾಗಿ ನೆಲ ಕಚ್ಚಿರುವವರು ಆ ಪಾಸ್ಟರ್‌ಗಳು ಏನು ಹೇಳಿದರೂ ಕೇಳುತ್ತಾರೆ. ಆ ಪಾಪದ ಮನುಷ್ಯರ ಮುಖಗಳನ್ನು ನೋಡಬೇಕು. ತೀರಾ ದಯನೀಯವಾಗಿರುತ್ತದೆ. ಜೀವನದಲ್ಲಿ ಬಹಳವೇ ಹತಾಶರಾಗಿರುವಂತಹ ಮುಖಗಳು.

ಪ್ರಗತಿಪರ ಚಳವಳಿಗಳಲ್ಲಿ ಗುರುತಿಸಿಕೊಂಡಿರುವಂತಹ ಓರ್ವ ಕಾರ್ಯಕರ್ತ ನನಗೆ ಇತ್ತೀಚೆಗೆ ಸಲಹೆ ಕೇಳಿ ಮೆಸೇಜ್ ಮಾಡಿದ್ದ. ಅದೇನೆಂದರೆ, ಅವರ ನೆಂಟರೊಬ್ಬರು ಯಾರೋ ಕ್ರಿಸ್ತನಿಗೆ ಮೊರೆ ಹೋಗಿ, ಮತಾಂತರ ಹೊಂದಿದ್ದಾರೆ ನಾನೂ ಹಾಗೆ ಮಾಡಬೇಕೆಂದಿದ್ದೇನೆ. ನನಗೆ ಸಲಹೆ ನೀಡಿ. ನಾನು ದುರ್ಬಲ ಮನಸ್ಸಿನ ಮೇಲೆ ಪರಿಣಾಮ ಬೀರುವಂತಹ ಆ ಸಂಗತಿಗಳನ್ನೆಲ್ಲಾ ಬಿಡಿಸಿ ಹೇಳಿದರೂ ಆತ ತನ್ನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿದ. ತಾನು ಮತ್ತು ತನ್ನ ಕುಟುಂಬ ಅವರ ಕಮ್ಯುನಿಟಿಗೆ ಸೇರುವುದರಿಂದ, ಹೊಸದಾಗಿ ಬಂದಿರುವ ತಮಗೆ ಅಲ್ಲಿನ ಎಲ್ಲರೂ ಬೆಂಬಲ ಸೂಚಿಸುತ್ತಾ ಆರ್ಥಿಕವಾಗಿ ನೆರವಾಗುತ್ತಾರೆ. ಇದರಿಂದಲಾದರೂ ತನ್ನ ಮುಗ್ಗಟ್ಟಿನ ಪರಿಸ್ಥಿತಿ ಸರಿಹೋಗಬಹುದು ಎಂದು ಹೇಳಿದ. ನೇರವಾಗಿ ಬಾ ಮುಖಾಮುಖಿ ಮಾತಾಡೋಣ. ಯಾವುದೇ ಸಮಸ್ಯೆಯಾದರೂ ಧಾರ್ಮಿಕತೆ ಮತ್ತು ದೇವರ ನೆರವಿಲ್ಲದೇ ಬರಿದೇ ಸಹೃದಯ ಮತ್ತು ಪ್ರಾಮಾಣಿಕ ಕಾಳಜಿ ಇರುವವರ ನೆರವು ಪಡೆಯುವ ಬಗೆಯನ್ನು ವಿಚಾರ ಮಾಡೋಣ ಬಾ ಎಂದು ಕರೆದೆ.





...ಅವರೋ ತಮ್ಮ ನೆಚ್ಚಿನ ಗುರು ಮತ್ತು ...ವ ಶಿರಡಿ ಸಾಯಿಬಾಬಾನ ಸಿನಿಮಾವನ್ನು ...ರು. ಅದರಲ್ಲಿ ಪುಟ್ಟಪರ್ತಿ ಬಾಬಾನ ...ಘೋಷಣೆಯಂತೆ ಶಿರಡಿ ಬಾಬಾನ ಅವತಾರವೇ ...ಪರ್ತಿ ಬಾಬಾ ಅಂತ ತೋರಿಸಿದ್ದಕ್ಕೆ ...ಬಾನ ಟ್ರಸ್ಟ್‌ರವರು ಸಾಯಿಪ್ರಕಾಶ್ ಮೇಲೆ ...ಡಿದರು. ಆಗ ನಮ್ಮ ಈ ದೇವಮಾನವ ...ಿದ್ದರು. ಕೈಯಿಂದ ವಿಭೂತಿ ತರಿಸುವ, ...ವ ಸ್ವರ್ಣಲಿಂಗ ವಾಯಿಸ್ ಎಂದು ಹೊರಗೆ ... ಪವಾಡಪುರುಷನಿಗೆ ಸಾಯಿಪ್ರಕಾಶ್ ಗೋಳು ... ಪ್ರಾರ್ಥನೆ ಕೇಳಲಿಲ್ಲ, ಇವರ ಭಕ್ತಿ ...ಗಳು ಯದ್ವಾತದ್ವಾ ಕೈಕೊಟ್ಟು ...ಗಿ ಕುಸಿದರು. ಅವರ ಆರ್ಥಿಕ ಮುಗ್ಗಟ್ಟು ...ಗಿ ಮುಂದುವರಿಯಿತೆಂದರೆ ಆತ್ಮಹತ್ಯೆಗೂ ...ದ್ದರು. ನಾನು ಅವರನ್ನು ಹಂಸಲೇಖ ...ದಲ್ಲಿ ಹಲವಾರು ಬಾರಿ ಕಂಡಿದ್ದೇನೆ. ... ಸಾಯಿಬಾಬಾನ ಚಿತ್ರವನ್ನು ತೆಗೆದಾದ ...ವನ್ನು ಕಾಣುವಾಗಲೆಲ್ಲಾ ತಮ್ಮ ...ಗೆಯಿಂದ ತಮಗೆ ಒಳಿತಾಗುವುದೆಂದು ...ದ್ದನ್ನು, ಅದು ಛಿದ್ರವಾಗಿದ್ದ ನೋವಂತೂ ...ದಲ್ಲಿ ಢಾಳಾಗಿ ಕಾಣುತ್ತಿತ್ತು.

ಹತಾಶನಾಗಿದ್ದ ಕ್ರಿಸ್ತ ಸಾವಿನಿಂದ ತಪ್ಪಿಸಿಕೊಳ್ಳಲು ಬಯಸಿಲ್ಲ. ಅವನ ಸಾವು ನಿಶ್ಚಯವಾಗಿ ತಿಳಿಸುವುದೇನೆಂದರೆ ದೇವರು ಎಂಬುದು ಅಥವಾ ಎಂಬುವನು ಇಲ್ಲ!


ಆದರೆ ಕ್ರೈಸ್ತರು ಸ್ವರ್ಗವನ್ನೂ ಬಿಡಲಿಲ್ಲ, ದೇವರನ್ನೂ ಬಿಡಲಿಲ್ಲ, ಜೊತೆಗೆ ಮೂರನೇ ದಿನದ ಪುನರುತ್ಥಾನದ ಕಥೆಯನ್ನು ಜೋಡಿಸಿದರು. ಯಾವುದೇ ವಿಷಯವನ್ನು, ಅದೆಷ್ಟೇ ಅವಾಸ್ತವ ಮತ್ತು ಅಸಹಜವಾಗಿದ್ದರೂ ರೂಪಕದಂತೆ ಬಳಸಲು ಸಾಧ್ಯವಾಗುತ್ತದೆ. ನಾನು ಎಷ್ಟೋ ಕ್ರೈಸ್ತರ ಪ್ರಾರ್ಥನಾ ಸಭೆಗಳಲ್ಲಿ ಪಾದ್ರಿಗಳು ಹಾಗೆ ಮಾಡುವುದನ್ನು ನೋಡಿದ್ದೇನೆ. ವೈಚಾರಿಕವಾದ ಮತ್ತು ವೈಜ್ಞಾನಿಕವಾದ ಧೋರಣೆ ಇರುವಂತಹ ಪಾದ್ರಿಗಳು ಕ್ರಿಸ್ತನ ಬಗ್ಗೆ ಇರುವ ಐತಿಹ್ಯಗಳನ್ನು ಬುರುಡೆ ಎಂದೂ ಹೇಳದೇ, ಹಾಗೆ ಆಗಿತ್ತು ಎಂದೂ ಸಮರ್ಥಿಸಿಕೊಳ್ಳದೇ, ಅಂತಹ ವಿಷಯಗಳನ್ನು ರೂಪಕಗಳಂತೆ ಬಳಸುತ್ತಾ ಕ್ರಿಸ್ತನ ಬೋಧನೆ ಮತ್ತು ಕ್ರೈಸ್ತರ ಸಿದ್ಧಾಂತಗಳನ್ನು (ದಯೆ, ಪ್ರೀತಿ; ಪಶ್ಚಾತ್ತಾಪ, ನಿಷ್ಪಕ್ಷಪಾತವಾದ ಪ್ರೇಮ ಇತ್ಯಾದಿಗಳನ್ನು) ವಿವರಿಸಲು ಹೇಗೋ ಬಳಸಿಕೊಳ್ಳುತ್ತಾರೆ.

ಪರಪರ ಕೆರೆಯಲಾರಂಭಿಸಿದರು. 'ಗಣೇಶ ದೇವರಲ್ಲ. ಅವನಿಗೆ ಅಪ್ಪ ಅಮ್ಮ ಇದ್ದಾರೆ. ಗಂಡು ಹೆಣ್ಣು ಸೇರುವಂತಹ ಲೈಂಗಿಕತೆ ಒಂದು ಪಾಪದ ಕೆಲಸ. ಅದರಿಂದ ಹುಟ್ಟಿದಂತಹ ವ್ಯಕ್ತಿ ಹೇಗೆ ದೇವರಾಗುತ್ತಾನೆ. ಯೇಸು ಲೈಂಗಿಕತೆಯಿಂದ ಹುಟ್ಟಿಲ್ಲ. ಅವನೇ ಪರಮ ಪಾವನ. ಕಳ್ಳತನ ಮಾಡುವುದು ಪಾಪ, ನಿಮ್ಮ ಕೃಷ್ಣ ಕಳ್ಳತನ ಮಾಡುತ್ತಿದ್ದ. ಅವನು ಅಪರಾಧಿ. ಅಂತವನು ಹೇಗೆ ದೇವರಾಗುತ್ತಾನೆ.' ಒಟ್ಟಿನಲ್ಲಿ, ಯಾರ್‍ಯಾರನ್ನೋ ಸಾಧಾರಣ ಮನುಷ್ಯರನ್ನು ದೇವರೆನ್ನುವ ಬದಲು ಅಥವಾ ಇಂತಹ ಸುಳ್ಳು ದೇವರುಗಳನ್ನು ಆಶ್ರಯಿಸುವ ಬದಲು ಪರಮ ಪಾವನನಾದ, ಸೆಕ್ಸ್ ಇಲ್ಲದೇ ಹುಟ್ಟಿರುವ ಯೇಸುವಿಗೆ ಶರಣು ಬನ್ನಿ. ಕಾರಿಲ್ಲದ ನಿಮಗೆ ಕಾರು ಕೊಡಿಸುತ್ತಾನೆ. ಕೆಲಸ, ದುಡ್ಡು ಎಲ್ಲಾ ಕೊಡ್ತಾನೆ. ನಿಮ್ಮ ಸಾಲಗಳನ್ನು ತೀರಿಸ್ತಾನೆ. ನಿಮ್ಮ ಕಾಯಿಲೆಗಳನ್ನು ವಾಸಿ ಮಾಡುತ್ತಾನೆ. ಇತ್ಯಾದಿ ಆಶ್ವಾಸನೆಗಳು. ನಾವು ಬೆಚ್ಚಿಬಿದ್ದೆವು. ಅಕ್ಷರಶಃ ಪ್ರಾರ್ಥನೆ, ಧ್ಯಾನ, ವಿಚಾರ ವಿನಿಮಯ ಅಂತ ನಾವು ಗಂಭೀರವಾಗಿದ್ದವರು, 'ಗುರೂ, ನಮ್ಮನ್ನು ಬಿಟ್ಟುಬಿಡು.' ಅಂತ ಅವರೊಂದಿಗೆ ತರಲೆ ಮಾಡುತ್ತಾ ವಿಷಯವನ್ನೇ ತಿಳಿಗೊಳಿಸಿ, ನಗಿಸಿ, ರೇಗಿಸಿ ಕಳುಹಿಸಿಬಿಟ್ಟೆವು. ಸ್ವರ್ಗ, ನರಕ, ಪಾಪ, ಪುಣ್ಯ, ದೇವರು, ದೆವ್ವ ಇವುಗಳನ್ನು ರೂಪಕಗಳು ಅಥವಾ ಪರಿಕಲ್ಪನೆಗಳು ಎಂದಷ್ಟೇ

ಆದರೆ ನೀವೇ ಆರ್ಥಿಕ ಸಹಾಯ ಮಾಡುವಂತಿದ್ದರೆ ಮಾತ್ರ ಬರುತ್ತೇನೆ. ಬೇರೆಯವರ ಬಳಿ ಕೇಳುವುದು ಬೇಡ ಮತ್ತು ಹೀಗೆ ನಾನು ಕ್ರೈಸ್ತ ಮತಕ್ಕೆ ಮತಾಂತರವಾಗುವ ವಿಷಯವನ್ನೂ ಯಾರ ಬಳಿಯೂ ಹೇಳಬೇಡಿ ಪ್ಲೀಸ್ ಎಂದು ಕೇಳಿಕೊಂಡ. ತಾನೊಬ್ಬ ಪ್ರಗತಿಪರನಾಗಿದ್ದು, ವಿಚಾರವಾದಿಯಾಗಿದ್ದು ಹೀಗೆ ಒಂದು ಧರ್ಮದ ಆಶ್ರಯಪಡೆಯುವುದು, ಅದರಲ್ಲೂ ಆರ್ಥಿಕವಾಗಿ ಎಂದರೆ ತೀರಾ ಮುಜುಗರ ಮತ್ತು ನಾಚಿಕೆಯ ಸಂಗತಿಯಾಗಿ ಅವರನ್ನು ಕಾಡಿದ್ದಿರಬಹುದು. ಈ ಬಗೆಯ ವೈರುಧ್ಯಗಳಲ್ಲಿ ಅಥವಾ ಸಂಕಷ್ಟಗಳ ದ್ವಂದ್ವಗಳಲ್ಲಿ ಅನೇಕರು ಬಳಲುತ್ತಾರೆ.

ನೇಪಾಳದ ರಾಮ್ ಬಹದ್ದೂರ್ ಎಂಬ ನವ ಬುದ್ಧನ ಬಗ್ಗೆ ದ ಇನ್‌ಕ್ರೆಡಿಬಲ್ ಬುದ್ಧ ಬಾಯ್ - ಸೈಂಟಿಫಿಕ್ ಕಮ್ಯುನಿಟಿ ಪಜಲ್ಡ್ ಆಫ್ಟರ್ ಮೆಡಿಟೇಟಿಂಗ್ ಬುದ್ಧ ಬಾಯ್ ಗೋಸ್ ವಿತೌಟ್ ಫುಡ್ ಆರ್ ವಾಟರ್ ಫಾರ್ 10 ಮಂತ್ಸ್ ಎಂಬ ಲೇಖನ ಓದುವಾಗ ಅನೇಕ ಒಳನೋಟಗಳು ದೊರಕಿದವು. ಹಾಗೂ ಯಾವುದೇ ಧರ್ಮವನ್ನು ನೆಚ್ಚಿಕೊಳ್ಳಲು ಕಾರಣ ಮತ್ತು ಅನುಮಾನಗಳು ಕೂಡ ಹುಟ್ಟಿದವು. ಅವುಗಳನ್ನು ಕೂಲಂಕಷವಾಗಿ ವಿಚಾರಿಸೋಣ ಮುಂದಿನ ಸಂಚಿಕೆಗಳಲ್ಲಿ.

ವಾಟ್ಸಪ್ ಬ್ರೈನ್-ವಾಶ್ ಭಾರತಕ್ಕೆ ಕೆಡುಕು ಉಂಟುಮಾಡಲಿ



ಗಿರೀಶ್ ತಾಳಿಕಟ್ಟೆಯವರ ವಾಟ್ಸ್ ಆಪ್ ಟೆರರಿಸಮ್ ಅಂಕಣ ತುಂಬಾ ಕೌತುಕಪೂರ್ಣವಾಗಿದೆ. ಕಾಲ್ಪನಿಕ ಪುರಾಣ ಕಥೆ ಹಾಗೂ ಶಬ್ದಗಳ ಜಾಲ ಹೆಣೆದು ಭಾರತೀಯ ಸಮಾಜವನ್ನು ತಮ್ಮ ಮುಷ್ಠಿಯಲ್ಲಿ ಇಟ್ಟುಕೊಳ್ಳುವ ಕಲೆ ವೈದಿಕರಿಗೆ ಮೂರು ಸಾವಿರ ವರ್ಷ ಹಿಂದಿನಿಂದಲೇ ಕರಗತವಾಗಿದೆ. ಹಿಂದೆಲ್ಲ ರಾಕ್ಷಸರ ಸುಳ್ಳು ಕಥೆ ಕಟ್ಟಿ ಸಮಾಜವನ್ನು ಮಂಗ ಮಾಡುತ್ತಿದ್ದರು. ಈಗ ವೈಜ್ಞಾನಿಕ ಮುಸುಕು ಹಾಕಿದ ಕಟ್ಟು ಕತೆಗಳನ್ನು ಪ್ರಚಾರ ಮಾಡಿ



ಜನರನ್ನು ಮೂರ್ಖರನ್ನಾಗಿಸುತ್ತಿದ್ದಾರೆ. ಎಷ್ಟಾದರೂ ವೈದಿಕ ಧರ್ಮ ಅಡಗೋಲಜ್ಜಿ ಕಥೆಗಳ ಅಡಿಪಾಯದ ಮೇಲೆ ನಿಂತಿರುವ ಧರ್ಮ ತಾನೇ. ಈ ಆಧುನಿಕ ಜಗತ್ತಿನಲ್ಲಿ ಏನೇ ಹೊಸ ಆವಿಷ್ಕಾರವಾಗಲಿ ಅಥವಾ ಏನೇ ಪುರಾತನ ವಸ್ತು-ವಿಷಯಗಳು ಬೆಳಕಿಗೆ ಬರಲಿ ಅದು ಭಾರತದ ವೈದಿಕ ಮೂಲದ್ದು ಎಂದು ಸಮರ್ಥಿಸುವ ಒಂದು ಕಟ್ಟು ಕತೆ ಕಟ್ಟಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡುವುದರಲ್ಲಿಯೇ ಚಡ್ಡಿ ಚತುರರ ಒಂದು ವಿದ್ಯಾವಂತ ಗ್ಯಾಂಗ್ ಮಗ್ನವಾಗಿದೆ.

ಐದು ವರ್ಷಗಳ ಹಿಂದೆ ಮಂಗಳೂರಿನ ವಿಮಾನ ಅಪಘಾತದಲ್ಲಿ 154 ಜನ ಸತ್ತು ಕೇವಲ ನಾಲ್ಕು ಜನ ಬದುಕುಳಿದಿದ್ದು ಅವರು ಗಾಯತ್ರಿ ಮಂತ್ರ ಪಠಿಸುತ್ತಿದ್ದ ರಿಂದಂತೆ (ಮೂಲದಲ್ಲಿ ಬಚಾವಾದ ನಾಲ್ವರೂ ಬೇರೆ ಧರ್ಮದವರಾಗಿದ್ದರು ಹಾಗೂ ಸತ್ತವರಲ್ಲಿ ದಿನಾ ಗಾಯತ್ರಿ ಮಂತ್ರ ಪಠಿಸುತ್ತಿದ್ದ ಬಹಳಷ್ಟು ಹಿಂದೂಗಳಿದ್ದರು), ಮುಂಬೈ ತಾಜ್ ಹೊಟೇಲ್ ಮೇಲೆ ಉಗ್ರರ ದಾಳಿಯಲ್ಲಿ ಒಬ್ಬ ಬಚಾವಾದವನು ತಾನು ಹನುಮಾನ್ ಚಾಲಿಸಾ ಪಠಿಸುತ್ತಿದ್ದುದರಿಂದ ಉಗ್ರರಿಂದ ಬಚಾವಾದೆ ಎಂದು ಹೇಳಿರುವ ಕಾಲ್ಪನಿಕ ಸಂದರ್ಶನ ಮಂಗಳೂರಿನ ಉದಯವಾಣಿಯಂತಹ ವೈದಿಕ ಪತ್ರಿಕೆಗಳು ಪ್ರಕಟಿಸಿದ್ದವು.

ಮೀನುಗಾರರು ವಿಷ್ಣು ಸಹಸ್ರನಾಮ ಪಠಿಸುವುದರಿಂದ ಸಮುದ್ರ ಕೊರೆತ ಮತ್ತು ಸಮುದ್ರದ ಭೀಕರ ಅಲೆಗಳನ್ನು ತಡೆಯಬಹುದಂತೆ. ಕೊಲಂಬಸ್ ಕಂಡುಹಿಡಿದ ದಕ್ಷಿಣ ಅಮೆರಿಕದ ಮಾಯಾ-ಇಂಕಾ-ರೆಡ್ ಇಂಡಿಯನ್ ಮೂಲ ನಿವಾಸಿಗಳೆಲ್ಲಾ ವೈದಿಕರಾಗಿದ್ದು ಪ್ರಳಯದ ಮುನ್ಸೂಚನೆ ಕೊಡುವ ಮಾಯನ್ ಕ್ಯಾಲೆಂಡರ್ ವೈದಿಕರದಂತೆ. ಈಜಿಪ್ಟಿನ ಪಿರಾಮಿಡ್ ಕಟ್ಟಲು ಮಾರ್ಗದರ್ಶನ ಮಾಡಿದ ವಾಸ್ತು ತಜ್ಞರು ಭಾರತೀಯ ವೈದಿಕರಂತೆ. ಹೋಮ ಹವನ ಯಜ್ಞದಿಂದ ಪಾಸಿಟಿವ್ ಎನರ್ಜಿ ಹುಟ್ಟುತ್ತದಂತೆ. ಯುರೋಪಿನ ಯಾವುದೋ ವಿಶ್ವವಿದ್ಯಾಲಯದ ಹೆಸರು ಹೇಳಿ ಅಲ್ಲಿಯವರು ಸಂಶೋಧನೆಯಿಂದ ಇದನ್ನು ಸಾಬೀತುಮಾಡಿದ್ದಾರೆಂದು ಕಥೆ ಕಟ್ಟಲಾಗುತ್ತದೆ. ಅಗ್ನಿ ಪೂಜಕರಾಗಿದ್ದ ಸುಮೇರಿಯಾ ಪರ್ಷಿಯಾ (ಇರಾಕ್-ಇರಾನ್) ದೇಶದವರು ಮೂಲತಃ ಆರ್ಯ ವೈದಿಕರಾಗಿದ್ದು ನಂತರ ಬಲಾತ್ಕಾರದಿಂದ ಮುಸ್ಲಿಮ ರಾದರಂತೆ. ಮಕ್ಕಾದ ಕಾಬಾದಲ್ಲಿರುವುದು ಶಿವಲಿಂಗವಂತೆ. ಸಂಸ್ಕೃತವು ಜಗತ್ತಿನ ಎಲ್ಲ ಭಾಷೆಗಳ ತಾಯಿಯಂತೆ. ಚೀನಾದ ಫೆಂಗ್-ಶ್ವೇ ವಾಸ್ತುಶಾಸ್ತ್ರ ಸಹ ವೈದಿಕರದಂತೆ. ಹಾವಾಡಿಗರ ದೇಶವೀಗ ಹಾವು ತಿನ್ನುವವರ ದೇಶಕ್ಕಿಂತ ಮುಂದೆ ಹೋಗಿದೆ ಎಂದು ಅಮೆರಿಕನ್ನರೇ ಒಪ್ಪಿದ್ದಾರಂತೆ. ಭಾರತವೀಗ ಜಗದ್ಗುರುವಾಗಿದೆ. ಇಡೀ ವಿಶ್ವವೇ ಭಾರತದತ್ತ ಬೆರಗುಣ್ಣಿಂದ ನೋಡುತ್ತಿದೆ ಎಂಬ ಪೊಳ್ಳು ಬಡಾಯಿಯ ಕತೆಗಳು ವ್ಯಾಟ್ಸಪಲ್ಲಿ ತುಂಬಿ ಹೋಗಿದೆ (ಈ ವೈಜ್ಞಾನಿಕ ಯುಗದಲ್ಲೂ ಇವರಂತಹ ಮೂರ್ಖರಿದ್ದಾರಲ್ಲ ಎಂದು ಇಡೀ ಜಗತ್ತೇ ಭಾರತದತ್ತ ಕನಿಕರದಿಂದ ನೋಡುತ್ತಿರಬಹುದು ಬಿಡಿ!).

ನಿಜವಾಗಿಯೂ ವಾಟ್ಸಪ್ ಟೆರರಿಸಮ್‌ಗಿಂತ ವಾಟ್ಸಪ್ ಬ್ರೆನ್-ವಾಶ್ ಭಾರತಕ್ಕೆ ಹೆಚ್ಚು ದೂರಗಾಮಿ ಕೆಡುಕು ಉಂಟುಮಾಡಲಿದೆ.

- ಹರೀಶ್ ಎಂ ರಾವ್, ಉಡುಪಿ

ಹೆಂಗಸರ ತಲೆಯಲ್ಲಿ ಹುಳುಬಿಡುವ ವಾಸ್ತು ತಜ್ಞರು

ಕಳೆದ ವಾರದ ಸಂಚಿಕೆಯ 'ಮೌಢ್ಯಮೇವ ಜಯತೆ' ಲೇಖನದಲ್ಲಿ ಶಶಿ ಪುತ್ತೂರು ಮತ್ತು ಶ್ರೀನಿವಾಸ ಕಾರ್ಕಳ ಇವರಿಬ್ಬರೂ ಬರೆದ ಲೇಖನಗಳನ್ನು ಓದಿ ಹೊಟ್ಟೆ ಹುಣ್ಣಾಗುವಷ್ಟು ನಗುಬಂತು. ಜ್ಯೋತಿಷಿಗಳಿಗಿಂತಲೂ ಈ ವಾಸ್ತು ಪಂಡಿತರು ಹೆಚ್ಚು ಖತರ್ನಾಕ್. ಕಾರಣ ಜ್ಯೋತಿಷಿಗಳ



ಸಲಹೆ ಕೇವಲ ಸಾವಿರ ನುಂಗಿದರೆ ವಾಸ್ತು ಪಂಡಿತರ ಸಲಹೆಗಳು ಲಕ್ಷಾಂತರ ನುಂಗುತ್ತವೆ. ಯಾವುದೇ ಮನೆಯ ಹೆಂಗಸರ ತಲೆಯಲ್ಲಿ ಇವರಿಬ್ಬರು ಹುಳು ಬಿಟ್ಟು ಹೋಗಿಬಿಡುತ್ತಾರೆ, ನಂತರ ಆ ಹೆಂಗಸರು ಗಂಡನ ತಲೆ ತಿಂದು ಜೀವನ ದುರ್ಬರ ಮಾಡುತ್ತಾರೆ.

ನಿಮ್ಮ ನೆರೆಹೊರೆಯಲ್ಲಿ ಅಥವಾ ಆಫೀಸಿನಲ್ಲಿ ಇರುವ ಅರೆಜ್ಞಾನವುಳ್ಳ ವಾಸ್ತು ತಜ್ಞರು ಇದಕ್ಕಿಂತಲೂ ಹೆಚ್ಚು ಡೆಂಜರಸ್. ಇಂತಹವರನ್ನು ಯಾವಾಗಲೂ ನಿಮ್ಮ ಹೊಸ ಮನೆಯ ಗೃಹಪ್ರವೇಶಕ್ಕೆ ಕರೆಯಲೇಬಾರದು! ಯಾಕೆಂದರೆ ಅಂತಹವರು ಬಂದು ಕೇವಲ ನಿಮ್ಮ ಮನೆ ನೋಡಿ ಊಟ ಮಾಡಿ ಹೋಗುವುದಿಲ್ಲ, ಯಾರೂ ಕೇಳದಿದ್ದರೂ ಇವರು ತಾವಾಗಿಯೇ ನಿಮ್ಮ ಮನೆಯ ಹೆಂಗಸರಿಗೆ ಉಚಿತ ವಾಸ್ತು ಸಲಹೆ ಕೊಡುತ್ತಾರೆ. ನಿಮ್ಮ ಹೊಸ ಮನೆಯಲ್ಲಿ ಅದು ಸರಿಯಿಲ್ಲ, ಇದು ಅಶುಭ, ಅದು ಈ ದಿಕ್ಕಿಗಿರಬೇಕಿತ್ತು ಎಂದೆಲ್ಲಾ ಐಬು ತೆಗೆದು ಹೆಂಗಸರ ತಲೆಯಲ್ಲಿ ಹುಳುಬಿಟ್ಟು ಮೊದಲ ದಿನವೇ ನಿಮ್ಮ ಹೊಸ ಮನೆ ಕಟ್ಟಿಸಿರುವ ಸಂತಸವನ್ನು ನಾಶಮಾಡಿ ಪಟ್ಟಾಗಿ ಊಟ ಹೊಡೆದುಹೋಗುತ್ತಾರೆ. ಆದರ ಕೆಟ್ಟ ಪರಿಣಾಮ ನಂತರ ನೀವು ಜೀವನವಿಡೀ ಅನುಭವಿಸಬೇಕಾಗುತ್ತದೆ.

ನನ್ನ ಗೆಳೆಯರೊಬ್ಬರು ತನಗೆ ಹಿರಿಯರ ಆಸ್ತಿಯಲ್ಲಿ ಬಂದ ಪಾಲಿನಲ್ಲಿ ಸಾಲ ಮಾಡಿ ಮನೆ ಕಟ್ಟಿಸಿದರು. ಮೊದಲು ಅಲ್ಲಿ ಹಿರಿಯರ ಮನೆಯ ದೊಡ್ಡ ದನದ ಕೊಟ್ಟಿಗೆ ಇತ್ತು, ಒಬ್ಬ ಅರೆ-ಹುಚ್ಚ ವಾಸ್ತು ಪಂಡಿತ ಗೃಹಪ್ರವೇಶಕ್ಕೆ ಬಂದು ದನದ ಕೊಟ್ಟಿಗೆ ಇದ್ದಲ್ಲಿ ಮನೆ ಕಟ್ಟಿಸಿದ್ದು ತಪ್ಪು ಎಂದು ಗೆಳೆಯನ ಹೆಂಡತಿಯ ತಲೆಯಲ್ಲಿ ತುಂಬಿ ಹೋದನು. ಹಾಗಾಗಿ ಆ ಹೊಸ ಮನೆ ಮಾರಬೇಕೆಂದು ಗಂಡನನ್ನು ಪೀಡಿಸುತ್ತಾ ಆ ಹೆಂಗಸು ಎರಡು ವರ್ಷ ಖಿನ್ನತೆ ಅನುಭವಿಸಿ ಮನೆಯಲ್ಲಿ ಎಲ್ಲರ ಬದುಕು ನರಕ ಮಾಡಿದ್ದಳು. ಆಮೇಲೆ ನಾನು ಇನ್ನೊಬ್ಬ ಗೆಳೆಯನಿಗೆ ದೊಡ್ಡ ವಾಸ್ತು ತಜ್ಞನಂತೆ ನಟಿಸುವಂತೆ ಹೇಳಿ ಕೊಟ್ಟಿಗೆಯಿದ್ದ ಸ್ಥಳವೆಂದರೆ ಕಾಮಧೇನು ಇದ್ದ ಪವಿತ್ರ ಸ್ಥಳ, ಅದು ಬಹಳೇ ಲಕ್ಕಿ ಎಂದು ಹೇಳಿಸಿದ ಮೇಲೆ ಅವಳು ಸರಿಹೋದಳು.

ಭಕ್ತಿಗೂ ಮೌಢ್ಯಕ್ಕೂ ಅಂತರ ಒಂದು ಕೂದಲೆಳೆಯಷ್ಟೇ. ಭಾರತೀಯರ ಜೀನ್ಸ್‌ನಲ್ಲಿಯೇ ಮೌಢ್ಯ ತುಂಬಿದೆ. ಅದು ವಂಶಪರಂಪರೆಯಾಗಿ ವಿದ್ಯಾವಂತರಲ್ಲೂ ಹರಿದುಬಂದಿದೆ. ವಿದೇಶದಲ್ಲಿ ಕಲಿತು ಅಲ್ಲಿಯೇ ಹಲವಾರು ವರ್ಷ ಕೆಲಸ ಮಾಡಿ ಬಂದವರೂ ಇಲ್ಲಿ ವಾಪಸು ಬಂದಮೇಲೆ ತಮ್ಮ ಮೌಢ್ಯ ಮತ್ತೆ ಶುರುವಿಟ್ಟುಕೊಳ್ಳುತ್ತಾರೆ. ಡಾಕ್ಟರನು ತನ್ನ ಚೇಂಬರ್ ಮತ್ತು ಆಪರೇಷನ್ ಥಿಯೇಟರ್ ಯಾವ ದಿಕ್ಕಿನಲ್ಲಿ ಇರಬೇಕು ಎಂದು ಕಣಿ ಕೇಳುತ್ತಾನೆ. ಇಂಜಿನಿಯರ್ ತನ್ನ ಕಂಪ್ಯೂಟರ್ ಯಾವ ದಿಕ್ಕಿಗಿಡಬೇಕು ಎಂದು ಕೇಳುತ್ತಾನೆ. ಬ್ಯಾಂಕ್ ಮ್ಯಾನೇಜರ್ ತನ್ನ ಕ್ಯಾಬಿನ್ ಮತ್ತು ಕ್ಯಾಶ್-ಕೌಂಟರ್ ಯಾವ ದಿಕ್ಕಿನಲ್ಲಿರಬೇಕು ಎಂದು ಕಣಿ ಕೇಳುತ್ತಾನೆ. ತಮ್ಮ ಅದಕ್ಷತೆಯನ್ನು ಇವರು ವಾಸ್ತುದೋಷದ ಮೇಲೆ ಹೇರುತ್ತಾರೆ ಅಷ್ಟೇ.

ಹಾಗಾಗಿ ಡಾ.ಕಲಬುರ್ಗಿಯವರಿಗೆ ಶ್ರದ್ಧಾಂಜಲಿ ರೂಪದಲ್ಲಿ ಕರ್ನಾಟಕ ಸರಕಾರವು ಮೌಢ್ಯ ಪ್ರತಿಬಂಧಕ ಕಾಯ್ದೆ ತಕ್ಷಣ ಜಾರಿ ಮಾಡಲಿ, ಜತೆಗೆ ಯಾವುದೇ ರಾಜಕೀಯ ಪಕ್ಷದವರೂ ಮಂತ್ರಿಯಾದ ಕೂಡಲೇ ತಮಗೆ ಸಿಕ್ಕ ಕಚೇರಿ ಮತ್ತು ಸರಕಾರಿ ನಿವಾಸವನ್ನು ಕರದಾತರ ಲಕ್ಷಾಂತರ ಹಣದಿಂದ ತಮಗಿಷ್ಟ ಬಂದಂತೆ ಬೇಕಾಬಿಟ್ಟಿ ವಾಸ್ತು ಬದಲಾಯಿಸುವುದನ್ನು ನಿರ್ಬಂಧಿಸಲಿ.

-ವೀರಪ್ಪ ದಿ.ಎನ್.ಮಡಿಕೇರಿ

ಜೈನರ ಉಪವಾಸ ವ್ರತ ಗೌರವಿಸಲು ಮುಸಲ್ಮಾನರೂ ಉಪವಾಸ ಮಾಡಬೇಕೆ?

ಜೈನರು ಸೆಪ್ಟಂಬರ್ ತಿಂಗಳಲ್ಲಿ ಪರ್ಯೂಷಣ್ ಎಂಬ ವ್ರತ ಆಚರಿಸಿ ಎಂಟು ದಿನ ಉಪವಾಸ ಮಾಡುತ್ತಾರೆ ಎಂಬ ಕಾರಣಕ್ಕೆ ಮುಂಬೈಯಲ್ಲಿ ಎಂಟು ದಿನ ಮಾಂಸ ಮಾರಾಟವನ್ನು ಸರಕಾರವೇ ನಿಷೇಧಿಸಿದೆ.

ನಿಜವಾಗಿ ಮುಂಬೈಯಲ್ಲಿ ಜೈನರು ಪ್ರತ್ಯೇಕ ಅಪಾರ್ಟ್‌ಮೆಂಟುಗಳಲ್ಲಿಯೇ ವಾಸಿಸುತ್ತಾರೆ. ಜೈನರು ಎಷ್ಟೇ ಬಡವರಿರಲಿ ಅವರು ಉಳಿದ ಜಾತಿಯವರಿರುವ ಅಪಾರ್ಟ್‌ಮೆಂಟುಗಳಲ್ಲಿ ಬಾಡಿಗೆಗೂ ಮನೆ ಪಡೆಯುವುದಿಲ್ಲ, ಈ ತರಹದ ಅತಿ ಸಂಕುಚಿತ ಘೇಟ್ಟೊ (ghetto) ಮನೋಧರ್ಮದ ಜೈನರ ಅಪಾರ್ಟ್‌ಮೆಂಟುಗಳಲ್ಲಿ ಇತರ ಜಾತಿಯವರಿಗೆ ಬಾಡಿಗೆಗೆ ಫ್ಲಾಟ್ ಕೊಡುವುದನ್ನೂ ನೆರೆಹೊರೆ ಫ್ಲಾಟಿನವರು ತಕ್ಷಣ ಆಕ್ಷೇಪಿಸುತ್ತಾರೆ. ಹೀಗೆ ತಮ್ಮದೇ ಪ್ರತ್ಯೇಕ ಕಾಲನಿಗಳಲ್ಲಿ ವಾಸಿಸುವವರಿಗೆ ಇತರ ಪ್ರದೇಶದಲ್ಲಿ ಜನರು ಮಾಂಸ ಮಾರಿದರೆ ಇವರ ಉಪವಾಸಕ್ಕೆ ಯಾವ ಮೈಲಿಗೆ ಆಗುತ್ತದೆ ಹೇಳಿ? ಮುಂಬೈಯ ಜನಸಂಖ್ಯೆಯಲ್ಲಿ ಜೈನರು 3% ಗಿಂತಲೂ ಕಡಿಮೆಯಿದ್ದಾರೆ. ಆದರೆ ಮಾಂಸಾಹಾರಿಗಳು 80% ಗೂ ಹೆಚ್ಚಿದ್ದಾರೆ. ಅಂದರೆ ಕೇವಲ 3% ಜನರಿಗಾಗಿ 80% ಜನರು ತಮ್ಮ ನಿತ್ಯದ ಆಹಾರ ಪದ್ಧತಿ ಬದಲಿಸಬೇಕೆ?

ಮೂರು ಸಾವಿರ ವರ್ಷಗಳ ಹಿಂದೆ ಮನುವಾದಿಗಳ ಯುಗದಲ್ಲಿ ಹೀಗೆ ಕೇವಲ 5% ವೈದೀಕರಿಗಾಗಿ 95% ವೈದಿಕೇತರರು ತಮ್ಮ ಜೀವನ ಪದ್ಧತಿ ಬದಲಿಸಬೇಕಾದಂತಹ ಹೀನ ಸಾಮಾಜಿಕ ಸ್ಥಿತಿ ಇತ್ತು ನಿಜ. ಆದರೆ ಈಗಿನ ಪ್ರಜಾಪ್ರಭುತ್ವದಲ್ಲೂ ಕೇವಲ ಒಂದು ಹಿಡಿಯಷ್ಟು ಇರುವ ಅಲ್ಪಸಂಖ್ಯಾತ ಸಮುದಾಯಕ್ಕಾಗಿ ಬಹುಸಂಖ್ಯಾತರ ಆಹಾರ ಪದ್ಧತಿಯನ್ನು ದಿಢೀರ್ ಬದಲಿಸಬೇಕೆ? ಮಾರಿ ದಿನದಿನದ ಖರ್ಚು ಹೊಂದಿಸುವ ಬಡ ... ಸ್ಟಾಲಿನವರೂ ಈಗ ಜೈನರ ಉಪವಾಸ ವ್ರತ ಗೌ... ಎಂಟು ದಿನ ತಮ್ಮ ಕುಟುಂಬದವರನ್ನು ... ಕೆಡುವಬೇಕೇ?



ಮುಂಬೈಯಲ್ಲಿ ಅನೇಕ ತರಹದ ವ್ಯಾ... ಗುಜರಾತಿ-ಮಾರವಾಡಿ ಜೈನರಿದ್ದಾರೆ. ಹಾಗಾದರೆ ... ತಮ್ಮ ಧಾರ್ಮಿಕ ನೀತಿಯಂತೆ ನಡೆದುಕೊಂಡ... ಪ್ರಾಮಾಣಿಕ ವ್ಯಾಪಾರ ಮಾಡಿದ್ದಾರೆಯೇ? ಈ... ಕಳ್ಳ ದಾಸ್ತಾನು ಮಾಡಿ ಬೆಲೆ ಮೂರು-ನಾಲ್ಕು... ಹೆಚ್ಚಿಸಿರುವವರು ಇದೇ ನೀರುಳ್ಳಿ ಮುಟ್ಟಲೂ ... ಜೈನ ಸಗಟು ವ್ಯಾಪಾರಿಗಳು ತಾನೇ? ಫ್ರೋಜನ... ಮಾಂಸ ವಿದೇಶಕ್ಕೆ ರಫ್ತು ಮಾಡುವವರಲ್ಲಿ ಮುಂಬ... ಎರಡು ದೊಡ್ಡ ಜೈನ ವ್ಯಾಪಾರಿಗಳಿರುವುದು ... ಎಲ್ಲರಿಗೂ ಗೊತ್ತಿದೆ. ಔಷಧದ ಕ್ಯಾಪ್ಸುಲ್ ತಯ... ಕಂಪನಿಗಳಿಗೆ ದನದ ಕೊಬ್ಬು ಮತ್ತು ನಾರು (... ಪೂರೈಸುವ ಗುತ್ತಿಗೆಯೂ ಹೆಚ್ಚಾಗಿ ಜೈನರದೇ. ಕ್ಯಾನ್... ಗುಟ್ಕಾ ತಯಾರಿಸಿ ಮಾರುವ ಏಕಸ್ವಾಮ್ಯ ಇರ... ಜೈನರಲ್ಲಿ, ಆರೋಗ್ಯಕ್ಕೆ ಮಾರಕವಾದ ತಂಬಾಕು... ಮಾರುಕಟ್ಟೆಯನ್ನು ನಮ್ಮ ನಿಪ್ಪಾಣಿ-ಬೆ... ಸಾಂಗ್ಲಿ-ಕೊಲ್ಹಾಪುರದಲ್ಲಿ ಸಂಪೂರ್ಣ ನಿಯಂತ್ರಿ... ಜೈನರೇ. ಮೀಟರ್ ಬಡ್ಡಿ ಲೇವಾದೇವಿಯಿಂದ ... ಆತ್ಮಹತ್ಯೆಗೆ ನೂಕಿದವರಲ್ಲೂ ಇವರಿದ್ದಾರೆ.

ಹೀಗೆ ಇವರಿಗೆ ಹಣದ ಮುಂದೆ ಸಮಾಜ... ಮತ್ತು ಧರ್ಮದ ನೀತಿ ಗೌಣವಾಗಿರುವಾಗ... ಪರ್ಯೂಷಣದ ನೆಪದಲ್ಲಿ ಬಜೆಪಿ ಆಡಳಿತದ ... ಹಾಗೂ ಐದು ರಾಜ್ಯಗಳಲ್ಲಿ ಎಂಟು ದಿನ ಮಾಂಸ ... ರಾಜ್ಯ ಸರಕಾರವೇ ನಿಷೇಧಿಸಿರುವುದರ ಹಿಂದೆ ... ಅಮಿತ್ ಷಾ ಮತ್ತು ಸಂಘ ಪರಿವಾರದ ಯಾವ... ಅಜೆಂಡಾ ಇರಬಹುದು? ಮುಂಬೈಯ ... ಬಹುಸಂಖ್ಯಾತ ಉಪನಗರಗಳಲ್ಲೂ ಆಡು-ಕುರಿ-... ಮಾಂಸ ಮಾರುವ ಹೆಚ್ಚಿನ ವ್ಯಾಪಾರಿಗಳು ಮು... ಅಥವಾ ಕ್ರೈಸ್ತರು ಎಂಬುದನ್ನು ಗಮನಿಸಿದರೆ ... ಸೌಹಾರ್ದತೆ ಕೆಡಿಸಬೇಕೆಂಬ ಗುಪ್ತ ಅ... ಅರ್ಥವಾಗಬಹುದು.

- ಜಿ. ರವಿಕಿರಣ, ಮ...

ಸಂಪಾದಕೀಯದ ಬಗ್ಗೆ ಒಂದು ...


ಗೌರಿ ಅವರ 'ಅಯ್ಲಾನ್ ತೆರೆದಿಟ್ಟ ದುರ...' ಎಂಬ ಸಂಪಾದಕೀಯ (25.9.15) ಯಾಕೋ ಸ... ಬರಹದಂತೆ ಕಾಣುತ್ತಿಲ್ಲ. ಕೊಲ್ಲಿ ರಾಷ್ಟ್ರಗಳ ನಿ... ಎಲ್ಲಾ ರೀತಿಯ ಸಾವುನೋವಿಗೆ ಕೇವಲ ಅಮೆರಿ... ಕಾರಣ ಎಂದು ದೂರಿ, ಅವನ್ನು ಮಟ್ಟಹಾಕ... ಫರ್ಮಾನ್ ಹೊರಡಿಸುವ ಸಂಪಾದಕರು, ಮಧ... ಬರ್ಬರತೆಗೂ ಮೀರಿ ಮಾನವರನ್ನು ಹಿಡಿದು ... ಮಾಡುತ್ತಿರುವ ಇಸ್ಲಾಮಿಕ್ ಸ್ಟೇಟ್ ಉಗ್ರರ ... ಬಗ್ಗೆ ಯಾಕೆ ಚಕಾರ ಎತ್ತುತ್ತಿಲ್ಲ? ಕಾರಣ ಏನ... ಹಿಂಸೆ ಎಂದರೆ ಹಿಂಸೆಯೇ ತಾನೆ? ಇಲ್ಲಿ ರಿ... ಇಲ್ಲ. ಆದ್ದರಿಂದ ಅಮೆರಿಕಾದ ಬಗ್ಗೆ ... ಧೋರಣೆಯನ್ನೂ ಇಸ್ಲಾಂ ರಾಷ್ಟ್ರಗಳ ಬಗ್ಗೆ ... ಧೋರಣೆಯನ್ನೂ ವ್ಯಕ್ತಪಡಿಸಲು ಗೌರಿ ಅವರ ... ಒಪ್ಪಿದ್ದಾದರೂ ಹೇಗೆ? ಎಂಬುದು ನನ್ನ ಒಂದು ...

-ಪ್ರೊ. ಶಿವರಾಮಯ್ಯ, ಬೆಂ...

ನಾನು ಎಲ್ಲ ರೀತಿಯ ಹಿಂಸೆಯನ್ನು, ಮ... ವಾದವನ್ನು ಮತ್ತು ಭಯೋತ್ಪಾದನೆಯನ್ನು ಖಂಡಿ... ನನ್ನ ಲೇಖನದಲ್ಲಿ ಎಲ್ಲೂ ನಾನು ಇಸ್ಲಾಂ ಉ... ಪಾಸಿಟಿವ್ ಧೋರಣೆಯನ್ನು ವ್ಯಕ್ತಪಡಿಸಿಲ್ಲ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು...
ಪ್ರತಿಕ್ರಿಯೆಗಳನ್ನು 9980331427 ನಂ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ...

ಮೋದಿ ಸರ್ಕಾರದಡಿ ವಿದ್ಯುತ್ತಿನ ದರವೂ ಏರಲಿದೆ?



ಮೋದಿ ಆಡಳಿತದಿಂದ ಭಾರಿ ನಿರೀಕ್ಷೆ ಇಟ್ಟು ...ಂಡಿದ್ದ ಸಾಮಾನ್ಯ ಮತದಾರರು ಇದೀಗ ದಿನಬಳಕೆಯ ...ಮಾಗ್ರಿಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ...ದರ್ಭದಲ್ಲಿ ವಿದ್ಯುತ್ತಿನ ದರವೂ ಏರಿಕೆಯಾಗುವ ಎಲ್ಲಾ ...ಕ್ಷಣಗಳು ಗೋಚರಿಸುತ್ತಿವೆ. ಇದುವರೆಗೆ ಟೆಂಡರ್ ...ಯಲ್ಲಿ ಕನಿಷ್ಠ ಮೊತ್ತಕ್ಕೆ ಮಾರಾಟ ಆಗುತ್ತಿದ್ದ ಕಲ್ಲಿದ್ದಲಿನ ...ಣಿಗಳನ್ನು ಮೋದಿ ಸರ್ಕಾರ ಈಗ ಹರಾಜು ಮೂಲಕ ...ರಲು ಪ್ರಾರಂಭಿಸಿರುವುದೇ ಇದಕ್ಕೆ ಕಾರಣ ಎನ್ನಬಹುದು. ...ಪಿಎ ಆಡಳಿತಾವಧಿಯಲ್ಲಿ ನಡೆದ ಬೃಹತ್ ಹಗರಣಗಳ ...ನ್ನೆಲೆಯಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕಾಗಿ ಈ ...ವಲಾವಣೆ ಮಾಡಲಾಗಿದೆ ಎಂದು ಸರ್ಕಾರ ...ಳಿಕೊಂಡಿದೆ. ಮೇಲುನೋಟಕ್ಕೂ ಹರಾಜು ಒಂದು ...ಷ್ಟಾಚಾರರಹಿತ, ಪಾರದರ್ಶಕ ಪ್ರಕ್ರಿಯೆಯಂತೆ ತೋರಿಬರು...ವುದರಿಂದ ಸರ್ಕಾರದ ಕ್ರಮಕ್ಕೆ ಎಲ್ಲಾ ಕಡೆಗಳಿಂದ ...ಚ್ಚುಗೆ ವ್ಯಕ್ತವಾಯಿತು. ಆದರೆ ದಿನಗಳೆದಂತೆ ಚರ್ಮ...ಯ ಕಜ್ಜಿಗಳು ಒಂದೊಂದಾಗಿ ಹೊರಬೀಳತೊಡಗಿವೆ.

ಕಲ್ಲಿದ್ದಲು ಗಣಿಗಳ ಹರಾಜಿನಿಂದ ಬೊಕ್ಕಸಕ್ಕೆ ರೂ. ...0,000 ಕೋಟಿ ಆದಾಯ ಆಗಲಿದೆ ಎಂದು ...ಡ್ಡದಾಗಿ ಪ್ರಚಾರ ಮಾಡಲಾಗುತ್ತಿದೆ. ಇದರ ಬಹುಪಾಲು ...ಜ್ಯಗಳಿಗೆ ಸಂದಾಯವಾಗಲಿದೆಯೆಂದು ಹೇಳಲಾಗುತ್ತಿದೆ. ...ರೆ ಅದು ಒಂದೇ ಬಾರಿ ಅಲ್ಲ, ಅದಕ್ಕೆ ಮೂವತ್ತು ...ರ್ಷಗಳ ಸಮಯಾವಕಾಶ ಒದಗಿಸಲಾಗಿದೆ. ವಾಸ್ತವದಲ್ಲಿ ...ಪ ಆದಾಯ ರೂ. 4 ಲಕ್ಷ ಕೋಟಿಗಿಂತ ಎಷ್ಟೋ ...ಮೆ ಆಗಲಿದೆ. ಏಕೆಂದರೆ ರೂಪಾಯಿಯ ವಾರ್ಷಿಕ ...ಪಮೌಲ್ಯವನ್ನು ಶೇಕಡಾ 5 ಎಂಬುದಾಗಿ ಪರಿಗಣಿಸಿ ...ಹಾಕಿದರೆ ಪ್ರತಿ ವರ್ಷ ಕೈಸೇರುವ ಮೊತ್ತದ ನೈಜ ...ಕಡಿಮೆಯಾಗುತ್ತ ಸಾಗಲಿದೆ.

ಇತ್ತೀಚೆಗೆ ಹೊರಬಿದ್ದ ಮಾಹಿತಿಗಳ ಪ್ರಕಾರ ಬೆಲೆ ...ರ್ಕಾರವೂ ಸೇರಿದಂತೆ ಹರಾಜು ಪ್ರಕ್ರಿಯೆಯಲ್ಲಿ ...ದರ್ಶಕತೆ ಇರಲಿಲ್ಲ ಮತ್ತು ಭಾಗವಹಿಸುವಿಕೆ ಕೂಡ ...ವೊಂದು ನಿರ್ದಿಷ್ಟ ಬಿಡ್ದರುಗಳಿಗಷ್ಟೆ ಸೀಮಿತವಾಗಿತ್ತು. ...ೀಕ್ಷಕರ ಅಭಿಪ್ರಾಯದಲ್ಲಿ ಕೆಲವು ಯೋಜನೆಗಳನ್ನು ...ರ್ಯಗತಗೊಳಿಸಲು ಅಸಾಧ್ಯವಾಗಲಿದೆ; ಸಾಲ ನೀಡುವ ...ಂಕುಗಳು ವಿಪರೀತ ಸಮಸ್ಯೆಗೊಳಗಾಗಲಿವೆ ಮತ್ತು ...ದ್ಯುತ್ ಉತ್ಪಾದನೆಯ ವೆಚ್ಚದಲ್ಲಿಯೂ ಏರಿಕೆಯಾಗಲಿದೆ. ...ಷ್ಟೇ ಅಲ್ಲ, ಇದೇ ಹರಾಜಿನ ಮಾದರಿಯನ್ನು ಕಬ್ಬಿಣದ ...ಗಳಿಗೂ ವಿಸ್ತರಿಸಿದರೆ ದೊಡ್ಡ ಸಮಸ್ಯೆ ಎದುರಾಗಲಿದೆ. ...ಣದ ಗಣಿಗಳು ಆಯಾ ರಾಜ್ಯ ಸರಕಾರದ ...ತ್ತಾಗಿರುವುದರಿಂದ ರಾಜ್ಯಗಳು ಹರಾಜು ಪ್ರಕ್ರಿಯೆಗಳನ್ನು ...ತಮ್ಮ ಫೇವರಿಟ್ ಉದ್ಯಮಿಗಳ ಹಿತಾಸಕ್ತಿಗಳಿಗೆ ...ನುಗುಣವಾಗುವ ರೀತಿಯಲ್ಲಿ ನಡೆಸುವ ಸಾಧ್ಯತೆಗಳಿವೆ.

...ಕಲ್ಲಿದ್ದಲು ಗಣಿಗಳನ್ನು ಕೆಲವು ಬಿಡ್ದರುಗಳು ಸೂಚಿತ ...ಗಿಂತ ಕಡಿಮೆ ಬೆಲೆಗೆ ಕೊಂಡುಕೊಂಡಿದ್ದರು. ಎಸ್ಸಾರ್ ...ರ್ ಸಂಸ್ಥೆ ಅಂತೂ ಸೂಚಿತ ಬೆಲೆಗಿಂತ ಹೆಚ್ಚುವರಿ ... (ಟನ್ನಿಗೆ ರೂ 1110) ತೆತ್ತು ಖರೀದಿಸಿದೆ. ಕಲ್ಲಿದ್ದಲನ್ನು ...ಷ್ಟೊಂದು ಭಾರಿ ಬೆಲೆಗೆ ಖರೀದಿಸಿರುವ ಈ ಸಂಸ್ಥೆ ...ದ್ಯುತ್ತನ್ನು ಹಳೆ ದರದಲ್ಲಿ ಮಾರಾಟ ಮಾಡಲಿದೆಯೆಂದು ...ರೀಕ್ಷಿಸಲು ಸಾಧ್ಯವೇ ಇಲ್ಲ. ಏಕೆಂದರೆ ಹಳೆ ದರದಲ್ಲಿ ...ದರೆ ಉತ್ಪಾದನಾ ಘಟಕಕ್ಕೆ ಬೀಗ ಜಡಿಯಬೇಕಾಗುತ್ತದೆ. ...ದರಿಂದ ಮುಂದೊಂದು ದಿನ ಅದರ ವಿದ್ಯುತ್ತಿನ ದರ ಏರಲಿರುವುದು ಖಚಿತ.

ಎರಡನೆಯದಾಗಿ ಯಾವುದೇ ಉತ್ಪಾದನಾ ಸಂಸ್ಥೆಯಿರಲಿ ಅದು ತನ್ನದೇ ಗಣಿಗಳನ್ನು ತನ್ನ ಘಟಕಕ್ಕೆ ಆದಷ್ಟು ಸಮೀಪವಾಗಿ ಹೊಂದಬಯಸುತ್ತದೆ. ಇದು ಸಹಜವೂ ಆಗಿದೆ ಏಕೆಂದರೆ ಇದರಿಂದಾಗಿ ಸಾಗಾಟ ಮತ್ತಿತರ ವೆಚ್ಚಗಳಲ್ಲಿ ಸಾಕಷ್ಟು ಉಳಿತಾಯ ಆಗುವುದರಿಂದ ಒಟ್ಟು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯ. ಆದರೆ ಈ ಬಾರಿಯ ಹರಾಜು ಪ್ರಕ್ರಿಯೆಯಲ್ಲಿ ಅನೇಕ ಸಂಸ್ಥೆಗಳಿಗೆ ದೂರದೂರದ ಗಣಿಗಳು ದೊರೆತಿವೆ. ಇಂತಹ ಸಂಸ್ಥೆಗಳು ಸಾಗಾಟದ ವೆಚ್ಚವನ್ನು ಭರಿಸಲು ವಿದ್ಯುತ್ ದರ ಏರಿಸಬೇಕಾಗುತ್ತದೆ ಇಲ್ಲಾ ಬಾಗಿಲು ಹಾಕಬೇಕಾಗುತ್ತದೆ.

ಮೂರನೆಯದಾಗಿ 2014ರಲ್ಲಿ ಸರ್ವೋಚ್ಚ ನ್ಯಾಯಾಲಯ ಇನ್ನೂರಕ್ಕೂ ಅಧಿಕ ಗಣಿ ಪರವಾನಗಿಗಳನ್ನು ರದ್ದುಗೊಳಿಸಿದ ಸಂದರ್ಭದಲ್ಲಿ ಕೆಲವು ಗಣಿಗಾರಿಕೆಯ ಸಂಸ್ಥೆಗಳು ಆಗಲೇ ವಿದ್ಯುತ್ ಉತ್ಪಾದನೆ, ಉಕ್ಕು ಮುಂತಾದ ಉದ್ದಿಮೆಗಳಲ್ಲಿ ಬಂಡವಾಳ ಹೂಡಿದ್ದವು. ಅಂತಹ ಸಂಸ್ಥೆಗಳಿಗೆ 2015ರ ಹರಾಜು ಪ್ರಕ್ರಿಯೆಯಲ್ಲಿ ತಮ್ಮ ಹಳೆಯ ಗಣಿಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಉದಾಹರಣೆಗೆ ಜಿಂದಾಲ್ ಬಳಿ ಹಿಂದೆ ಏಳೆಂಟು ಲೈಸೆನ್ಸ್‌ಗಳಿದ್ದರೆ ಈಗ ಸಿಕ್ಕಿರುವುದು ಬರೀ ಒಂದು. ಪರಿಣಾಮವಾಗಿ ಸಂಸ್ಥೆಯ ಇತರ ಹೂಡಿಕೆಗಳಲ್ಲಿ ಸಮಸ್ಯೆ ಕಟ್ಟಿಟ್ಟ ಬುತ್ತಿ. ಅವುಗಳು ಮಾರುಕಟ್ಟೆಯಿಂದ ದುಬಾರಿ ಬೆಲೆಗೆ ಕಲ್ಲಿದ್ದಲು ಖರೀದಿಸಿದರೆ ಉತ್ಪಾದನೆಯ ವೆಚ್ಚ ಹೆಚ್ಚಲಿದ್ದು ತತ್ಪರಿಣಾಮವಾಗಿ ವಿದ್ಯುತ್ತಿನ ದರ ಏರಿಸದೆ ನಿರ್ವಾಹವಿಲ್ಲ ಎಂದಾಗಲಿದೆ.



ಬ್ಯಾಂಕುಗಳ ಕೆಟ್ಟ ಸಾಲಗಳು

ಬ್ಯಾಂಕು ಸಾಲಗಳಿಗೂ ಕಲ್ಲಿದ್ದಲು, ವಿದ್ಯುತ್ತು, ಉಕ್ಕು ಮುಂತಾದ ವಸ್ತುಗಳ ಉತ್ಪಾದನೆಗೂ ನೇರ ಸಂಬಂಧವಿದೆ. ಮರುಪಾವತಿಯಾಗದ ಬ್ಯಾಂಕು ಸಾಲಗಳು ಕೆಟ್ಟ ಸಾಲಗಳಾಗುತ್ತವೆ. ಕಾರ್ಪೋರೇಟು ಉದ್ಯಮಿಗಳಿಂದ ವಾಪಸ್ ಪಡೆಯಲಾಗದ ಇಂತಹ ಕೆಟ್ಟ ಸಾಲಗಳನ್ನು ನಿಷ್ಪ್ರಯೋಜಕ ಆಸ್ತಿ (Non-performing Assets, NPA) ಎಂಬ ಗೌರವಾನ್ವಿತ ಹೆಸರಿನಿಂದ ಕರೆಯಲಾಗುತ್ತದೆ! ನಿಜ ಹೇಳಬೇಕೆಂದರೆ ಇದೊಂದು ರೀತಿಯ ಸಬ್ಸಿಡಿಯೇ ಆಗಿದೆ. ಇದೇ ಬ್ಯಾಂಕುಗಳು ರೈತರ, ಬಡವರ ಜುಜುಬಿ ನಾಲ್ಕೈದು ಲಕ್ಷ ಸಾಲಗಳ ಮರುಪಾವತಿಗೆ ಗೂಂಡಾಗಳನ್ನು ಬಳಸಲು ಸ್ವಲ್ಪವೂ ಹಿಂಜರಿಯುವುದಿಲ್ಲ. ಈಗಾಗಲೆ ಬಹಿರಂಗವಾಗಿರುವಂತೆ ಬ್ಯಾಂಕುಗಳ, ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳ ಕೆಟ್ಟ ಸಾಲದ ಮೊತ್ತ (ಸರಕಾರಿ ಬ್ಯಾಂಕುಗಳದು ಖಾಸಗಿಯವುಗಳಿಗಿಂತಲೂ ಶೇಕಡ 30ರಷ್ಟು ಜಾಸ್ತಿ) ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಈ ಕಾರ್ಪೋರೇಟ್ ಸಬ್ಸಿಡಿಗಳ ಮೊತ್ತ 2015ರ ಮಾರ್ಚ್ ತನಕ ರೂ 2,67,000 ಕೋಟಿಗಳಷ್ಟಿತ್ತು! ಇದು ಮರುಪಾವತಿಸದ ಸಾಲದ ಕತೆಯಾದರೆ ಇದೇ ಹಾದಿ ಹಿಡಿಯಬಹುದಾದ ಸಾಲದ ಮೊತ್ತ ಇನ್ನೂ ಅಗಾಧವಾಗಿದೆ! 2016ರ ಮಾರ್ಚ್‌ನಲ್ಲಿ ಅದರ ಮೊತ್ತ ರೂ 8,00,000 ಕೋಟಿಗಳನ್ನೂ ಮೀರಬಹುದೆಂದು ಅಂದಾಜಿಸಲಾಗಿದೆ (ಸ್ಟಾಂಡರ್ಡ್ ಅಂಡ್ ಪುವರ್).

ಮುಂದಿನ ಒಂದು ವರ್ಷದ ಅವಧಿಯಲ್ಲಿ ವಿದ್ಯುತ್ ಉತ್ಪಾದನಾ ಕ್ಷೇತ್ರ ಒಂದರಲ್ಲೇ ಕೆಟ್ಟ ಸಾಲದ ಮೊತ್ತ ಸುಮಾರು ರೂ 1,50,000 ಕೋಟಿಗಳಷ್ಟಾಗಬಹುದು. ಕಲ್ಲಿದ್ದಲು ವಲಯದಲ್ಲಿ ಸದ್ಯ ರೂ 2,50,000ದಷ್ಟು ಕೆಟ್ಟ ಸಾಲದ ಪರಿಸ್ಥಿತಿ ಇದೆ. ಹರಾಜಿನ ಬಳಿಕ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿರುವುದು ಖಚಿತ. ಕಾರಣವೇನೆಂದರೆ ಹರಾಜಿನಲ್ಲಿ ಸಫಲವಾಗದ ಸಂಸ್ಥೆಗಳಿಗೆ ತಮ್ಮ ಹಳೆ ಸಾಲಗಳನ್ನು ಮರುಪಾವತಿಸಲು ಅಸಾಧ್ಯವಾಗಲಿದೆ. ಬ್ಯಾಂಕುಗಳು ಈ ಹಳೆ ಸಾಲಗಳ ಬಗ್ಗೆ ಏನು ಮಾಡಲಿವೆ ಎಂಬ ಬಗ್ಗೆ ಮೋದಿ ಸರ್ಕಾರದಲ್ಲಿ ಯಾವ ಸ್ಪಷ್ಟತೆಯೂ ಇಲ್ಲ. ಇಂತಹ ಸಾಲಗಳನ್ನು ಹೊಸ ಮಾಲಿಕರಿಗೆ ಹಸ್ತಾಂತರಿಸಲಂತೂ ಸಾಧ್ಯವಿಲ್ಲ. ಹೀಗಾಗಿ ಒಂದು ವೇಳೆ ಬ್ಯಾಂಕುಗಳು ಹೊಸ ಗಣಿ ಮಾಲಿಕರಿಗೆ ಸಾಲ ನೀಡಲು ನಿರಾಕರಿಸಿದರೆ ಅವರುಗಳು ಅಧಿಕ ಬಡ್ಡಿ ವಿಧಿಸುವ ಖಾಸಗಿ ಮೂಲಗಳ ಮೊರೆಹೋಗಬೇಕಾಗಿ ಬರಬಹುದು. ಇದರ ಪರಿಣಾಮ ಏನಾಗಲಿದೆ ಎಂದು ಈಗಲೇ ಊಹಿಸಬಹುದು.

ಕಾರ್ಪೋರೇಟುಗಳಿಗೆ ಒಳ್ಳೆ ದಿನಗಳು, ಜನಸಾಮಾನ್ಯರಿಗೆ ಕೆಟ್ಟ ದಿನಗಳು

ಒಟ್ಟಾರೆಯಾಗಿ ನೋಡಿದರೆ ಕಾರ್ಪೋರೇಟುಗಳು ಮತ್ತು ಮೋದಿ ಸರ್ಕಾರ ಸೇರಿಕೊಂಡು ನಡೆಸಿದಂತಿರುವ ಈ ಹರಾಜು ಪ್ರಕ್ರಿಯೆಯ ಹಿಂದೆ ದೊಡ್ಡ ಹುನ್ನಾರವಿರುವಂತೆ ತೋರುತ್ತದೆ. ಉದ್ದೇಶಪೂರ್ವಕವೆನಿಸುವ ಈ ನಡೆಯ ಪರಿಣಾಮವಾಗಿ ಕಾರ್ಪೋರೇಟ್ ಸಂಸ್ಥೆಗಳು ಭಾರಿ ವಿನಾಯಿತಿ, ರಿಯಾಯಿತಿಗಳನ್ನು ಗಿಟ್ಟಿಸಿಕೊಳ್ಳುವುದರೊಂದಿಗೆ ಲಾಭವನ್ನೂ ಹೆಚ್ಚಿಸಿಕೊಳ್ಳಲಿರುವುದರಲ್ಲಿ ಅನುಮಾನವಿಲ್ಲ. ಮೋದಿ ಸರ್ಕಾರ ನಿಜವಾಗಿ ಜನಪರ ಆಗಿದ್ದರೆ ಅದು ಹರಾಜಿನ ಸಂದರ್ಭದಲ್ಲೇ ಭವಿಷ್ಯದಲ್ಲಿ ಬೆಲೆ ಏರಿಕೆಯ ಪ್ರಮಾಣ ನಿರ್ದಿಷ್ಟ ಪರಿಮಿತಿಗಳೊಳಗೆ ಇರಬೇಕೆಂಬ ಷರತ್ತನ್ನು ಹಾಕಬೇಕಾಗಿತ್ತು. ಆದರೆ ವಿದ್ಯುತ್ ಬೆಲೆ ಏರಿಕೆಗೆ ಯಾವುದೇ ಕಡಿವಾಣ ಹಾಕಲಾಗಿಲ್ಲ. ಈಗ "ಅಭಿವೃದ್ಧಿ" ಆಗಬೇಕೆಂದರೆ ವಿದ್ಯುತ್ ಉತ್ಪಾದನೆ ಹೆಚ್ಚಬೇಕಲ್ಲವೇ? ಕಲ್ಲಿದಲ ಬೆಲೆಗಳಿಂದಾಗಿ ಉದ್ದಿಮೆಗಳು ಅವ್ಯವಹಾರ ಅರ್ಥಾತ್ ನಷ್ಟದಾಯಕವೆಂದು ಕಂಡುಬಂದಾಗ ಖಾಸಗಿಯವರಿಗೆ ಆಸಕ್ತಿ ಉಳಿಯುತ್ತದೆಯೇ? ಇದರೊಂದಿಗೆ ಏರುವ ಉತ್ಪಾದನಾ ವೆಚ್ಚಗಳಿಂದಾಗಿ ಉದ್ದಿಮೆಗಳನ್ನು ನಡೆಸಲು ಅಸಾಧ್ಯವೆಂಬ ಕೂಗೆದ್ದರೆ ಮೋದಿ ಸರ್ಕಾರ ಸುಮ್ಮನಿರುವುದೇ? ಇಲ್ಲವಾದರೆ ಅದರ "ಅಭಿವೃದ್ಧಿ" ಹಳಿತಪ್ಪುವ ಸಾಧ್ಯತೆಗಳಿರುವುದಿಲ್ಲವೇ? ಹಾಗಾಗದಂತಿರಲು ವಿದ್ಯುತ್ತಿನ ದರಗಳನ್ನು ಏರಿಸದೆ ನಿರ್ವಾಹವಿಲ್ಲ ಎಂದಾಗದಿರುವುದೇ? ವಿದ್ಯುತ್ತಿನ ದರ ಏರಿದಾಗ ಉತ್ಪಾದನೆ, ವ್ಯವಸಾಯ ಮತ್ತು ಸೇವಾಕ್ಷೇತ್ರಗಳ ಉತ್ಪಾದನಾ ವೆಚ್ಚಗಳೂ ಏರುವುದಿಲ್ಲವೆ? ಅಂತಿಮವಾಗಿ ಇದರ ಹೊರೆಯೆಲ್ಲ ಬೀಳುವುದು ಜನಸಾಮಾನ್ಯರ ಮೇಲಲ್ಲವೇ? ಆದುದರಿಂದ ಜನಸಾಮಾನ್ಯರ ಪಾಲಿಗೆ ಇನ್ನಷ್ಟು ಕೆಟ್ಟ ದಿನಗಳು ಕಾದಿರುವುದರಲ್ಲಿ ಸಂಶಯವಿದೆಯೇ?

(ಆಧಾರ: 5.9.2015ರ ತೆಹೆಲ್ಕಾದಲ್ಲಿ ಅಲಂ ಶ್ರೀನಿವಾಸ್ ಲೇಖನ)

⏮ ವಾಟ್ಸ್ ಅಪ್ ಟೆರರಿಸಮ್

...ಮಾಂಚಿತ ಮಾತುಗಳ ಮೋದಿಯ ಸಾಧನಾ ಸಾಮರ್ಥ್ಯ ...ದ್ದು ಎಂಬುದು ಈಗಾಗಲೇ ಜನರಿಗೆ ತಿಳಿದುಬರುತ್ತಿದೆ. ...ರ್ವಜನಿಕ ಸಮಾರಂಭಗಳ ವೇದಿಕೆಯ ಮೇಲೆ ...ದಿಯೊಳಗೆ ಹರಿದಾಡುವ ನಾಯಕತ್ವ, ರಾಜತಾಂತ್ರಿಕ ...ವುಗಳ ವಿಚಾರಕ್ಕೆ ಬಂದಾಗ ನಾಪತ್ತೆಯಾಗುತ್ತಿದೆ. ಇದನ್ನು ...ಜಾತು ಮಾಡುವ ಸಾಕಷ್ಟು ವಿಚಾರಗಳಿವೆಯಾದರು ... ಅರಬ್ ಪ್ರವಾಸದಲ್ಲಿ ಮೋದಿಯ ನಾಯಕತ್ವ ...ದ್ದನ್ನು 'ಫಸ್ಟ್ ಪೋಸ್ಟ್' ಮಾಧ್ಯಮ ವಿಶ್ಲೇಷಣೆ ...ಸಿದೆ. ಆ ವಿಶ್ಲೇಷಣೆಯ ಸಾರಾಂಶ ಹೀಗಿದೆ: 'ದುಬೈ ... ಸ್ಟೇಡಿಯಂನಲ್ಲಿ ಇಂಡಿಯನ್ ಡಯಾಸ್ಪೊರಾ ...ದ್ದೇಶಿಸಿ ಮೋದಿ ಮಾಡಿದ ಭಾಷಣದಲ್ಲಿ ದೇವಾಲಯಕ್ಕೆ ... ನೀಡಿದ್ದನ್ನು ಹೊರತುಪಡಿಸಿದಂತೆ ಅಮೆರಿಕಾದ ...ಡಿಸನ್ ಸ್ಕ್ವೇರ್‌ನಲ್ಲಿ ಮೋದಿ ಮಾಡಿದ ಭಾಷಣದ ...ಅಂಶಗಳೇ ಪುನರಾವರ್ತಿಸಲ್ಪಟ್ಟವು. ಉಭಯ ಸರ್ಕಾರಗಳ ...ಪಿನ ಬಹುಮುಖ್ಯ ಚರ್ಚಾರ್ಹ ಸಂಗತಿಗಳು ...ಕ್ಷಿಸಲ್ಪಟ್ಟವು. ಅಮೆರಿಕಾದಲ್ಲಿರುವ ಭಾರತೀಯ ...ದಾಯ ಉನ್ನತ ವಿದ್ಯಾಭ್ಯಾಸ ಮುಗಿಸಿ, ಭಾರೀ ...ಳದ ಅತ್ಯುನ್ನತ ಹುದ್ದೆಗಳನ್ನರಿಸಿ ವಲಸೆಹೋದ ...ರು, ಇಂಡಿಯನ್ನರನ್ನು ಒಳಗೊಂಡಿತ್ತಾದ್ದರಿಂದ ಆ ... ಅಲ್ಲಿಗೆ ಪ್ರಸ್ತುತವೆನಿಸಿತ್ತು, ಆದರೆ ಅರಬ್ ...ರಾಷ್ಟ್ರಗಳಲ್ಲಿರುವ ಭಾರತೀಯ ಸಮುದಾಯದ ಶೇ.20 ...ಜನ ಮಾತ್ರ ವೈಟ್‌ಕಾಲರ್ ಉದ್ಯೋಗಸ್ಥರು. ಇನ್ನುಳಿದ ಶೇ.80ರಷ್ಟು ಜನ ಕಾರ್ಮಿಕ ವರ್ಗಕ್ಕೆ ಸೇರಿದವರು. ನರ್ಸ್‌ಗಳು, ತೈಲನಿಕ್ಷೇಪ ಕಾರ್ಮಿಕರು, ಹೋಟೇಲ್ ಕೆಲಸಗಾರರು, ಮನೆಕೆಲಸದವರು, ಡ್ರೈವರ್‌ಗಳು, ಟೆಕ್ನಿಷಿಯನ್‌ಗಳು ಹೀಗೆ ಸಣ್ಣಮಟ್ಟ ಕೆಲಸ ಮಾಡಿಕೊಂಡಿರುವವರೇ ಹೆಚ್ಚು. ಅಲ್ಲಿರುವ ಭಾರತೀಯ ಕಾರ್ಮಿಕರಲ್ಲಿ ಶೇ.88ರಷ್ಟು ಮಂದಿ ಸಮೂಹ ಕಾರ್ಮಿಕ ವಾಸ್ತವ್ಯಗೃಹಗಳಲ್ಲಿ ಇರುವವರಾಗಿದ್ದು, ಇನ್ನುಳಿದ ಶೇ.12ರಷ್ಟು ಮಂದಿ ಮಾತ್ರ ಬಾಡಿಗೆ ಮನೆಗಳನ್ನು ಹೊಂದಿದ್ದಾರೆ. ಭಾರತದಲ್ಲಿರುವ ಹಲವು ಉದ್ಯೋಗ ಏಜೆನ್ಸಿಗಳ ಮೂಲಕ ಅಲ್ಲಿ ಕೆಲಸಕ್ಕೆ ನೇಮಿಸಲ್ಪಟ್ಟಿರುವ ಈ ಕಾರ್ಮಿಕರಿಗೆ ಯಾವ ಭದ್ರತೆಯೂ ಇಲ್ಲ. ಯುಎಇ, ಈ ಎಲ್ಲಾ ಕಾರ್ಮಿಕರನ್ನು ತನ್ನಲ್ಲಿ ಕೆಲಸಕ್ಕಿಟ್ಟುಕೊಳ್ಳುವುದೇ 'ಕಫಾಲಾ' ಎಂಬ ಒಂದು ಗುತ್ತಿಗೆ ನೇಮಕಾತಿ ವ್ಯವಸ್ಥೆಯಡಿ. ಇದರ ಪ್ರಕಾರ ಹೀಗೆ ನೇಮಿಸಲ್ಪಟ್ಟ ವಿದೇಶಿ ಕಾರ್ಮಿಕರ ಯಾವ ಜವಾಬ್ದಾರಿಯೂ ಅಲ್ಲಿನ ಸರ್ಕಾರದ್ದಲ್ಲ, ಅವರಿಗೆ ಅನಿವಾಸಿ ನಾಗರಿಕರ ಹಕ್ಕುಗಳೂ ಇರುವುದಿಲ್ಲ, ಏನೇ ಘಟಿಸಿದರೂ ಅದಕ್ಕೆ ಅವರವರು ನೇಮಿಸಲ್ಪಟ್ಟ ಸ್ವದೇಶಿ ಏಜೆನ್ಸಿಗಳೇ ಹೊಣೆ. 10-12 ಗಂಟೆಗಳ ಕಾಲ ಕೆಲಸ ಮಾಡಬೇಕಿರುವ ಇವರಿಗೆ ಆರೋಗ್ಯ ವಸತಿ ಸೌಲಭ್ಯಗಳು ತೀರಾ ಕೆಳಮಟ್ಟದವು. ಮಾನವಹಕ್ಕು ಆಯೋಗವೇ ಈ ಪದ್ಧತಿಯನ್ನು ಟೀಕಿಸಿದೆ. ಫಿಲಿಫೈನ್ಸ್ ಒಳಗೊಂಡಂತೆ ಹಲವು ದೇಶಗಳು ಮಧ್ಯ-ಏಷ್ಯಾ ದೇಶಗಳಿಗೆ ಈ ಕಫಾಲಾ ವ್ಯವಸ್ಥೆಯಡಿ ತಮ್ಮ ದೇಶದ ಮಹಿಳೆಯರು ಕೆಲಸಕ್ಕೆ ಹೋಗದಂತೆ ನಿರ್ಬಂಧ ಹೇರಿದೆಯೆಂದರೆ ಅದರ ಕರಾಳತೆ ಎಂತದ್ದೆಂಬುದು ಅರ್ಥವಾಗುತ್ತದೆ.

ಅಂತಹ ಸಂಕಷ್ಟದಲ್ಲಿರುವ ಭಾರತೀಯ ಕಾರ್ಮಿಕರ ಸಮಸ್ಯೆಗಳ ಕುರಿತು ಮೋದಿ ಪ್ರಸ್ತಾಪಿಸಿದ್ದೇ ಕಡಿಮೆ. ಕಲ್ಯಾಣನಿಧಿ, ಇ-ಪೋರ್ಟಲ್ ಸುಧಾರಣೆ, ಮಕ್ಕಳಿಗೆ ಶಾಲಾ ಪ್ರವೇಶಾತಿ ಮತ್ತು ತಿಂಗಳಿಗೊಮ್ಮೆ ಕೌನ್ಸಿಲರ್ ಸಭೆ ಆಯೋಜಿಸುವ ಕುರಿತು ಮೋದಿ ಮಾತನ್ನಾಡಿದ್ದರೂ ಅವು ಆ ಕಾರ್ಮಿಕರ ತಳಮಟ್ಟದ ಸಮಸ್ಯೆಗಳನ್ನು ಸ್ಪರ್ಶಿಸುವುದೇ ಇಲ್ಲ. ಪ್ರತಿ ವರ್ಷ ಯುಎಇಯಿಂದ 13 ಬಿಲಿಯನ್ ಅಮೆರಿಕನ್ ಡಾಲರ್ ಆದಾಯ ತಂದುಕೊಡುವ 2.2 ಮಿಲಿಯನ್ ಕಾರ್ಮಿಕರಿಗೆ ಇವಿಷ್ಟು ಸಾಕೆ? ಅಂದಾಜಿನ ಪ್ರಕಾರ ಯುಎಇನಲ್ಲಿ ಸುಮಾರು 3,00,000 ದಾಖಲೆರಹಿತ ಭಾರತೀಯ ಕಾರ್ಮಿಕರಿದ್ದಾರೆ. ಇವರ್‍ಯಾರು ಅಧಿಕೃತವಾಗಿ ಧೂತವಾಸಗಳಲ್ಲಿ ಪ್ರಮಾಣಪತ್ರಗಳನ್ನು ದಾಖಲಿಸಿ ಬಂದವರಲ್ಲ, ಏಜೆನ್ಸಿಗಳ 'ಅಡ್ಜಸ್ಟ್‌ಮೆಂಟ್'ನಿಂದ ಅಲ್ಲಿಗೆ ಬಂದವರು. ಈ ಪೋರ್ಟಲ್ ಸುಧಾರಣೆಯಿಂದ ಅವರಲ್ಲಿ ಯಾರೊಬ್ಬರಿಗೂ ನೆರವಾಗುವುದಿಲ್ಲ, ಯಾಕೆಂದರೆ ಧೂತವಾಸಗಳಲ್ಲಿ ಅವರ ದಾಖಲೆಯೇ ಇರುವುದಿಲ್ಲ. ಇನ್ನು ಕಾರ್ಮಿಕರ ಮಕ್ಕಳಿಗೆ ಶಾಲಾ ಪ್ರವೇಶಾತಿ ಕೂಡಾ ಅಷ್ಟೊಂದು ನೆರವಿಗೆ ಬಾರದು. ಏಕೆಂದರೆ ಇಲ್ಲಿರುವ ಬಹುಪಾಲು ಕಾರ್ಮಿಕರು ತಮ್ಮ ಕುಟುಂಬವನ್ನು ಭಾರತದಲ್ಲೇ ಬಿಟ್ಟು, ಏಕಾಂಗಿಯಾಗಿ ಇಲ್ಲಿ ಕೆಲಸ ಮಾಡಿಕೊಂಡಿರುವವರು. ತಮ್ಮ ಸಂಕಷ್ಟವನ್ನು ತೋಡಿಕೊಳ್ಳಲು 24/7 ದೂರವಾಣಿ ಹಾಟ್‌ಲೈನ್ (ಭಾರತೀಯ ಭಾಷೆಗಳಲ್ಲಿ) ಸ್ಥಾಪಿಸಬೇಕೆನ್ನುವುದು ಈ ಕಾರ್ಮಿಕರ ಅತೀವ ಬೇಡಿಕೆಯಾಗಿತ್ತು, ಮೋದಿ ಅದಕ್ಕೆ ಸ್ಪಂದಿಸಲಿದ್ದಾರೆ ಎಂಬ ನಂಬಿಕೆಯಲ್ಲಿದ್ದರು. ಆದರೆ ಮಾಸಿಕ ಕೌನ್ಸಿಲರ್ ಸಭೆ ನಡೆಸುವ, ಅಷ್ಟಾಗಿ ನೆರವಿಗೆ ಬಾರದ ಯೋಜನೆಗಷ್ಟೇ ಮೋದಿ ತನ್ನನ್ನು ಸೀಮಿತವಾಗಿಸಿಕೊಂಡಿದ್ದಾರೆ. ಸ್ವಾತಂತ್ರ್ಯವನ್ನೇ ಕಿತ್ತುಕೊಳ್ಳುವ ಈ ಕಾರ್ಮಿಕರಿಗೆ ಎಲ್ಲೋ ಒಂದು ಕಡೆ ನಡೆಯುವ ಅಂತಹ ಸಭೆಯಲ್ಲಿ ಭಾಗವಹಿಸಲು ಹೇಗೆ ಸಾಧ್ಯ? ಕಳೆದ ನಾಲ್ಕು ವರ್ಷಗಳಲ್ಲಿ ಗಲ್ಫ್ ದೇಶಗಳಲ್ಲಿನ ಭಾರತೀಯ ಧೂತ ಕಚೇರಿಗಳು 60,000 ದೂರಗಳನ್ನು ಸ್ವೀಕರಿಸಿವೆ. ದೂರು ನೀಡಲು ಧೈರ್ಯವಿಲ್ಲದೆ, ಆ ಅರ್ಹತೆಯೇ ಇಲ್ಲದೆ ನರಳುತ್ತಿರುವವರ ಸಂಖ್ಯೆ ಇನ್ನೂ ದೊಡ್ಡದಿದೆ. ಅಂತಹ ಗಂಭೀರ ವಿಚಾರಗಳನ್ನು ನರೇಂದ್ರ ಮೋದಿ ಪ್ರಸ್ತಾಪಿಸಲಿಲ್ಲ.'

ಒಬ್ಬ ವ್ಯಕ್ತಿಯ ನಾಯಕತ್ವ ಸಾಬೀತಾಗುವುದು ಉತ್ಪ್ರೇಕ್ಷೆ ಮತ್ತು ಉನ್ಮಾದಗಳಿಂದಲ್ಲ. ಅದು ಆತ ಪ್ರಸ್ತುತ ಸವಾಲುಗಳನ್ನು ಹೇಗೆ ನಿಭಾಯಿಸಿ, ಜನಸಮೂಹವನ್ನು ಮುನ್ನಡೆಸುತ್ತಾನೆ ಎನ್ನುವುದನ್ನು ಅವಲಂಬಿಸಿರುತ್ತದೆ. ತಾನು ಪ್ರಧಾನಿಯಾಗುವುದಕ್ಕೂ ಮುನ್ನ ನಡೆಸಿದ ಸದ್ಭಾವನಾ ಉಪವಾಸ ಕಾರ್ಯಕ್ರಮದಲ್ಲಿ ಮುಸ್ಲಿಂ ಇಮಾಮನೊಬ್ಬ ಟಕ್ಕಿಯಾ (ಮುಸ್ಲಿಮರು ಧರಿಸುವ ಟೋಪಿಗೆ) ಹಾಕಲು ಮುಂದಾದಾಗ ತಿರಸ್ಕರಿಸಿದ್ದ ಮೋದಿ, ಯುಎಇಗೆ ಕಾಲಿಡುತ್ತಿದ್ದಂತೆಯೇ ವಿಶ್ವದ ಮೂರನೇ ಅತಿದೊಡ್ಡ ಮಸೀದಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಶೇಖ್ ಝಯ್ಯದ್ ಗ್ರ್ಯಾಂಡ್ ಮಸೀದಿಗೆ ಭೇಟಿ ನೀಡಿ ಬಂದಿದ್ದನ್ನು 'ನಾಯಕತ್ವ' ಎನ್ನಬೇಕೊ, 'ಅವಕಾಶವಾದ' ಎನ್ನಬೇಕೊ ಎಂಬ ಪ್ರಶ್ನೆ ನಮ್ಮೀ ಬ್ಲಾಗಿನ ಯನ್ನರಿಗೆ ಕಾಡಬಿದುದು ವಿಷಯವಾಗಿಸ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 30-09-2015 RNI No. KARKA



ಜೋಗಕ್ಕೆ ಜೋತು ಬಿದ್ದ ಗಣೇಶ್



'ಮುಂಗಾರು ಮಳೆ' ಅಂದಾಕ್ಷಣ ಥಟ್ಟನೆ ನೆನಪಾಗುವ ದೃಶ್ಯ ಜೋಗದ್ದು. ಆ ಜಲಪಾತವನ್ನು ಅದ್ಭುತವಾಗಿ ಸೆರೆ ಹಿಡಿದ ಕಾರಣಕ್ಕಾಗಿಯೇ ಅದು ಪ್ರೇಕ್ಷಕರ ಗಮನ ಸೆಳೆದಿತ್ತು. ಈಗ 'ಮುಂಗಾರು ಮಳೆ ಭಾಗ 2' ಸಿನಿಮಾ ಶೂಟ್ ಆಗುತ್ತಿದೆ. ಕೆಲವು ದೃಶ್ಯಗಳನ್ನು ಜೋಗದಲ್ಲೇ ಚಿತ್ರೀಕರಿಸಲು ಗಣೇಶ್ ಒತ್ತಡ ಹಾಕಿದ್ದಾರೆ. ನಾಯಕನ ಒತ್ತಡಕ್ಕೆ ಮಣಿದಿರುವ ನಿರ್ದೇಶಕ ಶಶಾಂಕ, ದೃಶ್ಯಗಳ ಬದಲಾಗಿ ಹಾಡನ್ನು ಶೂಟಿಂಗ್ ಮಾಡಲು ಒಪ್ಪಿದ್ದಾರೆ. ಗಣೇಶ ಹಬ್ಬ ಮುಗಿಯುತ್ತಿದ್ದಂತೆಯೇ ಚಿತ್ರತಂಡ ಜೋಗದಲ್ಲಿ ಬೀಡು ಬಿಡಲಿದೆ. ಹಾಡೊಂದನ್ನು ಅಲ್ಲಿ ಚಿತ್ರೀಕರಿಸಲಿದೆ. 'ಮುಂಗಾರು ಮಳೆ' ಚಿತ್ರವು ಜೋಗದಿಂದ ಗೆದ್ದಿತೋ ಅಥವಾ ಕತೆಯಿಂದ ಗೆಲುವು ಸಾಧಿಸಿತೋ ಎಂಬುದರ ಬಗ್ಗೆ ಗಣೇಶ್ ಯೋಚಿಸಿರುವಂತಿಲ್ಲ, ಅವರಿಗೆ ಜೋಗವೆಂದರೆ ಬಾಕ್ಸ್ ಆಫೀಸ್ ಗೆಲುವು ಎಂಬಂತಾಗಿರುವುದು ಹಾಸ್ಯಾಸ್ಪದವಾಗಿದೆ.

ಹರಿಪ್ರಿಯಾ ಒಪ್ಪಲಿಲ್ಲ

ವಿಜಯ ಪ್ರಸಾದ್ ನಿರ್ದೇಶನದ 'ನೀರ್‌ದೋಸೆ'ಗೆ ಮುಕ್ತಿ ಕಾಣುವಂತೆ ಕಾಣುತ್ತಿಲ್ಲ. ಒಂದೂವರೆ ವರ್ಷದಿಂದ ವಿವಾದದ ಬೆಂಕಿಯಲ್ಲೇ ಬೆಂದಿರುವ ದೋಸೆಗೆ ಮೊನ್ನೆಯಷ್ಟೇ ಮುಕ್ತಿ ಸಿಕ್ಕಿತ್ತು, ರಮ್ಯಾ ಬದಲಾಗಿ ಹರಿಪ್ರಿಯಾರನ್ನು ಆಯ್ಕೆ ಮಾಡಿಕೊಂಡು ಶೂಟಿಂಗ್ ಶುರು ಮಾಡಿದ್ದರು ನಿರ್ದೇಶಕರು. ಸದ್ಯ ಹರಿಪ್ರಿಯ... ಪಾತ್ರ ಮಾಡಲು ಒಪ್ಪುತ್ತಿಲ್ಲವಂತೆ. ಅದಕ್ಕೆ ಕಾರಣ ಸಂಭಾವನೆ. ಚಿತ್ರಕ್ಕೆ ಮೊದ... ಬೆದ್ರ ನಿರ್ಮಾಪಕರು ಎಂದು ಹೇಳಲಾಗಿತ್ತು. ಈಗ ಅವರಿಗೂ ನಿರ್ದೇ... ಕೊಟ್ಟಿದ್ದಾರೆ. ಅವು ಜಾಗಕ್ಕೆ ಹೊಸ ನಿರ್ಮಾಪಕರು ಬಂದಿದ್ದಾರೆ. ... ಕೇಳಿದಷ್ಟು ಸಂಭಾವನೆ ಕೊಡಲು ಇವರು ಒಪ್ಪದ ಕಾರಣ ಹರಿಪ್ರಿಯ... ಕೈಕೊಡುವ ಸಾಧ್ಯತೆ ಇದೆ.

ಹರಿಪ್ರಿಯಾ ಒಪ್ಪದೇ ಇದ್ದರೆ ಮತ್ತೆ ರಾಗಿಣಿಯನ್ನೇ ಒಪ್ಪಿಸುವುದಾಗಿ ನಿ... ಹೇಳಿಕೊಂಡಿದ್ದಾರೆ. ಈ ಮೊದಲು ರಾಗಿಣಿ ಅವರನ್ನೇ ಪಾತ್ರಕ್ಕೆ ಕೇ... ಹೇಳಿಕೊಳ್ಳುವಂಥ ನಟಿ ರಾಗಿಣಿ ಅಲ್ಲ ಅನ್ನುವ ಕಾರಣಕ್ಕೆ ನಿರ್ದೇಶಕ... ಸರಿದಿದ್ದರು. ಈಗ ರಾಗಿಣಿಯೇ ಗತಿ ಅನ್ನುವ ವಾತಾವರಣ ನಿರ್ಮಾಣ...

ಮಾಸ್ಟರ್ ಪೀಸ್ ಮುಗೀ...



ಯಶ್ ನಟನೆಯ 'ಮಾಸ್ಟರ್‌ಪೀಸ್' ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷ... ಇದೊಂದು ವಿಭಿನ್ನ ಸಿನಿಮಾ ಆಗಿರುವುದರಿಂದ ಸ್ಯಾಂಡಲ್‌ವುಡ್‌ನಲ್ಲಿ ... ಜೋರಾಗಿದೆ. ಕುಂಬಳಕಾಯಿ ಒಡೆಯಲು ಇನ್ನೂ ಹತ್ತು ದಿನ ಶೂಟಿಂಗ್ ... ಅಷ್ಟರಲ್ಲೇ 75 ಕೋಟಿಗೆ ವಿತರಣಾ ಹಕ್ಕನ್ನು ಕೇಳಲಾಗಿದೆ.


ಯಶ್ ನಟನೆಯ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಸಿನಿ... ಪ್ರದರ್ಶನ ಕಂಡಿತ್ತು, 75 ಕೋಟಿಯಷ್ಟು ವ್ಯವಹಾರ ಮಾಡಿತ್ತು. ... 'ಮಾಸ್ಟರ್‌ಪೀಸ್'ಗೆ ಈಗ ಬೆಲೆ ಬಂದಿದೆ. ಆದರೂ, ನಿರ್ಮಾಪಕರು ವಿತ... ಸದ್ಯಕ್ಕೆ ಕೊಡುವುದಿಲ್ಲ ಅಂದಿದ್ದಾರೆ.

ಈ ಚಿತ್ರದಲ್ಲಿ ಯಶ್ ವಿಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಅದ... ಸಿಂಗ್ ಪಾತ್ರವೂ ಒಂದು. ಸದ್ಯ ಬೆಂಗಳೂರಿನಲ್ಲಿ ಭಗತ್ ಸಿಂಗ್ ... ಚಿತ್ರೀಕರಿಸಲಾಗುತ್ತಿದೆ. ಹತ್ತು ದಿನಗಳ ಕಾಲ ನೈಟ್‌ಶೂಟ್ ಮಾಡುತ್ತಿದ್ದಾರ... ಮಂಜು ಮಾಂಡವ್ಯ. ಎಲ್ಲವೂ ಅಂದುಕೊಂಡಂತೆ ಆದರೆ ನವೆಂಬರ್‌ನ... ಬಿಡುಗಡೆ ಆಗಲಿದೆ. ಮುಂದಿನ ತಿಂಗಳು ಆಡಿಯೋ ರಿಲೀಸ್ ಮಾಡ... ಮಾಡಿದ್ದಾರೆ ನಿರ್ಮಾಪಕರು.

ಗುಮ್ಮನಾಗಿರುವ 'ಐರಾವತ'

ದರ್ಶನ್ ಮುಖ್ಯ ಭೂಮಿಕೆಯ 'ಐರಾವತ' ಸಿನಿಮಾ ಚಿತ್ರೋದ್ಯಮದ ಪಾಲಿಗೆ ಗುಮ್ಮನಂತಾಗಿದೆ. ಆಗಸ್ಟ್‌ನಲ್ಲೇ 'ಐರಾವತ' ಚಿತ್ರ ಬಿಡುಗಡೆ ಆಗಲಿದೆ ಎನ್ನುವ ಸುದ್ದಿ ಇತ್ತು, ಅದು ಆಗಲಿಲ್ಲ, ಅಲ್ಲಿಂದ ಈತನಕ ಬಿಡುಗಡೆಯ ದಿನಾಂಕ ಮುಂದೆ ಹೋಗುತ್ತಲೇ ಇದೆ. ಹೀಗಾಗಿ ಹಲವು ನಿರ್ದೇಶಕರು ಆತಂಕಕ್ಕೀಡಾಗಿದ್ದಾರೆ. ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಕಾಯುತ್ತಿದ್ದಾರೆ. ಸಾಮಾನ್ಯವಾಗಿ ಸ್ಟಾರ್ ನಟರ ಚಿತ್ರಗಳು ಬಿಡುಗಡೆ ಆಗುವಾಗ ಇತರ ನಾಯಕರ ಚಿತ್ರಗಳಿಗೆ ಥಿಯೇಟರ್ ಸಿಗುವುದಿಲ್ಲ, ಸಿಕ್ಕರೂ, ಅಲ್ಲಿ ಹಣ ಹುಟ್ಟುವುದಿಲ್ಲ, ಹೀಗಾಗಿ 'ಐರಾವತ' ಚಿತ್ರದ ಬಿಡುಗಡೆಗಾಗಿ 25ಕ್ಕೂ ಹೆಚ್ಚು ಸಿನಿಮಾಗಳು ಕಾಯುತ್ತಿವೆ. ಈ ವಿಷಯ 'ಐರಾವತ' ಚಿತ್ರದ ನಿರ್ಮಾಪಕರಿಗೆ ಗೊತ್ತಿದ್ದರೂ ಇತರ ನಿರ್ಮಾಪಕರ ಗೋಳನ್ನು ನೋಡುತ್ತಲೇ ಮಜಾ ತೆಗೆದುಕೊಳ್ಳುತ್ತಿದ್ದಾರೆ.


"ಯಾವತ್ತು ಸ್ವಾಮಿ ನಿಮ್ ಸಿನಿಮಾ ಬಿಡುಗಡೆ?" ಎಂದು ಸ್ವತಃ ದರ್ಶನ್ ಕೇಳಿದರೂ ಅವರು ನಿರ್ದೇಶಕರತ್ತ ಬೊಟ್ಟು ಮಾಡಿ ತೋರಿಸುತ್ತಾರೆ. ನಿರ್ದೇಶಕರಿಂದ ಉತ್ತರವಿಲ್ಲ, ಸಿನಿಮಾಗೂ ನನಗೂ ಸಂಬಂಧವೇ ಇಲ್ಲ ಅನ್ನುವಂತಿದೆ ನಿರ್ಮಾಪಕರ ವರ್ತನೆ. ಹೀಗಾಗಿ ಇತರ ನಿರ್ಮಾಪಕರು ಭಯದಲ್ಲೇ ಬದುಕುವಂತಾಗಿದೆ.



ಉಪೇಂದ್ರನಿಗೆ ತಿರುಮಂತ್ರ

'ಉಪ್ಪಿ 2' ಬಾಕ್ಸ್ ಆಫೀಸ್‌ನ್ನೇ ಕೊಳ್ಳೆ ಹೊಡೆಯಲಿದೆ ಎಂಬ ನಂಬಿಕೆ ಉಪೇಂದ್ರಗಿತ್ತು, ಮೊದಲ ಮೂರು ದಿನದಲ್ಲೇ ಅದು 25 ಕೋಟಿ ದಾಟಿದೆ ಎಂಬ ಸುದ್ದಿಯೂ ಹೊರಬಿತ್ತು. ಸಿನಿಮಾದ ಅಸಲಿ ಬಣ್ಣ ಈಗ ಬಯಲಾಗಿದೆ. ವಿತರಕರೊಬ್ಬರ ಪ್ರಕಾರ ಈವರೆಗೂ ಅದು 25 ಕೋಟಿ ಹಣ ಗಳಿಸಿಲ್ಲವಂತೆ. ಅಲ್ಲದೇ ಸಿನಿಮಾ ಐವತ್ತು ದಿನ ಕಂಡರೂ, ನೋ ಪ್ರಾಫಿಟ್, ನೋ ಲಾಸ್. ಉಪೇಂದ್ರ ಉಲ್ಟಾ ನೇತಾಡಿದರೂ, ಆ ಸರ್ಕಸ್ ವರ್ಕ್‌ಔಟ್ ಆಗಿಲ್ಲ.

ಸಿನಿಮಾದ ಮೊದಲರ್ಧ ಚೆನ್ನಾಗಿದೆ. ಆದರೆ ದ್ವಿತೀಯಾರ್ಧದಲ್ಲಿ ಸಿನಿಮಾ ಚಿತ್ರಾನ್ನ ಅನ್ನುವ ಅಭಿಪ್ರಾಯ ಕೇಳಿಬಂದಿತ್ತು. ಈ ಚಿತ್ರದ ಪಾರ್ಟ್ 3 ಮಾಡುವ ಪ್ಲಾನ್ ಉಪೇಂದ್ರ ಅವರಿಗಿದೆ ಎಂದೂ ಹೇಳಲಾಗಿತ್ತು, ಆದರೆ ಮೂರಕ್ಕೆ ಈಗಲೇ ತಿಲಾಂಜಲಿ ಹಾಡಲಿದ್ದಾರೆ ಉಪೇಂದ್ರ. ಎರಡನೇ ಭಾಗಕ್ಕೇ ಪ್ರೇಕ್ಷಕ ಗುನ್ನಾ ಕೊಟ್ಟಿದ್ದರಿಂದ, ಮೂರನೇ ಭಾಗಕ್ಕೆ ಕತ್ತರಿ ಬಿದ್ದಿದೆ. ಅಲ್ಲದೇ ತೆಲುಗಿನಲ್ಲಿ ಬಿಡುಗಡೆ ಮಾಡಲು ಉಪೇಂದ್ರ ಹಿಂದೇಟು ಹಾಕುತ್ತಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com